ನೇಮಿಚಂದ್ರರ ಕಥಾಸಾಹಿತ್ಯ : ಒಂದು ಅಧ್ಯಯನ

(ಎಂ.ಫಿಲ್ ಪದವಿಯ ಆಂಶಿಕ ಆವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಸಂಪ್ರಬಂಧ)

ಸಂಶೋಧಕರು
ರಾಜೇಶ್ವರಿ ಎಂ.

ಮಾರ್ಗದರ್ಶಕರು
ಡಾ. ಎ. ಸುಬ್ಬಣ್ಣ ರೈ
ಪ್ರಾಧ್ಯಾಪಕರು

334

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೮

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

Shree Mahantesh
XEROX & BOOK BINDING
Near S.B.I., K.C.D. Road,
DWD, Ph : 0836 - 2447880

334

AKSHARA GRANTHALAYA

ACC.NO. 129972

334

334

ನೇಮಿಚಂದ್ರರ ಕಥಾಸಾಹಿತ್ಯ : ಒಂದು ಅಧ್ಯಯನ

(ಎಂ.ಫಿಲ್.ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ)

ಸಂಶೋಧಕರು

ರಾಜೇಶ್ವರಿ ಎಂ.

ಕನ್ನಡ ವಿಶ್ವವಿದ್ಯಾಲಯ, ಹಂಪಿ
ಅಧ್ಯಯನಾಂಗ

ಮಾರ್ಗದರ್ಶಕರು

ಡಾ. ಎ. ಸುಬ್ಬಣ್ಣ ರೈ

ಪ್ರಾಧ್ಯಾಪಕರು

ಸಿರಿಗನ್ನಡ ಗ್ರಂಥಾಲಯ.
ಕನ್ನಡ ವಿಶ್ವವಿದ್ಯಾಲಯ. ಹಂಪಿ.

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೮

8K0.9
RAJ
129972

ಸಂಶೋಧಕರ ಘೋಷಣಾ ಪತ್ರ

ನೇಮಿಚಂದ್ರರ ಕಥಾಸಾಹಿತ್ಯ : ಒಂದು ಅಧ್ಯಯನ ಎಂಬ ಈ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಎಂ.ಫಿಲ್ ಪದವಿಯ ಆಂಶಿಕ ಅವಶ್ಯಕತೆಗಾಗಿ ಡಾ. ಎ. ಸುಬ್ಬಣ್ಣ ರೈ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ನನ್ನ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

M. Rajeswari

(ರಾಜೇಶ್ವರಿ ಎಂ.)
ಸಂಶೋಧಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : ೧೫.೧೦.೨೦೦೮.
ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರ ಪ್ರಮಾಣ ಪತ್ರ

ರಾಜೇಶ್ವರಿ ಎಂ. ಅವರು ನೇಮಿಚಂದ್ರರ ಕಥಾಸಾಹಿತ್ಯ : ಒಂದು ಅಧ್ಯಯನ ಎಂಬ ಈ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಎಂ.ಫಿಲ್ ಪದವಿಯ ಆಂಶಿಕ ಅವಶ್ಯಕತೆಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಸಂಪ್ರಬಂಧವು ಅವರ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 17.10.2005
ಸ್ಥಳ : ವಿದ್ಯಾರಣ್ಯ

(ಡಾ. ಎ. ಸುಬ್ಬಣ್ಣ ರೈ)
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ಅಧ್ಯಾಯ-೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಭಾರತದ ತುಂಬೆಲ್ಲ ಸಾಮಾಜಿಕ, ರಾಜಕೀಯ, ಆರ್ಥಿಕ ಬದಲಾವಣೆಗಳುಂಟಾದವು. ಇದರ ಪರಿಣಾಮ ಮಹಿಳೆಯರ ಸ್ಥಾನಮಾನದ ಮೇಲೆಯೂ ಆಯಿತು. ಎಲ್ಲಾ ಅವಕಾಶಗಳಿಂದ ವಂಚಿತರಾಗಿ ಕೇವಲ ಮನೆಗೆ ಸೀಮಿತವಾದ ಮಹಿಳೆಯರು ಗಾಂಧೀಜಿಯವರ ಕರೆಯ ಮೇರೆಗೆ ಸ್ವಾತಂತ್ರ್ಯಾಂದೋಲನದಲ್ಲಿಯೂ ಭಾಗವಹಿಸಿದರು. ದೇಶದ ತುಂಬೆಲ್ಲ ಮಹಿಳೆಯರಿಗೆ ಶಿಕ್ಷಣದ ಅವಶ್ಯಕತೆಯ ಪ್ರಚಾರ ಭರದಿಂದ ನಡೆಯಿತು. ಅವರಿಗೂ ಶಿಕ್ಷಣ ಮೂಲಭೂತ ಹಕ್ಕಾಯಿತು.

ಈ ಚಾರಿತ್ರಿಕ ಪರಿವರ್ತನೆಯ ಗಾಳಿ ಕರ್ನಾಟಕದಲ್ಲಿಯೂ ವ್ಯಾಪಿಸಿ ಕನ್ನಡ ಸಾಹಿತ್ಯದಲ್ಲಿ ಹಲವು ಮಹತ್ತರ ಬದಲಾವಣೆಗಳಾದವು. ಹೊಸಗನ್ನಡ ಗದ್ಯರಚನೆ ಆರಂಭವಾಗಿ ಕತೆ, ಕಾದಂಬರಿ, ಕವಿತೆ, ಪ್ರಬಂಧ ಮೊದಲಾದ ರೂಪಗಳು ಮೈದಾಳಿ ಸಾಹಿತ್ಯಿಕ ನೆಲೆ ಹದಗೊಂಡಿತು. ಹೀಗೆ ಹದಗೊಂಡ ಆಧುನಿಕ ಕನ್ನಡ ಸಾಹಿತ್ಯಲೋಕದಲ್ಲಿ ಮಹಿಳೆಯರ ಪ್ರವೇಶ ಮೊದಮೊದಲು ಕೈ ಬೆರಳೆಣಿಕೆಯ ಮೇಲೆ ನಿಂತಿದ್ದರೂ ಕ್ರಮೇಣ ಅದು ಅಗಣಿತವಾಗಿ ಬೆಳೆಯತೊಡಗಿತು. ಮಹಿಳೆ ಸಾಹಿತ್ಯಕ್ಷೇತ್ರ ಪ್ರವೇಶ ಮಾಡುವ ಕಾಲಕ್ಕಾಗಲೇ ಕನ್ನಡದಲ್ಲಿ ಕಾದಂಬರಿ, ಸಣ್ಣಕತೆ, ಕಾವ್ಯ, ಪ್ರಬಂಧ, ನಾಟಕ ಮೊದಲಾದ ಪ್ರಕಾರಗಳು ಸ್ಪಷ್ಟವಾದ ಆಕಾರವನ್ನು ಪಡೆದುಕೊಂಡಿದ್ದವು.

ಹಲವಾರು ಪ್ರಭಾವಗಳಿಂದ ಪ್ರೇರಿತಗೊಂಡು, ಕಾದಂಬರಿಯ ಅನಂತ ಸಾಧ್ಯತೆಗಳನ್ನು ರೂಢಿಸಿಕೊಂಡು ವಿವಿಧ ಆಶಯಗಳನ್ನು ಒಳಗೊಂಡ ಮಹಿಳಾ ಕಾದಂಬರಿಗಳು ರಚನೆಗೊಂಡವು. ಎಚ್.ವಿ.ಸಾವಿತ್ರಮ್ಮ, ಎಂ.ಕೆ.ಇಂದಿರಾ, ವಾಣಿ, ತ್ರಿವೇಣಿ, ಜಯಲಕ್ಷ್ಮಿ ಶ್ರೀನಿವಾಸನ್, ತಿರುಮಲಾಂಬ ಮೊದಲಾದವರು ಮೊದಲ ತಲೆಮಾರಿನ ಬರಹಗಾರ್ತಿಯರಾದರೆ ಅರವತ್ತರ ದಶಕದಲ್ಲಿ ನಮಗೆ ಕಾಣಿಸುವ ಲೇಖಕಿಯರಲ್ಲಿ ಆರ್ಯಾಂಬ, ಪ್ರೇಮಾಭಟ್, ಜಿ.ಸಿ.ಮಂಗಳಾ, ಅನಸೂಯ ರಾಮರೆಡ್ಡಿ, ಗೀತಾ ಕುಲಕರ್ಣಿ, ಪುಷ್ಪ ಎನ್.ರಾವ್, ಮಂಗಳಾ ಸತ್ಯನ್ ಇವರು ಪ್ರಮುಖರಾಗಿದ್ದಾರೆ. ಎಪ್ಪತ್ತರ ದಶಕದ ಸಾಹಿತ್ಯದ ಮಹತ್ವದ ಲೇಖಕಿಯರಾಗಿ ಗೋಚರಿಸಿದವರು ಸಿ.ಎಸ್.ಜಯಲಕ್ಷ್ಮೀದೇವಿ ಮತ್ತು ವೀಣಾಶಾಂತೇಶ್ವರ, ಇವರ ನಂತರದ ಸ್ಥಾನ ಎ.ಪಿ.ಮಾಲತಿ, ಗೀತಾನಾಗಭೂಷಣ, ನಿರುಪಮಾ ಮತ್ತು ವೈ.ಕೆ.ಸಂಧ್ಯಾಶರ್ಮ ಅವರಿಗೆ ಸಲ್ಲುತ್ತದೆ. ಎಂಬತ್ತರ ದಶಕದಲ್ಲಿ ವಿನೂತನವಾದ ಸಂವೇದನೆಗಳು

ಮಹಿಳಾ ಸಾಹಿತ್ಯದ ಮೂಲಕ ಕನ್ನಡ ಸಾಹಿತ್ಯ ಲೋಕವನ್ನು ಪ್ರವೇಶಿಸಿದವು. ಈ ದಶಕ ಮಹಿಳಾ ಸಾಹಿತ್ಯದ ಪಾಲಿಗೆ ವೈಶಿಷ್ಟ್ಯಪೂರ್ಣವಾದ ಕಾಲಘಟ್ಟವಾಗಿದೆ. ನಮ್ಮ ಲೇಖಕಿಯರಿಂದ ಪರಂಪರಾಗತ ಮೌಲ್ಯಗಳನ್ನು ಪ್ರಶ್ನಿಸುವ ಸೂಕ್ಷ್ಮವೂ, ರೂಕ್ಷವೂ ಆದ ಬದುಕಿನ ಅನಂತ ಸಾಧ್ಯತೆಗಳನ್ನು ತೆರೆದಿಡುವ ಪ್ರಯತ್ನಗಳು ನಡೆದವು. ಹೀಗೆ ಸಾಹಿತ್ಯದಲ್ಲಿ ಅನೇಕ ಪ್ರಕಾರದ ಸಂವೇದನಾಪೂರ್ಣ ಸಂಚಲನವನ್ನು ಉಂಟು ಮಾಡಿದವರಲ್ಲಿ ಸಾರಾ ಅಬೂಬಕರ್, ವೈದೇಹಿ, ಬಿ.ಟಿ.ಲಲಿತಾನಾಯಕರು ಸೇರಿದಂತೆ ಹಲವರದು ಪ್ರಮುಖ ಪಾತ್ರವಿದೆ.

ಆಧುನಿಕ ಕಾಲದಲ್ಲಿ ಮೊದಲು ಕವಿತೆ ಬರೆಯಲು ಆರಂಭಿಸಿದ ಮಹಿಳೆಯರೆಂದರೆ ತಿರುಮಲೆ ರಾಜಮ್ಮ, ತ್ರಿಪದಿಯಲ್ಲಿ ದೀರ್ಘ ಕಾವ್ಯ ರಚನೆ ಮಾಡಿದ ಜಯದೇವಿ ತಾಯಿ ಲಿಗಾಡೆಯವರ ಹೆಸರು ಕಾವ್ಯ ಕ್ಷೇತ್ರದಲ್ಲೊಂದು ಮೈಲಿಗಲ್ಲು. ಸಂಚಿಹೊನ್ನಮ್ಮಳ ತರುವಾಯ ಕಾವ್ಯ ಕ್ಷೇತ್ರದಲ್ಲಿ ಇವರ ಹೆಸರು ಪ್ರಮುಖವಾದುದು. ಪಿ.ವಿಜಯಾ, ಕಮಲಾಹೆಮ್ಮಿಗೆ, ಮಾಲತಿಪಟ್ಟಣಶೆಟ್ಟಿಯಂಥ ಕವಯಿತ್ರಿಯರು ತಮ್ಮ ಕಾವ್ಯದ ಮೂಲಕ ಸಂಸ್ಕೃತಿಯ ಹೆಸರಿನಲ್ಲಿ ಧ್ವನಿ ಕಳೆದುಕೊಂಡ ಮಹಿಳೆಯ ಬದುಕಿನ ಬಗ್ಗೆ ಅರ್ಥಪೂರ್ಣವಾಗಿ ಧ್ವನಿ ಎತ್ತಿದ್ದಾರೆ. ದಲಿತಬಂಡಾಯ ಬರಹಗಾರ್ತಿಯರೆಂದೇ ಕರೆಯಿಸಿಕೊಂಡ ಬಿ.ಟಿ.ಲಲಿತನಾಯಕರ ಕವನಗಳಲ್ಲಿ ಕೆಳವರ್ಗದ ನೋವಿನ ಹಲವು ಪದರುಗಳನ್ನು ಬಿಚ್ಚಿ ತೋರಿಸಲಾಗಿದೆ.

ರೂಪಕತ್ರಯಗಳೆಂದು ಖ್ಯಾತವಾದ ಭಾರತಿ (ತಿರುಮಲೆ ರಾಜಮ್ಮ) ಅವರ 'ತೇಜಸ್ವಿನಿ', 'ಮಹಾಸತಿ', 'ವಾತ್ಸಲ್ಯ ತರಂಗಲೀಲೆ' ಕೃತಿಗಳು ನಾಟಕ ಸಾಹಿತ್ಯಕ್ಕೆ ಮಹತ್ವದ ಕೊಡುಗೆಗಳಾಗಿವೆ. ಕಾಕೋಳು ಸರೋಜರಾವ್ ಅವರ 'ಬಂಜೆ', 'ಲಾಟ್ರಿ ಲಕ್ಷ್ಮೀ' ಶಕುಂತಲಾದೇವಿಯವರ 'ಮುಳ್ಳುಬೇಲಿ', ಅನುಪಮ ನಿರಂಜನರ 'ಕಲ್ಲೋಲ' ಮೊದಲಾದವುಗಳನ್ನು ಹೆಸರಿಸಬಹುದು. ಮಹಿಳೆ ನಡೆದು ಬಂದ ದಾರಿಯನ್ನು ಗಮನಿಸಿದಾಗ, ಆಯಾ ಕಾಲ ಸಂದರ್ಭಕ್ಕೆ ಅನುಗುಣವಾಗಿ ಅಭಿವ್ಯಕ್ತಿ ನೀಡುತ್ತಾ ಬಂದಿದ್ದಾಳೆ. ತನ್ನ ಅನುಭವಲೋಕ ವಿಸ್ತರಿಸಿದಂತೆ ಕತೆಗಳಲ್ಲಿ ಪಡೆನುಡಿದಿದ್ದಾಳೆ. ಐವತ್ತರ ದಶಕದಲ್ಲಿ ಕಾದಂಬರಿ, ಸಣ್ಣಕತೆಗಳನ್ನು ಬರೆಯುವ ಮಹಿಳೆಯರ ಮಹಾಪೂರವೇ ಹುಟ್ಟಿಬಂದಿದೆ. ಹೊಸ ಶಿಕ್ಷಣದಿಂದ ವಿಸ್ತರಿಸಿದ ಚಿಂತನಾ ಸಾಮರ್ಥ್ಯದಿಂದ ಆಧುನಿಕ ವಿಚಾರಗಳ, ವಿಜ್ಞಾನಗಳ ಪ್ರಭಾವದಿಂದ ಸೂಕ್ಷ್ಮ ಸಂವೇದನೆಯೊಂದಿಗೆ ಬರೆಯ ತೊಡಗಿದವರಲ್ಲಿ ತ್ರಿವೇಣಿ ಅವರ ಜೊತೆಗೆ ವಾಣಿ, ಅನುಪಮಾ ನಿರಂಜನ, ನೀಳಾದೇವಿ, ಆರ್ಯಾಂಬ ಪಟ್ಟಾಭಿ, ಸುಧಾಮೂರ್ತಿ ಮುಂತಾದ ಬಹು ಸಂಖ್ಯೆಯ ಲೇಖಕಿಯರು ಕಥಾಸಾಹಿತ್ಯದ ಸಂಖ್ಯಾ ಪ್ರಮಾಣವನ್ನು ವಿಪುಲಗೊಳಿಸಿದ್ದಾರೆ.

ನವೋದಯದ ಪ್ರಾರಂಭದ ಘಟ್ಟದಲ್ಲಿ ಸ್ತ್ರೀ ಶಿಕ್ಷಿತಳಾಗಬೇಕೆಂಬ ಆಶಯ ಮುಖ್ಯವಾಗಿತ್ತು. ಸಾಮಾಜಿಕ ಆಯಾಮ ವಿಸ್ತರಿಸಿತ್ತು. ಬಸವರಾಜ ಕಟ್ಟೀಮನಿ, ನಿರಂಜನ, ಅನಕೃ ಸಣ್ಣಕತೆಗೆ

ಸಿದ್ಧಮಾದರಿಯನ್ನು ರೂಪಿಸಿದ್ದರು. ಈ ಸಂದರ್ಭದಲ್ಲಿ ಜನಪ್ರಿಯ ಧಾಟಿಯನ್ನು ಬಳಸಿಕೊಂಡ ಲೇಖಕಿಯರಿಂದ ವಿಧವಾ ವಿವಾಹ, ಪ್ರೇಮವಿವಾಹ, ಶಿಕ್ಷಣದ ಅವಶ್ಯಕತೆ, ಮೌಢ್ಯ ಸಂಪ್ರದಾಯಗಳನ್ನು ಪ್ರಶ್ನಿಸುವ ಬಗೆಯ ಸಾಂಸಾರಿಕ ಸುಖ ದುಃಖಕ್ಕೆ ಒತ್ತು ಬಿದ್ದು ಈ ಜನಪ್ರಿಯ ಕತೆಗಳ ಮಾಲೆಯೇ ಹರಿದು ಬಂದಿತು. ೧೯೬೦-೭೦ರ ದಶಕದಲ್ಲಿ ಮಹಿಳಾ ಸಂವೇದನೆ ಸೂಕ್ಷ್ಮಗೊಂಡ ಕಾಲ. ಪ್ರಗತಿಶೀಲ ಸಾಹಿತ್ಯ ಘಟ್ಟದಲ್ಲಿ ಸಣ್ಣಕತೆ ಕೊಂಬೆ ರೆಂಬೆಗಳಾಗಿ ಟಿಸಿಲೊಡೆದು ವಿಸ್ತಾರವಾಗಿ ಬೆಳೆದಿತ್ತು. ವೀಣಾ ಶಾಂತೇಶ್ವರ, ರಾಜಲಕ್ಷ್ಮೀ ಎನ್.ರಾವ್ ಮಹಿಳಾ ಸಂವೇದನೆಯನ್ನು ವೈಚಾರಿಕ ಸೂಕ್ಷ್ಮತೆಯೊಂದಿಗೆ ಬಿಂಬಿಸುವ ಕತೆಗಳನ್ನು ರಚಿಸಿದರು.

೧೯೭೦ರ ನಂತರದ ದಶಕವು ದಲಿತ, ಮುಸ್ಲಿಂ ಮಹಿಳಾ ಸಂವೇದನೆಗಳು ಸೂಕ್ಷ್ಮಗೊಂಡ ಕಾಲವಾಗಿತ್ತು. ಸಾರಾ ಅಬೂಬಕರ್, ಬಿ.ಟಿ.ಲಲಿತಾನಾಯಕ, ವೈದೇಹಿ, ನೇಮಿಚಂದ್ರ, ಕಮಲಾಹೆಮ್ಮಿಗೆ ಮುಂತಾದವರು ಹಲವಾರು ಕಥಾ ಸಂಕಲನಗಳನ್ನು ಪ್ರಕಟಿಸಿ ಕತೆಗಳ ಮೂಲಕ ಸಾಂಸ್ಕೃತಿಕ, ಕೌಟುಂಬಿಕ, ಆರ್ಥಿಕ, ಸಾಮಾಜಿಕ ವಲಯಗಳ ಕೆಲವು ಮೂಲಭೂತ ವಿಚಾರ ಹಾಗೂ ನಂಬಿಕೆಗಳನ್ನು ಪ್ರಶ್ನಿಸತೊಡಗಿದರು. ವೈದೇಹಿ, ನೇಮಿಚಂದ್ರ ಇವರು ಹೆಣ್ಣಿನ ಮನಸ್ಸಿನ ಒಳತೋಟಿಗಳನ್ನು ಅನಾವರಣಗೊಳಿಸುವ ಸ್ತ್ರೀವಾದಿ ನೆಲೆಯಲ್ಲಿ ಮಹಿಳೆಯನ್ನು ಚಿತ್ರಿಸುವ ದೃಷ್ಟಿಯಲ್ಲಿ ಸಮಾನಗುಣ ಹೊಂದಿದ್ದಾರೆ. ನೇಮಿಚಂದ್ರರು 'ನಮ್ಮ ಕನಸುಗಳಲ್ಲಿ ನೀವಿದ್ದೀರಿ', 'ಮತ್ತೆ ಬರೆದ ಕತೆಗಳು', 'ಕಳೆಯಬೇಕಿದೆ', 'ನಮ್ಮ ಜೊತೆಯಲಿ ಒಂದು ಶ್ಯಾಮಲ ಸಂಜೆ' ಕಥಾ ಸಂಕಲನಗಳನ್ನು ಹೊರತಂದಿದ್ದಾರೆ. ವೀಣಾ ಮತ್ತು ನೇಮಿಚಂದ್ರರ ಕತೆಗಳಲ್ಲಿ ಸಮಾನ ಲಕ್ಷಣಗಳಿವೆ. ವೀಣಾ ಅವರ ಕತೆಗಳಲ್ಲಿ ಅನುಭವದ ಜೊತೆಗೆ ವೈಚಾರಿಕತೆಯನ್ನು ಬೆರೆಸುವ ಪ್ರಯತ್ನ ಮಾಡಿದರೆ ನೇಮಿಚಂದ್ರ ವಿಚಾರವಂತಿಕೆಯ ತರ್ಕದ ಜೊತೆಗೆ ಸ್ವಂತಿಕೆಯನ್ನು ಬೆಸೆಯುವ ಪ್ರಯತ್ನದಲ್ಲಿದ್ದಾರೆ. ನೇಮಿಚಂದ್ರರ ಬಹುಪಾಲು ಕತೆಗಳಲ್ಲಿ ಸಾಂಪ್ರದಾಯಿಕ ಹೆಣ್ತನವನ್ನು ಮೀರುವ ಪ್ರಯತ್ನವಿದೆ. 'ನಮ್ಮ ಕನಸುಗಳಲ್ಲಿ ನೀವಿದ್ದೀರಿ' ಕತೆಯಲ್ಲಿ ಸಮಾಜದ ಒಪ್ಪಿತ ಮೌಲ್ಯಗಳಾದ ಪುರುಷ ಪ್ರಧಾನತೆಯನ್ನು ಅಲ್ಲಗಳೆಯುವುದರತ್ತ ಒತ್ತು ಕೊಡುತ್ತಾರೆ. ನೇಮಿಚಂದ್ರರು ಅನುಭವಗಳಿಗೆ ತಕ್ಕದಾದ ಅಭಿವ್ಯಕ್ತಿಯನ್ನು ಯಶಸ್ವಿಯಾಗಿ ಕೊಡಬಲ್ಲರು. ಹೆಣ್ಣು ತನ್ನತನವನ್ನು ಶೋಧಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ನೇಮಿಚಂದ್ರರ ಭಾಷಾಬಳಕೆ ಪೂರಕವಾಗಿ ದುಡಿಯುತ್ತದೆ. ಇವರು ವೈದೇಹಿ ನಂತರ ಕನ್ನಡದ ಮಹತ್ವದ ಸ್ತ್ರೀವಾದಿ ಲೇಖಕಿಯಾಗಿದ್ದಾರೆ. ಪ್ರವೃತ್ತಿಯಿಂದ ಲೇಖಕಿಯಾದ ಇವರು "ನೋವಿಗದ್ದಿದ ಕುಂಚ". 'ಥಾಮಸ್ ಅಲ್ವಾ ಎಡಿಸನ್', 'ಬೆಳಕಿನೊಂದು ಕಿರಣ ಮೇರಿ ಕ್ಯೂರಿ' ಜೀವನ ಚರಿತ್ರೆಗಳನ್ನು ಬರೆದಿದ್ದಾರೆ. ಮಹಿಳಾ ಬರಹಲೋಕದಲ್ಲಿ ವಿಶಿಷ್ಟವಾಗಿ ಗುರುತಿಸಿಕೊಂಡಿರುವ ನೇಮಿಚಂದ್ರರ ಸಾಹಿತ್ಯ ಮಹತ್ವದ್ದಾಗಿದೆ. ಹಾಗಾಗಿ ಅವರ ಕೃತಿಗಳ ಕುರಿತಾದ ಅಧ್ಯಯನವೂ ಸಹ

ಅಷ್ಟೇ ಮುಖ್ಯವಾದುದು. ಮಹಿಳಾ ಸಂಘಟನೆ, ಮಹಿಳಾಪರ ಹೋರಾಟ ಹಾಗೆಯೇ ಸ್ತ್ರೀಪರ ಕಾಳಜಿ ಕುರಿತಾಗಿ ಬರಹವನ್ನು ಕೈಗೊಂಡಿದ್ದಾರೆ. ಸ್ತ್ರೀ ಶಿಕ್ಷಣ, ಸ್ತ್ರೀಯರ ಸ್ಥಾನಮಾನ, ವೃತ್ತಿ, ಸ್ತ್ರೀ ಸ್ವಾತಂತ್ರ್ಯ ಇತ್ಯಾದಿ ವಿಷಯಗಳನ್ನು ಕೇಂದ್ರವಾಗಿಟ್ಟುಕೊಂಡು ಕತೆಗಳನ್ನು ಬರೆದಿದ್ದಾರೆ.

ಕನ್ನಡದ ಪ್ರಮುಖ ಮಹಿಳಾ ಬರಹಗಾರ್ತಿಯಾಗಿರುವ ನೇಮಿಚಂದ್ರರ ಸಾಹಿತ್ಯದ ಕುರಿತು ಇದುವರೆಗೆ ಅಲ್ಲಲ್ಲಿ ಬಿಡಿ ಅಧ್ಯಯನಗಳು ನಡೆದಿವೆ. ವಿಶ್ವವಿದ್ಯಾಲಯಗಳ ಪದವಿ ಸಂಶೋಧನೆಗಳಲ್ಲಿ ಅವರ ಕತೆಗಳ ಕುರಿತು ಅಷ್ಟಿಷ್ಟು ಪ್ರಸ್ತಾಪಿಸಲಾಗಿದೆ. ಆದರೆ ಅವರ ಸಾಹಿತ್ಯ ಕುರಿತಾದ ಪ್ರತ್ಯೇಕ ಅಥವಾ ಸಮಗ್ರ ಅಧ್ಯಯನಗಳು ಇದುವರೆಗೆ ನಡೆದಂತಿಲ್ಲ. ಈ ಅಧ್ಯಯನವು ಕೆಲವೊಂದು ಮಿತಿಯನ್ನು ಒಳಗೊಂಡಿದೆ. ನೇಮಿಚಂದ್ರ ಅವರು ಸಣ್ಣಕತೆಯಲ್ಲದೆ ಇತರ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದ್ದಾರೆ. ಆದರೆ ಇಲ್ಲಿ ಲೇಖಕಿಯ ಸಣ್ಣ ಕತೆಗಳನ್ನು ದೀರ್ಘ ಅಧ್ಯಯನಕ್ಕೆ ಒಳಪಡಿಸಿ, ಇತರ ಕೃತಿಗಳ ಸ್ಥೂಲ ಪರಿಚಯವನ್ನಷ್ಟೇ ನೀಡಲಾಗಿದೆ. ಅಲ್ಲಲ್ಲಿ ಪ್ರಾಸಂಗಿಕವಾಗಿ ಸಮಕಾಲೀನ ಲೇಖಕಿಯರ ಕುರಿತಾಗಿಯೂ ಪ್ರಸ್ತಾಪಿಸಲಾಗಿದೆ. ಸೀಮಿತ ಅವಧಿಯೊಳಗಡೆ ಅಧ್ಯಯನವನ್ನು ಪೂರ್ಣಗೊಳಿಸುವ ಅನಿವಾರ್ಯತೆ ಇದ್ದುದರಿಂದಲೂ, ಸಣ್ಣಕತೆಯು ನೇಮಿಚಂದ್ರ ಅವರ ಸೃಜನಶೀಲತೆಯ ಪ್ರಮುಖ ಅಭಿವ್ಯಕ್ತಿ ಮಾಧ್ಯಮವಾಗಿರುವುದರಿಂದಲೂ ಈ ಮಿತಿಯನ್ನು ಕಲ್ಪಿಸಿಕೊಳ್ಳಲಾಗಿದೆ.

ಅಧ್ಯಾಯ-೨

ಪ್ರಸ್ತಾವನೆ-ವಿಷಯ ಪ್ರವೇಶ

೨.೧. ನೇಮಿಚಂದ್ರರ ಜೀವನ ಮತ್ತು ಸಾಹಿತ್ಯದ ಸ್ಥೂಲ ನೋಟ

ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಸ್ತ್ರೀವಾದಿ ಬರಹಗಾರರಾದ ನೇಮಿಚಂದ್ರರು ಜುಲೈ ೧೬, ೧೯೫೯ರಲ್ಲಿ ಚಿತ್ರದುರ್ಗದಲ್ಲಿ ಜನಿಸಿದರು. ಇವರ ತಂದೆ ಕನ್ನಡ ಪ್ರಾಧ್ಯಾಪಕರಾಗಿದ್ದ ಜಿ. ಗುಂಡಣ್ಣನವರು, ತಾಯಿ ತಿಮ್ಮಕ್ಕ. ಕುಟುಂಬದ ಶೈಕ್ಷಣಿಕ ವಾತಾವರಣದಿಂದಾಗಿ ಸಾಹಿತ್ಯದಲ್ಲಿ ಸದಭಿರುಚಿ ಮೂಡಿತು. ಇವರು ವೃತ್ತಿಯಿಂದ ಇಂಜಿನಿಯರ್ ಆಗಿದ್ದರೂ ಪ್ರವೃತ್ತಿಯಿಂದ ಸೃಜನಶೀಲ ಲೇಖಕಿಯಾಗಿದ್ದಾರೆ. ಪ್ರಸ್ತುತ ಬೆಂಗಳೂರಿನ ಎಚ್‌ಎಎಲ್‌ನಲ್ಲಿ ಡಿಸೈನ್ ಇಂಜಿನಿಯರ್ ಆಗಿರುವ ನೇಮಿಚಂದ್ರ ಅವರು ಹಲವು ಪ್ರಕಾರದ ಸಾಹಿತ್ಯದ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕತೆ, ಕಾದಂಬರಿ ಪ್ರವಾಸಕಥನ, ಜೀವನಚರಿತ್ರೆ, ಅನುವಾದ ಇತ್ಯಾದಿ ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿದ್ದಾರೆ. ಒಟ್ಟಾರೆ ಅವರ ಸಾಹಿತ್ಯಿಕ ಜೀವನದ ಬಗ್ಗೆ ಇಲ್ಲಿ ಅವಲೋಕಿಸಲಾಗಿದೆ.

ಮಹಿಳಾ ದೃಷ್ಟಿಕೋನದ ಹಿನ್ನೆಲೆಯಲ್ಲಿ ಬರವಣಿಗೆಯನ್ನು ಕೈಗೊಂಡಿರುವ ನೇಮಿಚಂದ್ರ ಮೂರು ಕಥಾಸಂಕಲನಗಳನ್ನು ಹೊರತಂದಿದ್ದಾರೆ. "ನಮ್ಮ ಕನಸುಗಳಲ್ಲಿ ನೀವಿದ್ದೀರಿ", "ಮತ್ತೆ ಬರೆದ ಕತೆಗಳು" "ಕಳೆಯಬೇಕಿದೆ ನಿಮ್ಮ ಜೊತೆಯಲಿ ಒಂದು ಶ್ಯಾಮಲ ಸಂಜೆ" ಹಾಗೂ "ಇಲ್ಲಿಯವರೆಗಿನ ನೇಮಿಚಂದ್ರರ ಕತೆಗಳು" ಸಂಕಲನ ಅವರ ಸಮಗ್ರ ಕತೆಗಳನ್ನು ಒಳಗೊಂಡಿದೆ. "ಬೆಳಗೆರೆ ಜಾನಕಮ್ಮನವರ ಬದುಕು ಬರಹ" (ಸಂ) "ನೋವಿಗದ್ದಿದ ಕುಂಚ" (ಪ್ರಸಿದ್ಧ ಚಿತ್ರಕಾರ ವ್ಯಾನ್‌ಗೋ ಜೀವನಚರಿತ್ರೆ) "ಬೆಳಕಿನೊಂದು ಕಿರಣ ಮೇರಿ ಕ್ಯೂರಿ" ಹಾಗೂ "ಬೆಳಕು ತಂದ ಜೀವ" ಡಾ. ಈಡಾ ಸ್ಕೋಫಿಯಾ ಸ್ಕಡರ್ "ಥಾಮಸ್ ಅಲ್ವಾ ಎಡಿಸನ್" ಮತ್ತಿತರ ಜೀವನ ಚರಿತ್ರೆಗಳನ್ನು ರಚಿಸಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳೆಯರ ಬದುಕಿನ ತುರ್ತು ಹಾಗೂ ಅವರಿಗೆ ಅಂದಿನ ಪರಿಸ್ಥಿತಿಯಲ್ಲಿ ಎದುರಾದ ಸಮಸ್ಯೆಗಳನ್ನು "ನೊಬೆಲ್ ಪ್ರಶಸ್ತಿ ವಿಜೇತ ಮಹಿಳಾ ವಿಜ್ಞಾನಿಗಳು" ಕೃತಿಯಲ್ಲಿ ವಿವರವಾಗಿ ಹೇಳಿದ್ದಾರೆ. "ಒಂದು ಕನಸಿನ ಪಯಣ" ಹಾಗೂ "ಪೆರುವಿನ ಪವಿತ್ರ ಕಣಿವೆಯಲ್ಲಿ" ಎನ್ನುವ ಎರಡು ಪ್ರವಾಸ ಕಥನಗಳನ್ನು ರಚಿಸಿದ್ದಾರೆ. ಯುರೋಪ್ ಹಾಗೂ ಪೆರುವಿನ ಪ್ರವಾಸಾನುಭವಗಳ ಹಲವು ಆಯಾಮಗಳನ್ನು ಇಲ್ಲಿ ಚಿತ್ರಿಸಲಾಗಿದೆ. ಫ್ಲೇವಿಯಾ ಅವರ My story... our story ಕೃತಿಯನ್ನು ಕನ್ನಡಕ್ಕೆ ನನ್ನ ಕತೆ... ನಮ್ಮ ಕಥೆ ಹೆಸರಿನಲ್ಲಿ

ಅನುವಾದಿಸಿದ್ದಾರೆ. "ನಿಮ್ಮ ಮನೆಗೊಂದು ಕಂಪ್ಯೂಟರ್" "ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಂಪ್ಯೂಟರ್ಸ್" ಎಂಬೆರಡು ಕೃತಿಗಳನ್ನು ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ರಚಿಸಿದ್ದಾರೆ.

"ಸಾಹಿತ್ಯ ಮತ್ತು ವಿಜ್ಞಾನ"ವೆಂಬ ಅಂತರ್‌ಶಿಸ್ತೀಯ ಅಧ್ಯಯನದ ನೆಲೆಯಲ್ಲಿ ರಚಿಸಿದ್ದಾರೆ. ದುಡಿವ ದಂಪತಿಗಳ ಬದುಕನ್ನು ಕುರಿತಂತೆ "ದುಡಿವ ಹಾದಿಯಲಿ ಜೊತೆಯಾಗಿ" ಕೃತಿ ರಚಿಸಿರುವ ನೇಮಿಚಂದ್ರರು ತಮ್ಮ ಕತೆಗಳ ಹಿನ್ನೆಲೆ ಹಾಗೂ ಆಸಕ್ತಿಗಳ ಕುರಿತಂತೆ ತಮ್ಮ ಬದುಕಿನ ಅನುಭವದ ನೆಲೆಯಲ್ಲಿ "ಬದುಕು ಬದಲಿಸಬಹುದು" ಎನ್ನುವ ವಿಶಿಷ್ಟ ಪುಸ್ತಕವನ್ನು ತಂದಿದ್ದಾರೆ. "ಮಹಿಳಾ ಲೋಕ ಮತ್ತು ಮಹಿಳಾ ಅಧ್ಯಯನ" ಎನ್ನುವ ಎರಡು ಪುಸ್ತಕಗಳು ಸ್ತ್ರೀವಾದಿ ವಿಮರ್ಶಾ ಬರಹವನ್ನು ಒಳಗೊಂಡಿವೆ. ಒಟ್ಟಾರೆ ನೇಮಿಚಂದ್ರರ ಈ ಎಲ್ಲಾ ಬರಹಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಸಣ್ಣ ಕತೆ

ನೇಮಿಚಂದ್ರರು ಒಟ್ಟು ಮೂರು ಕಥಾಸಂಕಲನಗಳನ್ನು ಹೊರತಂದಿದ್ದು ಅವುಗಳ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ.

೧. ನಮ್ಮ ಕನಸುಗಳಲ್ಲಿ ನೀವಿದ್ದೀರಿ

ನೇಮಿಚಂದ್ರರ ಚೊಚ್ಚಲ ಕಥಾಸಂಕಲನವಿದು. ಈ ಸಂಕಲನವು ವಿಭಿನ್ನ ಕಥಾವಸ್ತುಗಳನ್ನು ಹೊಂದಿರುವ ೮ ಕತೆಗಳನ್ನು ಒಳಗೊಂಡಿದೆ. ಈ ಸಂಕಲನದ ಮೊದಲ ಕತೆ "ನಮ್ಮ ಕನಸುಗಳಲ್ಲಿ ನೀವಿದ್ದೀರಿ" ಕತೆಯ ನಾಯಕಿ ಕಾವ್ಯ ಗಂಡನ ನಿರ್ಭಾವದ ಬದುಕಿಗೆ ಬೇಸತ್ತು, ಗಂಡನ ಗೆಳೆಯ ಕಿರಣನ ಸಹವಾಸಕ್ಕೆ ಉತ್ಸುಕಳಾಗುತ್ತಾಳೆ. ಅಲ್ಲದೆ ಗಂಡನಿಂದ ಸ್ನೇಹಿತನ ಸಂಗಕ್ಕೆ ವರ್ಗಾಂತರ ಹೊಂದುತ್ತಾಳೆ. ಅಲ್ಲಿಯೂ ಆಕೆಯ ಮನಸ್ಸು ವಿವೇಚನೆಗೆ ಒಳಗಾಗಿ ಪುನಃ ಗಂಡನ ಬಳಿಗೆ ಸರಿಯುತ್ತಾಳೆ. ಇದೇ ರೀತಿಯ ಕಥಾ ಹಂದರವನ್ನು 'ಸಂಜೆಗಳು ಎಷ್ಟು ಸುಂದರ' ಎಂಬ ಕತೆಯೂ ಹೊಂದಿದೆ. ಹಿಂದಿನ ಕತೆಯ ಕಾವ್ಯಳ ಪಾತ್ರವನ್ನು ಈ ಕತೆಯ ಮೇಘ ನಿರ್ವಹಿಸಿದಂತಿದೆ. ಇಲ್ಲಿ ಭೂತದ ಸ್ವೀಕೃತ ಘಟಕಗಳು ಅಸಹ್ಯವಾಗುತ್ತಿರುವ ವರ್ತಮಾನದ ಕೌಟುಂಬಿಕ ಸ್ಥಿರತೆಯ ಮೇಲೆ ಆಕ್ರಮಣ ಮಾಡುತ್ತವೆ. ಇದರಿಂದ ತಪ್ಪಿಸಿಕೊಳ್ಳುವ ಏಕೈಕ ಮಾರ್ಗವೆಂದರೆ, ಕುಟುಂಬದ ಪವಿತ್ರವ್ಯೂಹದಿಂದ ಹೊರಗೆ ತನ್ನ ವ್ಯಕ್ತಿತ್ವವನ್ನು ಗುರುತಿಸಿಕೊಳ್ಳುವ ಪ್ರಯತ್ನ ಮಾಡುವುದು. 'ತ್ರಿಕೋನದಾಚೆಗೆ' ಕತೆಯು ಕುಟುಂಬದ ಪವಿತ್ರವ್ಯೂಹದಿಂದ ಹೊರಬರದಂತೆ ಲೀಲಾಳನ್ನು ತಡೆಯುತ್ತದೆ. ಗಂಡ ಯೌವ್ವನದ ಸ್ತ್ರೀಯರೊಂದಿಗೆ ನಡೆಸುವ ಒಡನಾಟವನ್ನು ಲೀಲಾ ಮೌನವಾಗಿಯೇ ವಿರೋಧಿಸುತ್ತಾಳೆ. ತನ್ನ ಸ್ಥಿರತೆಯೊಂದಿಗೆ ಪರಿಸ್ಥಿತಿಯ ಬದಲಾವಣೆ ಬಯಸುತ್ತಾಳೆ. ಈ ಸಂಕಲನದ 'ಕೆಂಪು ಕಲಕಿದ ನೀರು' ಕತೆಯು ವಿಭಿನ್ನ ಕಥಾವಸ್ತುವನ್ನು ಹೊಂದಿದೆ. ಉದ್ಯೋಗಸ್ಥ ಮಹಿಳೆಯ

ಮೇಲೆ ನಡೆಯುವ ಅತ್ಯಾಚಾರ, ಅದನ್ನು ಸರಿಪಡಿಸಲು ಸ್ನೇಹಿತನೊಬ್ಬ ಮುಂದಾಗುತ್ತಾನೆ. ಆದರೆ ಶೀಲಾ ಆತನ ನೆರವನ್ನು ನಿರಾಕರಿಸುತ್ತಾಳೆ. ಮಾನಸಿಕ ತೊಳಲಾಟಗಳಿಗೆ ಒಳಗಾಗುತ್ತಾಳೆ. ಏಕೆಂದರೆ ಮಾನಸಿಕವಾಗಿ ಆಕೆ ಆಗಲೇ ಒಬ್ಬನ ಪ್ರೀತಿಗೆ ಪಾತ್ರಳಾಗಿರುತ್ತಾಳೆ. ಆಕೆಯ ದೇಹ ಮಾತ್ರ ಆಕ್ರಮಣಕ್ಕೆ ಒಳಗಾಗಿರುತ್ತದೆ. ಹೀಗಿರುವಾಗ ಮನಸ್ಸನ್ನು ಸಹ ಛಿದ್ರಗೊಳಿಸಲು ನಾಯಕಿ ನಿರಾಕರಿಸುತ್ತಾಳೆ. ಪ್ರಸ್ತುತ ಕತೆಯಲ್ಲಿ ಬರುವ ಗಂಡುಗಳು ಸ್ತ್ರೀಪರ ಕಾಳಜಿ ಹೊಂದಿರುವಂತವು. ಏಕೆಂದರೆ ಶೀಲಾಳ ಮೇಲೆ ಅತ್ಯಾಚಾರ ನಡೆದ ವಿಷಯ ಇಬ್ಬರು ಗಂಡಸರಿಗೂ ತಿಳಿದಿದ್ದರೂ ಸಹ ಪರಿಸ್ಥಿತಿಯನ್ನು ಅರ್ಥೈಸಿಕೊಂಡು ಆಕೆಯೊಂದಿಗೆ ಸಹಜೀವನ ನಡೆಸಲು ಮುಂದಾಗುತ್ತಾರೆ. ಇದೊಂದು ರೀತಿಯ ಹೊಸ ಬದಲಾವಣೆಯೇ ಸರಿ. ಆದ್ದರಿಂದಲೇ ಲೇಖಕಿ ಯಾವಾಗಲೂ ಹೊಸದನ್ನು ಹೇಳಲು ಬಯಸುತ್ತಾರೆ 'ನನ್ನದಲ್ಲದ ಬದುಕಿಗಾಗಿ' ಕತೆಯು ಈ ಸಂಕಲನದ ಉತ್ತಮ ಕತೆ. ಕತೆಯ ನಾಯಕಿ ಸರೂ ಸಾಂಪ್ರದಾಯಿಕವಾಗಿ ಮದುವೆಯಾಗಿದ್ದರೂ, ಗಂಡನಿಲ್ಲದವಳು(ವಿಧವೆ). ಆದರೆ ಗಂಡನಿಂದಲೇ ಶಾಸ್ತ್ರಕ್ಕಿಂತ ಮುಂಚಿತವಾಗಿ ಬಲತ್ಕಾರಕ್ಕೆ ಒಳಗಾದವಳು. ವಿಧವೆಗೆ ಮರುವಿವಾಹದ ಅವಕಾಶ ಸಿಕ್ಕಾಗ ಆ ಕುಟುಂಬ ಎಲ್ಲಿಲ್ಲದ ಆನಂದ ಅನುಭವಿಸುತ್ತದೆ. ಆ ಕಾರಣವಾಗಿ ತನ್ನ ಕನ್ಯತ್ವವನ್ನು ಮರು ಜೋಡಿಸಿಕೊಳ್ಳಲು ನಾಯಕಿ ವೈದ್ಯಕೀಯ ಸಲಹೆ ಕೋರುತ್ತಾಳೆ. ಕೊನೆಗೆ ನಾಯಕಿ ಲೈಂಗಿಕ ರಾಜಕಾರಣವನ್ನು ವಿರೋಧಿಸಿ ಕನ್ಯತ್ವ ಎನ್ನುವುದು ಹರಿದು ಹೋಗಲಿಕ್ಕೆ ಇರುವ ಪೂರೆ. ಮತ್ತೆ ಅದಕ್ಕೆ ತೇಪೆ ಹಚ್ಚುವ ಕಾರ್ಯವನ್ನು ನಿರಾಕರಿಸುತ್ತಾಳೆ. ಮಡಿ, ಶೀಲ ಎಂಬ ಮೌಲ್ಯಗಳು ಹೆಣ್ಣಿಗೆ ಮಾತ್ರ ಸೀಮಿತವೇ ಎಂದು ಕತೆಯು ಪ್ರಶ್ನಿಸುತ್ತದೆ. ಹೆಣ್ಣಿಗೆ ಆರೋಪಿತವಾಗಿರುವ ಶೀಲದ ಪ್ರಶ್ನೆಗೆ ಮರುವಿವಾಹವಾಗಲು ಬಂದಿರುವ ಗಂಡಿಗೆ ಇಲ್ಲ ಏಕೆ? ಎಂದು ನಾಯಕಿ ಪ್ರಶ್ನಿಸುತ್ತಾಳೆ. 'ತೆರೆಗಳು ಸರಿದವು' ಕತೆಯು ಕೌಟುಂಬಿಕ ಕ್ರೌರ್ಯದ ನೆಲೆಯನ್ನು ತಿಳಿಸುತ್ತದೆ. ಅಣ್ಣ ಅತ್ತಿಗೆಯರ ಬಣ್ಣದ ಮಾತುಗಳು ತನ್ನ ಮೇಲಿನ ಮಮತೆಯದಲ್ಲ, ತಾನು ಸಂಪಾದಿಸುವ ಹಣದ ಮೇಲೆ ಎಂದು ತಿಳಿದು ಅಚಲ ಮಾನಸಿಕವಾಗಿ ತಳಮಳಕ್ಕೀಡಾಗುತ್ತಾಳೆ. ಹೆಣ್ಣಿಗೆ ಮದುವೆ ಎಂಬುದು ತನ್ನ ನಿರ್ಧಾರವಾಗುತ್ತದೆ. ಆದರೆ ಅಚಲಳ ಕುಟಂಬ ಆಕೆಯ ವಿವಾಹವನ್ನು ತಿರಸ್ಕರಿಸುತ್ತದೆ. ಹೆಣ್ಣು ಕೇವಲ ಪರರ ಸುಖ ಸಂತೋಷಕ್ಕೆ ಮಾತ್ರ ದುಡಿಯಬೇಕು, ತನ್ನ ಆಸೆ ಭಾವನೆಗಳಿಗೆ ಬೆಲೆ ಇಲ್ಲವಾಗುತ್ತದೆ. ೩೫ ವರ್ಷ ದಾಟಿರುವ ಅಚಲ ಯೌವ್ವನದಲ್ಲಿರುವಾಗ ಎಷ್ಟೇ ಮದುವೆಯ ಆಹ್ವಾನಗಳು ಬಂದರೂ ನಿರಾಕರಿಸುತ್ತಾಳೆ. ತನ್ನ ಉನ್ನತ ಶಿಕ್ಷಣ, ಉದ್ಯೋಗ ಇವೆ ಅವಳಿಗೆ ಬಾಳಿನ ಉತ್ಸಾಹವನ್ನು ತುಂಬುತ್ತವೆ. ಕೊನೆಗೆ ಮನೆಯವರ ವಿರೋಧದ ಮಧ್ಯೆ ಪ್ರಕಾಶನೊಂದಿಗೆ ವಿವಾಹವಾಗಲೂ ನಿರ್ಧಾರಿಸುತ್ತಾಳೆ. ಅಚಲ ತನ್ನ ಜೀವನದ ಮಹತ್ವದ ಘಟ್ಟವಾದ ವಿವಾಹದ ಕುರಿತಾಗಿ ತಾನೇ ಸ್ವಂತ ನಿರ್ಧಾರವನ್ನು ತೆಗೆದುಕೊಳ್ಳುತ್ತಾಳೆ. ಇದೊಂದು ರೀತಿಯ ಅಸ್ತಿತ್ವ

ಸ್ಥಾಪನೆಯ ಪ್ರತೀಕವಾಗಿ ಗೋಚರವಾಗುತ್ತದೆ. ವಿವಾಹ ಹಾಗೂ ಶಿಕ್ಷಣ ಇನ್ನಿತರ ಯಾವುದೇ ವಿಷಯಗಳಲ್ಲಿ ಹೆಣ್ಣಿಗೆ ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳುವ ಸ್ವಾತಂತ್ರ್ಯವಿಲ್ಲ. ಲೇಖಕಿ ಸದಾ ಹೊಸರೀತಿಯ ಆಲೋಚನೆಯುಳ್ಳ ಸ್ತ್ರೀಪ್ರಜ್ಞೆಯನ್ನು ಈ ಕಥೆಯಲ್ಲಿ ಪ್ರತಿಪಾದಿಸುತ್ತಾಳೆ.

೨. ಮತ್ತೆ ಬರೆದ ಕಥೆಗಳು

ಇಂದು ಸ್ತ್ರೀ ಸಂವೇದನೆಗೆ ಹೊಸ ಅರ್ಥ ತಂದುಕೊಡುತ್ತಿರುವ ಕೆಲವೇ ಕೆಲವು ಲೇಖಕಿಯರ ಸಾಲಿನಲ್ಲಿ ನೇಮಿಚಂದ್ರರು ಮುಖ್ಯವಾಗಿದ್ದಾರೆ. ಅವರ 'ಮತ್ತೆ ಬರೆದ ಕತೆಗಳು' ಒಂದು ಉತ್ತಮ ಕಥಾ ಸಂಕಲನವಾಗಿದೆ. ಇಲ್ಲಿಯ ಕತೆಗಳು ಮಧ್ಯಮ ವರ್ಗದ ಗಂಡು-ಹೆಣ್ಣಿನ ನಡುವಿನ ಸಂಬಂಧವನ್ನು ಮಾನವೀಯ ದೃಷ್ಟಿಕೋನಗಳಿಂದ ಶೋಧಿಸುತ್ತವೆ. ಮಧ್ಯಮವರ್ಗದ ಕುಟುಂಬಗಳಲ್ಲಿ ಉಂಟಾಗುವ ಸಾಂಪ್ರದಾಯಿಕ ಹಾಗೂ ಸಾಮಾಜಿಕ ಏರುಪೇರುಗಳನ್ನು ಇವರ ಕತೆಗಳು ವಸ್ತುವಾಗಿ ಸ್ವೀಕರಿಸಿವೆ.

ಅಂತರ್‌ಜಾತಿ ವಿವಾಹದಿಂದ ಮಡಿವಂತ ಕುಟುಂಬದಲ್ಲಿ ಘಟಿಸುವ ಪ್ರಸಂಗವೊಂದನ್ನು "ನೀವು ಕಾಣದ ನಾಳೆಗಳಲ್ಲಿ" ಕತೆಯಲ್ಲಿ ಅರ್ಥಪೂರ್ಣವಾಗಿ ಚಿತ್ರಿತವಾಗಿದೆ. ಮಡಿವಂತ ತಂದೆ-ತಾಯಿಯರು ಮಗನ ವಿಚ್ಛೇದನಕ್ಕೆ ಪ್ರೇರೇಪಿಸುವುದು ಕುತೂಹಲಕಾರಿಯಾಗಿದೆ. ಮಗ, ಇಲ್ಲಿ ಸ್ವಾತಂತ್ರ್ಯ ಬಯಸಿದನಾದರೂ, ಅಪ್ಪನ ಹಳೆಯ ಪದ್ಧತಿಗೆ ಜೋತು ಬಿದ್ದವನು. ಹಾಗೆಯೇ "ಹೊಸ ಹುಟ್ಟು" ಈ ಸಂಕಲನದ ಉತ್ತಮ ಕತೆಯಾಗಿದೆ. ಮಗುವನ್ನು ಹಡೆಯಬೇಕು ಎಂದು ಹಂಬಲಿಸುವ ಹೆಣ್ಣೊಬ್ಬಳ ಪಾತ್ರ ಅಪೂರ್ವವಾಗಿ ಚಿತ್ರಿತವಾಗಿದೆ. ಕೊನೆಗೆ ತನ್ನ ಚಿತ್ರಕಲೆಯಲ್ಲಿಯೇ ಮಗುವಿನ ಆನಂದ ಕಾಣುವುದು ಮನೋಹರವಾಗಿದೆ. ಬದುಕಿಗೆ ಬೇಸತ್ತು ಸಾವಿನತ್ತ ಮುಖಮಾಡಿ ಮತ್ತೆ ಬದುಕಿಗೆ ಹಿಂತಿರುಗುವ ಜೀವದಾಯಕವಾದ ಒಂದು ಯತ್ನ "ಸಾವಿನತ್ತ ಒಂದು ಹೆಜ್ಜೆ" ಕತೆಯಲ್ಲಿ ಸೊಗಸಾಗಿ ಮೂಡಿಬಂದಿದೆ. ನೇಮಿಚಂದ್ರರ ಕತೆಗಳ ಮೆಚ್ಚುಗೆಯ ಗುಣವೆಂದರೆ ಮಾನವೀಯತೆ ಪ್ರಧಾನವಾಗಿರುವುದು. ಬದುಕಿನ ವೈವಿಧ್ಯತೆಯನ್ನು ವಾಸ್ತವದ ನೆಲೆಯಿಂದ ಪರಿಭಾವಿಸುವುದನ್ನು ಕಾಣಬಹುದು.'"ಕಪ್ಪು ಮೋಡ ಬೆಳ್ಳಿ ಅಂಚು" ಕತೆಯಲ್ಲಿ ಹೆಣ್ಣು ಅಭದ್ರತೆಯ ಕಾರಣಕ್ಕಾಗಿ ಗಂಡಿನ ಮೇಲ್ಮೆಯನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುವ ಮತ್ತು ಬಿಡುಗಡೆಯ ಸಂದರ್ಭವನ್ನು ಸವಾಲಾಗಿ ಸ್ವೀಕರಿಸುವ ಎರಡು ರೀತಿಯ ನೆಲೆಯಲ್ಲಿ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುತ್ತಾಳೆ. ವಿಚ್ಛೇದನ ಎನ್ನುವುದು ಸಾಂಪ್ರದಾಯಿಕತೆಗೆ ವಿರುದ್ಧವಾದುದು. ವಿಚ್ಛೇದನದ ನಂತರ ಸ್ತ್ರೀಗೆ ಸಮಾಜದಲ್ಲಿ ಒಪ್ಪಿತವಾದ ಸ್ಥಾನವಿಲ್ಲ. ಆದರೆ ಲೇಖಕಿ ಆಧುನಿಕತೆಯ ಪರಿಣಾಮದಿಂದಾಗಿ ಏನೆಲ್ಲಾ ಬದಲಾವಣೆಗಳು ಘಟಿಸಿವೆ ಎಂಬುದನ್ನು ತೋರ್ಪಡಿಸಲೆತ್ನಿಸಿದ್ದಾರೆ. ವಿಚ್ಛೇದನದ ನಂತರ ಮಹಿಳೆಗೆ ಸಮಾಜದಲ್ಲಿ ಸ್ಥಾನ, ಹಾಗೂ ತನ್ನದೇ ಆದ ನೆಲೆಯ ಸ್ಥಾಪನೆ ಎಂಬುದನ್ನು ಕತೆಯ ಮೂಲಕ ಸಂದೇಶವನ್ನು ನೀಡಿದ್ದಾರೆ. ಪರಾವಲಂಬನೆಯ ಬದುಕನ್ನು ಲೇಖಕಿ ವಿರೋಧಿಸುತ್ತಾರೆ. ಮಗುವಿನ ಲಾಲನೆ

ತಾಯಿಯ ಆದ್ಯ ಕರ್ತವ್ಯ, ಆದರೆ ಗಂಡಿನ ಜೊತೆಗೆ ಬಾಳುವುದು ಅನಿವಾರ್ಯವೇನಲ್ಲ. ಮಹಿಳೆಗೆ ತನ್ನ ಅಸ್ತಿತ್ವದ ಸ್ಥಾಪನೆಗೆ, ಸ್ವತಂತ್ರವಾದ ನಿರ್ಧಾರಗಳಿಗೆ ತಕ್ಕುದಾದ ಸ್ಥಾನವಿದೆ. ಖಾಸಗಿ ಲೋಕದ ಅನಾವರಣ ಆಟವಾಗದೆ, ಶೋಧನೆಯಾಗುತ್ತದೆ. ಆದರೆ ಬೌದ್ಧಿಕ ತೀವ್ರತೆಯಿಂದ ತಮ್ಮ ಕತೆಗಳಿಗೆ ಚೈತನ್ಯವನ್ನು ತಂದಿದ್ದಾರೆ. 'ಮತ್ತೆ ಬರೆದ ಕವನಗಳು' ಕತೆಯಲ್ಲಿ ನಿರೂಪಣೆ ಭೂತಕ್ಕೆ ಜಾರಿ ಬಂಡುಕೋರ ಹುಡುಗಿಯ ಹುಟ್ಟನ್ನು ವರ್ಣಿಸುವಾಗ ಭಾವುಕತೆಯು ನಿಯಂತ್ರಣಕ್ಕೆ ಒಳಪಡುತ್ತದೆ. '''ನೇಮಿಚಂದ್ರ ಅವರ ಮತ್ತೆಬರೆದ ಕತೆಗಳು ಸಂಕಲನದ ಸಂವೇದನಾ ಸೂಕ್ಷ್ಮತೆ, ಸಂಯಮ ಮನಸ್ಸಿನ ವ್ಯಾಪಾರಗಳ ವಿಶ್ಲೇಷಣೆ ವಿಶಿಷ್ಟವಾದವು''' ಎಂದು ವಿಮರ್ಶಕ ಎಲ್.ಎಸ್, ಶೇಷಗಿರಿಯವರು ಅಭಿಪ್ರಾಯಪಟ್ಟಿರುವುದು ಸೂಕ್ತವಾಗಿವೆ (ಎಲ್.ಎಸ್, ಶೇಷಗಿರಿರಾವ್, ೨೦೦೨, ಪುಟ ೨೬೬).

೩. ಕಳೆಯಬೇಕಿದೆ ನಿಮ್ಮ ಜೊತೆಯಲಿ ಒಂದು ಶ್ಯಾಮಲ ಸಂಜೆ

ನೇಮಿಚಂದ್ರರ ಮೂರನೇ ಕಥಾಸಂಕಲನವಿದು. ಇದು ಏಳು ಕತೆಗಳನ್ನೊಳಗೊಂಡಿದೆ. ಲೇಖಕಿ ಕಥಾ ಹಂದರಕ್ಕೆ ಬೌದ್ಧಿಕತೆಯ ಬಲನೀಡಿ ಭಿನ್ನ ಮಾದರಿಯ ಕತೆಗಳನ್ನು ನೀಡಿದ್ದಾರೆ. ಈ ವಿಭಿನ್ನ ಮಾದರಿಯ ಕತೆಗಳಿಂದ ಕನ್ನಡ ಸಾಹಿತ್ಯಕ್ಕೆ ವಿಶಿಷ್ಟತೆ ಪ್ರಾಪ್ತವಾಗಿದೆ. ಈ ಸಂಕಲನದ 'ಬದುಕು ಕಾಯುವುದಿಲ್ಲ' ಎಂಬ ಮೊದಲ ಕತೆಯು ಭಿನ್ನ ಮಾದರಿಯ ಕಥಾವಸ್ತುವನ್ನು ಹೊಂದಿದೆ. ವಿಶೂ-ಸಂಯುಕ್ತ ವಿದ್ಯಾವಂತರು, ಉದ್ಯೋಗಸ್ಥರು. ಆದರೆ ಇವರಿಬ್ಬರ ನಡುವಿನ ವೈವಾಹಿಕ ಸಂಬಂಧ ಮಾತ್ರ ಬಿರುಕಾಗಿದೆ. ಬದುಕಿನ ಮೇಲೆ ಎಲ್ಲಿಲ್ಲದ ಉತ್ಸಾಹ ಸಂಯುಕ್ತಾಳಿಗೆ. ಆದರೆ ಸಂಬಂಧಗಳ ಅಸ್ತಿತ್ವವನ್ನು ಅರಿಯದ ವಿಶೂಗೆ ಹಣವೇ ಎಲ್ಲ. ತಾಯಿಯ ಹದಗೆಟ್ಟ ಆರೋಗ್ಯವನ್ನು ಹಣದ ವಿಷಯವಾಗಿ ಹಿಂದೆ-ಮುಂದೆ ಆಲೋಚಿಸುವ ವಿಚಿತ್ರ ಸ್ವರೂಪದ ವ್ಯಕ್ತಿ. ವಿಶೂನ ಈ ವರ್ತನೆಯನ್ನು ಬದಲಾಯಿಸಲು ಸಂಯುಕ್ತಾ ಮಾಡುವ ಪ್ರಯತ್ನವೆಲ್ಲಾ ಫಲ ನೀಡುವುದಿಲ್ಲ 'ಬದುಕು ನಿನ್ನಲ್ಲೆಂಥಾ ಮುನಿಸು' ಕತೆಯು ಶಶಿಯ ಮಾನಸಿಕ ಒಳತೋಟಿಗಳನ್ನು ಹಂತಹಂತವಾಗಿ ತೆರೆದಿಡುತ್ತದೆ. ದೈಹಿಕವಾಗಿ ಕ್ಯಾನ್ಸರ್ ರೋಗಕ್ಕೆ ತುತ್ತಾಗಿರುವ ಶಶಿಯ ಮನಸ್ಸಿಗೂ ಮಿದುಳಿಗೂ ಅಸ್ವಸ್ಥತೆ ಕಾಡುತ್ತದೆ. ಬೌದ್ಧಿಕ ಸ್ಥೈರ್ಯವನ್ನು ಕಳೆದುಕೊಂಡಿರುವ ಶಶಿಯ ಮನಸ್ಸಿನ ವಿಷಯಗಳನ್ನು ಕತೆಯು ಒಂದೊಂದಾಗಿ ವಿಶ್ಲೇಷಿಸುತ್ತದೆ. ಈ ಕತೆಯ ರಮೇಶನ ಪಾತ್ರ ತುಂಬಾ ಸ್ವಾರಸ್ಯಕರವಾದುದು. ಏಕೆಂದರೆ ಹೆಂಡತಿಯ ಹಲವು ಗೊಂದಲ-ಸಮಸ್ಯೆಗಳ ಜೊತೆಗೆ ಆರ್ಥಿಕ ಸಮಸ್ಯೆ ಎದುರಾದರೂ ಯಾವುದೇ ರೀತಿಯ ಕೋಪ, ಕ್ರೌರ್ಯ ವರ್ತನೆಗಳಿಗೆ ಒಳಗಾಗದೆ ಸೌಮ್ಯವಾದ ರೀತಿಯಲ್ಲಿ ವರ್ತಿಸುತ್ತಾನೆ. ಹೆಂಡತಿಯ ಕಾಯಿಲೆಯ ನಿಮಿತ್ತವಾಗಿ ತಾನೇ ಅಡುಗೆ ಮಾಡಿ ಮಗು ಮತ್ತು ಹೆಂಡತಿಯ ಶುಶ್ರೂಶೆಯನ್ನು ಮಾಡುತ್ತಾನೆ. ಓದುಗರಿಗೆ ಹೃದಯವಿದ್ರಾವಕತೆಯನ್ನು ಕತೆಯು ಮೂಡಿಸುತ್ತದೆ. ಸ್ತ್ರೀಪರ ಕಾಳಜಿಯನ್ನು ಹೊಂದಿರುವ ಪುರುಷನ ಮನೋಗುಣವನ್ನು ಇಲ್ಲಿ

ಮನಗಾಣಬಹುದು. ಕತೆಯ ಕೊನೆಯು ತೀರಾ ಸ್ವಾರಸ್ಯಕರವಾದ ರೀತಿಯಲ್ಲಾಗಿದೆ. ಆಧುನಿಕತೆಯ ಅಬ್ಬರದ ನಡುವೆ ಸ್ತ್ರೀ-ಪುರುಷ ಸಮಾನವಾಗಿ ದುಡಿದಾಗ ಕುಟುಂಬ ನಿರ್ವಹಣೆ ಸುಲಭ ಸಾಧ್ಯವೆಂದರಿತ ಶಶಿಯು ತಾನೇ ಸ್ವಆಸಕ್ತಿಯಿಂದಾಗಿ ಬರವಣಿಗೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾಳೆ. ಇದು ಹೆಣ್ಣಿನ ಬೆಳವಣಿಗೆಯನ್ನು ತೋರಿಸುತ್ತದೆ. ಸಂಕಲನದ ಶೀರ್ಷಿಕೆಯನ್ನೊತ್ತ ಕತೆಯು ಸೌಮ್ಯ ಸ್ವಭಾವದ ಹೆಣ್ಣೊಬ್ಬಳು ಗಂಡನಿಂದ ಅನ್ಯಾಯಕ್ಕೊಳಗಾಗಿ ವಿಚ್ಛೇದನ ಪರಿಸ್ಥಿತಿಯಿಂದ ಬದಲಾಗಲು ಆಧ್ಯಾತ್ಮದ ಮಾರ್ಗವನ್ನು ಹಿಡಿಯುತ್ತಾಳೆ. ಲೇಖಕಿ ತಮ್ಮ ಹತ್ತಿರದಿಂದ ಕಂಡ ಅನುಭವವನ್ನು ಕತೆಯಾಗಿಸಿದ್ದೇನೆ ಎಂದು ಅವರ 'ಬದುಕು ಬದಲಿಸಬಹುದು' ಕೃತಿಯಲ್ಲಿ ವಿವರಿಸಿದ್ದಾರೆ. (ನೇಮಿಚಂದ್ರ ೨೦೦೫, ಪುಟ ೨೪) ಹೆಣ್ಣಿನ ಮನಸ್ಸು ತೀರ ಸೂಕ್ಷ್ಮವಾದುದು. ಅವಳು ಬಾಳಿನಲ್ಲಿ ಬಂದೊದಗುವ ಬೀಕರ, ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಎಂದು ಲೇಖಕಿ ಕತೆಯ ಕೊನೆಯಲ್ಲಿ ಸೂಚ್ಯವಾಗಿ ನಿರೂಪಿಸುತ್ತಾರೆ. ಅಹಲ್ಯಾ ಮದುವೆಯಾದ ಹೊಸದರಲ್ಲಿ ಗಂಡನೊಡನೆ ಅತ್ಯಂತ ಸಂತೋಷದಿಂದಿರುತ್ತಾಳೆ. ಆದರೆ ಗಂಡ ಮದುವೆಗೆ ಮುಂಚೆಯೇ ಬೇರೊಂದು ಹೆಣ್ಣನ್ನು ಪ್ರೀತಿಸಿದ್ದ ಹಾಗೂ ಅವಳ ನಡುವಿನ ಸಂಬಂಧ ಮದುವೆಯಾದ ಕೆಲದಿನಗಳ ನಂತರ ಮತ್ತೆ ಮುಂದುವರೆಯುತ್ತದೆ. ಕೊನೆಗೆ ರವಿ ಅಹಲ್ಯಾಳಿಗೆ ವಿಚ್ಛೇದನ ನೀಡಿಯೇ ಬಿಡುತ್ತಾನೆ. ಈ ಅಘಾತವು ಮಾನಸಿಕವಾಗಿ ಅಹಲ್ಯಳ ಬಾಳಿನಲ್ಲಿ ಸಂನ್ಯಾಸಿಯಾಗುವ ಹಂತಕ್ಕೆ ಕರೆದೊಯ್ಯುತ್ತದೆ. ಚಿಕ್ಕ ಮಗುವನ್ನು, ವಯಸ್ಸಾದ ತಾಯಿಯ ಬಳಿ ಬಿಟ್ಟು, ಆಧ್ಯಾತ್ಮದ ಕಡೆಗೆ ತಿರುಗುತ್ತಾಳೆ. ಮಾನಸಿಕವಾಗಿ ಸ್ತ್ರೀಯ ಒಳತೋಟಗಳನ್ನು ಹಿಡಿದಿಡಲು ಆಗದೆ ಅವುಗಳನ್ನು ನಾನಾ ರೂಪಗಳಲ್ಲಿ ಹೊರಹಾಕುತ್ತಾಳೆ ಎಂಬುದನ್ನು ಕಥೆಯು ವಿಶ್ಲೇಷಿಸುತ್ತದೆ.

'ನೆನಪುಗಳು ನೋಯಲಿಲ್ಲ' ಕತೆಯು ವಿಶಿಷ್ಟ ಕಥಾಹಂದರವನ್ನು ಹೊಂದಿದೆ. ಸಾವಿತ್ರಿ ತನ್ನ ಯೌವ್ವನದ ದಿನಗಳಲ್ಲಿ ಒಂದು ಘಟನೆಯಿಂದ ರವಿಯಲ್ಲಿ ಪ್ರೀತಿ ಅಂಕುರಿಸಿದ ರೀತಿಯನ್ನು ಹಾಗೂ ಅದರ ನೆನಪಾಗಿ ಮಗಳಿಗೆ ಶಾಮೋನಿ ಎಂದು ಹೆಸರಿಟ್ಟದ್ದುನ್ನು ಡೈರಿಯಲ್ಲಿ ದಾಖಲಿಸಿರುತ್ತಾಳೆ. ಪ್ರೀತಿಸಿದ ವ್ಯಕ್ತಿಯನ್ನು ಮದುವೆಯಾಗಲು ಅಸಾಧ್ಯವಾದಾಗ ಗೋಪಿಯನ್ನು ವಿವಾಹವಾಗುತ್ತಾಳೆ. ಇಲ್ಲಿ ಸಾವಿತ್ರಿಯೂ ಪ್ರೀತಿಸಿದ ರವಿಯನ್ನು ತನ್ನ ಜೀವನದುದ್ದುಕ್ಕೂ ನೆನಪಿನಲ್ಲಿ ಇಡುತ್ತಾಳೆ. ಬದುಕು ನೀಡಿದ, ಮಾನವೀಯತೆ ತೋರಿದ ರವಿಯನ್ನು ಸಾವಿತ್ರಿ ಎಂದೂ ಮರೆಯುವುದಿಲ್ಲ. ಆದರೆ ಬದುಕಿನಲ್ಲಿ ಜೊತೆಗಿರುವ ಗೋಪಿಯನ್ನು ಎಂದೂ ಕ್ಷಮಿಸಲಾರಳು. ಗಂಡ-ಹೆಂಡತಿ ಸಂಬಂಧ ಸೂಕ್ಷ್ಮವಾದುದು. ಸಂಬಂಧಗಳಲ್ಲಿ ಬಿರುಕು ಮೂಡಿದರೆ ಸಂಸಾರ ಒಡೆದು ಬೀಳುತ್ತದೆ. ಇಂಥ ಕಥಾ ಹಂದರವನ್ನು 'ನನ್ನೆದೆಯ ಕದನದಲಿ' ಕತೆಯು ಹೊಂದಿದೆ. ಪುರುಷ ತಾನು ಏನು ಬೇಕಾದರೂ ಮಾಡಬಹುದೆಂದು ನಾಲ್ಕು ದಿನಕ್ಕೆಂದು ತವರಿಗೆ ಹೋದ ಹೆಂಡತಿ ಇಲ್ಲದ ವೇಳೆಯಲ್ಲಿ ಕೆಲಸದ

ಬಾಲೆಯ ಮೇಲೆ ಲೈಂಗಿಕ ಅತ್ಯಾಚಾರ ಮಾಡುತ್ತಾನೆ. ಆಕಸ್ಮಿಕವಾಗಿ ಅಲ್ಲಿಗೆ ಬಂದ ಹೆಂಡತಿ ಮಿಹಿತಾ ಪರಿಸ್ಥಿತಿಯಿಂದ ಪಾರಾಗಲು ತನ್ನೊಳಗೆ ಕದನ ನಡೆಸುತ್ತಾಳೆ. ಆಲೋಚಿಸಿ ಮಿಹಿತಾ ಯಾವ ಗೊಂದಲಕ್ಕೆ ಒಳಗಾಗದೆ ಗಂಡನಿಂದ ಸರಳವಾಗಿಯೂ ದೂರವಾಗಿ ತನ್ನ ವಿರೋಧವನ್ನು ತೋರಿಸುತ್ತಾಳೆ. ಲೇಖಕಿ ಈ ಕತೆಯನ್ನು ನಿರ್ವಹಿಸಿರುವ ರೀತಿ ನಾಟಕೀಯವಾಗಿದೆ. ಕುಟುಂಬದಿಂದ ಅವಳು ಬೇರ್ಪಡುವುದು ಆಧುನಿಕ ಸ್ತ್ರೀಯ ಮನೋಧರ್ಮವನ್ನು ಪ್ರತಿನಿಧಿಸುತ್ತದೆ. ಗಂಡ-ಹೆಂಡತಿ ಸಂಬಂಧ ಏಳೇಳು ಜನ್ಮದ್ದು, ಪತಿಯೇ ಪರದೈವ. ಆತ ಏನು ಮಾಡಿದರೂ ಒಪ್ಪಿಕೊಳ್ಳಬೇಕಾದ್ದು ಸತಿಯ ಧರ್ಮ ಎಂಬ ಸಂಪ್ರದಾಯದ ನಿಲುವನ್ನು ಪ್ರಶ್ನಿಸಿ, ವಿರೋಧಿಸಿ ಹೊಸ ನಿರ್ಧಾರವನ್ನು ಕೈಗೊಳ್ಳುತ್ತಾಳೆ. ಈ ಕತೆಗಳಲ್ಲೆಲ್ಲ ಸ್ತ್ರೀಪರ ಕಾಳಜಿಯು ಪ್ರಮುಖವಾಗಿ ಕಂಡುಬರುತ್ತದೆ.

೪. ಇಲ್ಲಿಯವರೆಗಿನ ನೇಮಿಚಂದ್ರರ ಕತೆಗಳು

ನೇಮಿಚಂದ್ರರ ಸಮಗ್ರ ಕತೆಗಳ ಸಂಕಲನವಿದು. ಈ ಮುಂಚೆ ಪ್ರಕಟಗೊಂಡ ಮೂರು ಸಂಕಲನಗಳಲ್ಲಿರುವ ಕತೆಗಳ ಜೊತೆಗೆ ಇತ್ತೀಚಿನ ಕತೆಗಳನ್ನು ಈ ಕೃತಿ ಒಳಗೊಂಡಿವೆ.

'ಮರಳಿ ಬದುಕಿಗೆ ಈ ಪಯಣ' ಕತೆಯು ದೈಹಿಕವಾಗಿ ಮತ್ತು ಮಾನಸಿಕವಾಗಿ ದುರ್ಬಲವಾದ ಸುಧಾಳ ಸುತ್ತ ಹೆಣೆದ ಕತೆಯಾಗಿದೆ. ಸುಧಾ ಮಿದುಳು ರೋಗದ ನಿಮಿತ್ತ ಹಾಸಿಗೆ ಹಿಡಿದಿದ್ದಾಳೆ. ಕೋಮಾ ಸ್ಥಿತಿಯಲ್ಲಿರುವ ಸುಧಾಳನ್ನು ರಿಪುದಮನ್ ಸಿಂಗ್ ಬಹಳ ಜಾಗರೂಕತೆಯಿಂದ ಶುಶ್ರೂಷೆ ಮಾಡುತ್ತಾನೆ. ನಾಯಕಿಯ ಹಿಂದಿನ ನೆನಪುಗಳನ್ನು ಹೆಕ್ಕಿ ತೆಗೆಯಲು ಹರಸಾಹಸ ಮಾಡುತ್ತಾನೆ. "ಎಲ್ಲಿ ಹೋದಿರಿ ನೆನಪುಗಳೇ ಮತ್ತೆ ಬನ್ನಿ, ಭೂತ ಭವಿಷ್ಯದ ನಡುವೆ ತೂಗು ಸೇತುವೆ ಕಟ್ಟ ಬನ್ನಿ ನೆನಪ ಜೋಲಿಯಲ್ಲೊಮ್ಮೆ ನನ್ನ ಹುಡುಗಿಯ ಜೀಕಿ ಬಿಡಬನ್ನಿ. ಕೆದಡಿ ಬಗ್ಗಡವಾದ ಬದುಕ ತಿಳಿಗೊಳಿಸಬನ್ನಿ" ಎಂದು ರಿಪು ನಾಯಕಿಯ ನೆನಪುಗಳನ್ನು ಮರಳಿ ಕರೆಯುತ್ತಾನೆ (ನೇಮಿಚಂದ್ರ, ೨೦೦೧(i), ಪು. ೭).

ಕತೆಯು ಆಶಾದಾಯಕ ನುಡಿಗಳಿಂದ ಕೊನೆಕೊಂಡಿರುವುದು ಲೇಖಕಿಯು ಬದುಕಿನ ಬಗೆಗೆ ಹೊಂದಿರುವ ಉತ್ಸುಕತೆಯನ್ನು ತೋರಿಸುತ್ತದೆ. "ಕತ್ತಲನ್ನು ಶಪಿಸುವ ಬದಲು ಸಣ್ಣ ಹಣತೆಯನ್ನು ಹಚ್ಚಿಡೋಣ ಅಲ್ವ?" ಎಂಬೀ ಮಾತುಗಳು ಬದುಕಿನಲ್ಲಿ ಎದುರಾಗುವ ಸಮಸ್ಯೆಗಳನ್ನು ಧೈರ್ಯಗುಂದದೆ ಎದುರಿಸಬೇಕು ಹಾಗೂ ಸಮಸ್ಯೆಗೆ ಪರಿಹಾರ ಹುಡುಕುವುದರ ಕಡೆಗೆ ಮನುಷ್ಯನ ಆಲೋಚನೆಗಳಿರಬೇಕೆ ವಿನಹಃ ಸಮಸ್ಯೆಯನ್ನು ಹೆಮ್ಮರ ಬಿದ್ದಂತೆ ಮಾಡಿಕೊಳ್ಳಬಾರದು ಎಂಬ ಆಶಯವನ್ನು ಈ ವಾಕ್ಯವು ಧ್ವನಿಸುತ್ತದೆ.

'ತಣ್ಣನೆಯ ಕಣಿವೆಯಲಿ ಒಂದು ಪ್ರೀತಿಯ ಕನಸು' ಕತೆಯು ಆತ್ಮಾರ್ಥಕ ನಿರೂಪಣೆಯ ರೂಪದಲ್ಲಿದೆ. ಹಿಮಾಂಕನ ಪರಿಚಯ ಸ್ನೇಹವಾಗಿ ಬೆಳೆಯುವುದನ್ನು ಕತೆಯು ಸೂಕ್ಷ್ಮವಾಗಿ ವಿವರಿಸುತ್ತದೆ. ಚೀನಾ, ಆಫ್ಘಾನಿಸ್ತಾನ, ರಷ್ಯಾಗಳಿಂದ ಸುತ್ತುವರೆದ 'ಲೇ' ಎಂಬ ಭೂಪ್ರದೇಶದ

ನಿಸರ್ಗದ ವರ್ಣನೆ ಓದುಗರ ಕಣ್ಣ ಮುಂದೆಯೇ ಬರುವಂತೆ ಲೇಖಕಿ ಕತೆಯನ್ನು ಕಟ್ಟಿಕೊಟ್ಟಿದ್ದಾರೆ. ಭಾಷೆ, ಜನರ ಪರಿಚಯವಿಲ್ಲದ ಊರಿನ ಅನುಭವಗಳನ್ನು ಎಳೆ ಎಳೆಯಾಗಿ ಹೇಳುತ್ತಾರೆ. ಹಿಮಾಂಕನ ಕುಟುಂಬ ತೋರಿಸುವ ಅತಿಥಿ ಸತ್ಕಾರವನ್ನು ನೆನೆಯುತ್ತಾರೆ. ಹಿಮಾಂಕನನ್ನು ಆಗಲಿ ಹೋಗುವುದು ನಾಯಕಿಗೆ ವಿರಹವಾಗಿ ಕಾಣುತ್ತದೆ.

'ನೀನಿರುವೆ ನಮ್ಮೊಡನೆ' ಕತೆಯು ಗ್ಲಿಯೋಮಾ ಎಂಬ ಮಿದುಳು ಕ್ಯಾನ್ಸರ್‌ಗೆ ತುತ್ತಾದ ರವಿಯ ಕೊನೆಯ ದಿನಗಳನ್ನು ಚಿತ್ರಿಸುತ್ತದೆ. ರವಿ, ಹೆಂಡತಿ ಮತ್ತು ಮಗಳು ಪುಟ್ಟಿಯ ಸಂಗವನ್ನು ನೆನೆದು ಟಾಯ್ಲೆಟ್‌ನಲ್ಲಿ ಅಳುವ ಪ್ರಸಂಗ ಕರುಣಾಜನಕವಾಗಿದೆ. ಪುರಾಣದ ಸಾವಿತ್ರಿಯ ಹಾಗೆ ಯಮನೊಡನೆ ಸೆಣಸಾಡಿ ಗಂಡನ ಪ್ರಾಣವನ್ನು ಉಳಿಸಲು ಸಾಧ್ಯವಿಲ್ಲವೆಂದು ರವಿಯ ಹೆಂಡತಿ ಈ ರೀತಿ ಉದ್ಗರಿಸುತ್ತಾಳೆ. "ದೇವರೆ ಈ ಬದುಕು ಸಾವಿನ ನಡುವೆ, ರವಿಗೆ ನೋವಿನ ಪರ್ವತಾರೋಹಣ ಬೇಡ. ಅದೊಂದೇ ನನ್ನ ಪ್ರಾರ್ಥನೆ" (ನೇಮಿಚಂದ್ರ, ೨೦೦೧(i), ಪು. ೨೯).

ಕಾದಂಬರಿ

ಸ್ತ್ರೀ ಪರ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ಲೇಖಕಿ ನೇಮಿಚಂದ್ರ 'ಯಾದ್‌ವಶೇಮ್' ಎಂಬ ಕಾದಂಬರಿಯನ್ನು ಇತಿಹಾಸದ ಹಿನ್ನೆಲೆಯಲ್ಲಿ ರಚಿಸಿದ್ದಾರೆ. ವಿಭಿನ್ನ ಸಾಹಿತ್ಯ ಪ್ರಕಾರಗಳಲ್ಲಿ ಸಾಧನೆಗೈದಿರುವ ನೇಮಿಚಂದ್ರರು "ಯಾದ್‌ವಶೇಮ್" ಎಂಬ ದೀರ್ಘ ಕಾದಂಬರಿಯೊಂದನ್ನು ಬರೆದಿದ್ದಾರೆ. ಇದು ೨೬೮ ಪುಟಗಳಲ್ಲಿ ವಿಸ್ತರಿಸಿಕೊಂಡಿದೆ. ಜರ್ಮನಿಯ ಹಿಟ್ಲರ್‌ನ ಆಳ್ವಿಕೆಯಲ್ಲಿ ಯಹೂದಿಗಳು ದೇಶಾಂತರ ಹೋದರು. ಹಿಟ್ಲರನ ನೆಲದಿಂದ ಗಾಂಧಿಯ ನೆಲಕ್ಕೆ ಬಂದ ಪುಟ್ಟ ಯಹೂದಿ ಬಾಲೆಯ ಸುತ್ತ ಹೆಣೆದ ಕತೆಯಿದು. ಕಾದಂಬರಿಯು ೩೪ ಅಧ್ಯಾಯಗಳಲ್ಲಿ ಯಹೂದಿಗಳ ಚಿತ್ರವಿಚಿತ್ರ ನರಕಯಾತನೆಯ ಬದುಕನ್ನು ಚಿತ್ರಿಸುತ್ತದೆ. ನಾಜಿಯ ಆಳ್ವಿಕೆಯಲ್ಲಿ ಜೀವ ಭಯದಿಂದ ಯಹೂದಿ ವಿಜ್ಞಾನಿಗಳು ಪ್ರಪಂಚದ ನಾನಾ ಭಾಗಗಳಿಗೆ ವಲಸೆ ಬಂದರು. ಹೀಗೆ ವಲಸೆ ಬಂದವರಲ್ಲಿ ಭಾರತಕ್ಕೆ ಬಂದು ನೆಲೆಸಿದ ಹ್ಯಾನಾ ಮತ್ತು ಅವಳ ತಂದೆಯ ಜೀವನದ ಸುತ್ತ ಕಾದಂಬರಿ ಹೆಣೆದುಕೊಂಡಿದೆ. ಭಾರತವು ನಾನಾ ಧರ್ಮಗಳ ನೆಲೆವೀಡು. ಪರಧರ್ಮ ಸಹಿಷ್ಣುತೆ ಹೊಂದಿದೆ ಎಂಬುದನ್ನು ಕಾದಂಬರಿಯಲ್ಲಿ ಬರುವ ಒಳ ವಿವರಗಳು ಸ್ಪಷ್ಟ ಪಡಿಸುತ್ತವೆ. ಜರ್ಮನಿಯಿಂದ ಬಂದ ಹ್ಯಾನಾ ಮತ್ತು ಅವಳ ತಂದೆ ಆರನ್ ಮೋಸೆಸ್ ಹಿಟ್ಲರನ ಮುಷ್ಟಿಯಿಂದ ತಪ್ಪಿಸಿಕೊಂಡು ಭಾರತವನ್ನು ತಲುಪುತ್ತಾರೆ. ಭಾರತದಲ್ಲಿ ಈ ಕುಟುಂಬಕ್ಕೆ ವಿವೇಕನ ಕುಟಂಬದ ಪರಿಚಯವಾಗುತ್ತದೆ. ಹ್ಯಾನಾಳ ತಂದೆ ಮರಣಹೊಂದಿದಾಗ ಅವಳನ್ನು ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳುವ ಮಟ್ಟಕ್ಕೆ ತಲುಪುತ್ತದೆ. ಹ್ಯಾನಾ ಅನಿತಾಳಾಗಿ ಮಾರ್ಪಾಡುತ್ತಾಳೆ.

ಕಾದಂಬರಿಯಲ್ಲಿ ಅಲ್ಲಲ್ಲಿ ಗ್ರಾಮ್ಯ ಭಾಷೆಯು ಹಾಸುಹೊಕ್ಕಾಗಿದೆ ಎಂಬುದಕ್ಕೆ ಕಾದಂಬರಿಯ ಈ ಸಾಲುಗಳನ್ನು ಗಮನಿಸಬಹುದು. 'ಸ್ವರ್ಗಕ್ಕೆ ಹೋಗೋವಾಗ ನಕುಲ, ಸಾದೇವ, ಅರ್ಜುನ, ದ್ರೌಪದಿ, ಒಬ್ಬೊಬ್ರಾಗಿ ಸತ್ತುಬಿದ್ರಂತೆ, ಧರಮ್‌ರಾಯ ಅವನ್ನಿಂದೆ ಭೀಮ ನಡೀತಾನೆ ಅವ್ರು

ಅಗಳಪ್ಪ, ಭೀಮ್ಸೆನಾನು ಬಿದ್ದುಬಿಟ್ಟ ಧರಮ್‌ರಾಯಂಗೆ ದುಃಖ ತಡ್ಯಾಕೆ ಆಗ್ಲಿಲ್ಲ' ಇಂತಹ ಆಡುಮಾತಿನ ಸಂಭಾಷಣೆಯನ್ನು ಬಳಸಿದ್ದಾರೆ (ನೇಮಿಚಂದ್ರ, ೨೦೦೭(iii), ಪುಟ ೪೯).

ಯುರೋಪಿನ ಇತಿಹಾಸ ಹಿಟ್ಲರ್‌ನ ಅಧಿಕಾರ, ಯುಹೂದಿಯರ ಚರಿತ್ರೆ ಮೊದಲ ಮಹಾಯುದ್ಧ ಎರಡನೇ ಜಾಗತಿಕ ಯುದ್ಧ, ಇಸ್ರೇಲ್ ಸ್ಥಾಪನೆ ಇತ್ಯಾದಿ ಐತಿಹಾಸಿಕ ವಿವರಗಳನ್ನು ಖಚಿತವಾಗಿ ಕಾದಂಬರಿ ಒದಗಿಸುತ್ತದೆ.

ಯಹೂದಿಯರ ಎದೆಯ ಭಾವಗಳನ್ನು ಎಳೆ ಎಳೆಯಾಗಿ ಈ ಕಾದಂಬರಿ ತೆರೆದಿಡುತ್ತದೆ. ೫೦ ವರ್ಷಗಳ ನಂತರ ಅನಿತಾ ಮರಳಿ ತನ್ನ ತಾಯಿ, ಅಕ್ಕ, ತಮ್ಮನನ್ನು ಅರಸುತ್ತಾ, ಅಮೇರಿಕಾ, ಪ್ಯಾಲೆಸ್ಟೇನ್ ಇತ್ಯಾದಿ ದೇಶಗಳನ್ನು ಸುತ್ತುತ್ತಾಳೆ. ಕೊನೆಗೆ ಜೆರುಸಲೇಂಗೆ ಪಯಣ. ಅಲ್ಲಿ ಅಕ್ಕನ ಸೇರುವಿಕೆ. ಅಕ್ಕನಿಂದ ಜರ್ಮನಿಯಲ್ಲಿ ೬೦ ಲಕ್ಷ ಜನರನ್ನು ಕೊಂದ ಕತೆಯ ಚಿತ್ರಣ ಮಾರ್ಮಿಕವಾಗಿ ಪ್ರಕಟವಾಗಿದೆ. ಕಾದಂಬರಿಯ ತಿಮ್ಮಣ್ಣನ ಪಾತ್ರ ಲೇಖಕಿಯು ಕಾರ್ಯನಿರ್ವಹಿಸುತ್ತಿರುವ ಕಾರ್ಖಾನೆಯ ಗುರ್ರಪ್ಪನ ಪಾತ್ರವಾಗಿ ಮೂಡಿಬಂದಿದೆ. ಹೀಗೆ ಹಲವು ಪಾತ್ರಗಳು ಕಾದಂಬರಿಯ ವಾಸ್ತವಿಕತೆಗೆ ಕೊಂಡಿಯಾಗಿ ಬೆಸೆದಿವೆ.

ಜೆರುಸಲೇಮ್‌ನಿಂದ ಮರಳಿ ಬಂದ ಅನಿತಾಳ ಚಟುವಟಿಕೆಯೂ ತೀವ್ರಗತಿಯಲ್ಲಿ ಬೆಳವಣಿಗೆ ಹೊಂದುತ್ತದೆ. ಸ್ತ್ರೀಪರ ಹೋರಾಟ, ಸಂಘಟನೆ ಇತ್ಯಾದಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾಳೆ. ಏಕೆಂದರೆ ಅಂದು ಜರ್ಮನಿ ಹೊತ್ತಿ ಉರಿದಿತ್ತು. ನಿಂತುನೋಡಿತ್ತು ಜಗತ್ತು. ಇಂದು ಹಿಟ್ಲರ್ ಎಲ್ಲಿಬೇಕಾದರೂ ಹುಟ್ಟಬಲ್ಲ, ಅಮೇರಿಕಾದಲ್ಲಿ, ಜರ್ಮನಿಯಲ್ಲಿ, ಇಸ್ರೇಲ್‌ನಲ್ಲಿ ಅಹಿಂಸೆಯೇ ಪರಮಧರ್ಮ ಎಂದು ಸಾರಿದ ಭಾರತದಲ್ಲೂ ಕೂಡ. ಹೀಗಾಗಿ ಅವಕ್ಕೆ ಅವಕಾಶಕೊಡಬಾರದು ಎಂಬ ಕ್ರಿಯಾಮುಖಿ ಬೆಳವಣಿಗೆಯೊಂದಿಗೆ ಕಾದಂಬರಿಯು ಕೊನೆಗೊಳ್ಳುತ್ತದೆ.

ಜೀವನ ಚರಿತ್ರೆ-ವ್ಯಕ್ತಿಚಿತ್ರಗಳು

ಬೆಳಕಿನೊಂದು ಕಿರಣ ಮೇರಿಕ್ಯೂರಿ

೧೯೯೩ರಲ್ಲಿ ಪ್ರಕಟವಾದ ಈ ಕೃತಿ ಮೇರಿಕ್ಯೂರಿಯ ಸಾಹಸಗಾಥೆಯನ್ನು ಪರಿಚಯಿಸುವಲ್ಲಿ ತನ್ನದೇ ಆದ ಕಾವ್ಯಮಯವಾದ ಭಾಷಾ ಶೈಲಿಯಿಂದಾಗಿ ಓದುಗರ ಮೆಚ್ಚುಗೆಗೆ ಪಾತ್ರವಾಗಿದೆ. ಮೇರಿಕ್ಯೂರಿ ದಂಪತಿಗಳ ಸಾಮರಸ್ಯವನ್ನು ಕುರಿತು ಬರೆಯುತ್ತಾ "ಪರಸ್ಪರ ಸರಿಸಾಟಿಯಾದ ಮೇಧಾವಿ ಪತಿ-ಪತ್ನಿಯರ ದುಡಿಮೆಯಲ್ಲಿ ಮೇಲುಕೀಳುಗಳಿರಲ್ಲಿಲ್ಲ. ನನ್ನದು ನಿನ್ನದೆಂಬುದಿರಲಿಲ್ಲ. ಪಿಯರ್ ಅಪ್ಪಟ ವಿಜ್ಞಾನಿ. ಗಂಡಿನ-ಗಂಡನ ಅರ್ಥಹೀನ ಹಮ್ಮು ಬಿಮ್ಮುಗಳ ಅನುಭವವೇ ಇಲ್ಲದ ತುಂಬು ಪ್ರೀತಿಯ ಪತಿ. ವಿಜ್ಞಾನವನ್ನು, ತನ್ನ ಜೊತೆಯಾದ ಈ ವಿಜ್ಞಾನಿಯನ್ನು ಉತ್ಕಟವಾಗಿ ಪ್ರೀತಿಸಿದ ವಿಜ್ಞಾನಿ" ಎನ್ನುತ್ತಾರೆ. ಲೇಖಕಿ ನೇಮಿಚಂದ್ರ ಅವರು (ನೇಮಿಚಂದ್ರ, ೨೦೦೭(ii), ಪು. ೩೪).

ಯುರೇನಿಯಂನ ಅದಿರಾದ ಪಿಚ್‌ಬ್ಲೆಂಡ್ ಅನ್ನು ತಂದು, ಕುದಿಸಿ, ಶೋಧಿಸಿ, ಶೇಖರಿಸಿ ಅದರಲ್ಲಿದ್ದ ಎರಡನೆಯ ಮೂಲಧಾತುವಿನ ಇರುವಿಕೆಯನ್ನು ಡಿಸೆಂಬರ್ ೨೬, ೧೮೯೮ರಲ್ಲಿ ಪ್ರಕಟಿಸಿದರು. ಇದಕ್ಕೆ ರೇಡಿಯಂ ಎಂದು ಹೆಸರಿಟ್ಟರು. ಎರಡು ಬಾರಿ ನೊಬೆಲ್ ಬಹುಮಾನ ಪಡೆದ ಮೇರಿ ೧೯೦೬ರಲ್ಲಿ ಪತಿ ಪಿಯರ್‌ನನ್ನು ಕಳೆದುಕೊಂಡು ಏಕಾಂಗಿಯಾಗಿ ತನ್ನ ಸಾಧನೆಯನ್ನು ಮುಂದುವರೆಸಿದಳು. ತಾನು, ಪಿಯರ್ ಜೊತೆಯಾಗಿ ಕನಸು ಕಂಡ ಪ್ರಯೋಗಾಲಯವನ್ನು ನಿರ್ಮಿಸಿದಳು. ಯುದ್ಧದ ಅಗ್ನಿಕುಂಡದಲ್ಲಿ ಬೆಂದವರಿಗೆ, ನೊಂದವರಿಗೆ ಮೇರಿ ಆಪತ್ಕಾಲಕ್ಕೊದಗಿ ಬಂದ ದೇವತೆಯಂತೆ ಜೀವದಾನ ನೀಡಿದಳು". ತಾನೇ ಕಂಡು ಹಿಡಿದ ರೇಡಿಯಂನ ನಿರಂತರ ಒಡನಾಟದಿಂದಾಗಿ ಅದರ ದುಷ್ಪರಿಣಾಮಗಳಿಗೆ ಒಳಗಾಗಿ ಜುಲೈ ೪, ೧೯೩೪ರಲ್ಲಿ ಈ ಬೆಳಕಿನ ಕಿರಣ ಅಸ್ತಮಿಸಿತು. ಲೇಖಕಿಯೇ ಹೇಳುವಂತೆ "ಹೆಜ್ಜೆ ಮೂಡದ ಹಾದಿಯಲ್ಲಿ ಮೇರಿ ನಡೆದಿದ್ದಳು. ಹುಟ್ಟು ಸಾಹಸಿಯಂತೆ, ಸಿದ್ಧಜಾಡಿನ ಆರಾಮ, ಐಷಾರಾಮಗಳನ್ನು ತ್ಯಜಿಸಿ, ಯಾವ ಮಹಿಳೆಯರೂ ಹೆಜ್ಜೆ ಊರದಿದ್ದ ವಿಜ್ಞಾನದ ಅದ್ಭುತ, ಅಸ್ಪರ್ಶಿತ ಗೊಂಡಾರಣ್ಯವನ್ನು ಹೊಕ್ಕುಹೊರಬಂದಳು. ಯಶಸ್ವಿಯಾಗಿ, ಮಾದರಿಯಾಗಿ ಕೇವಲ ಮಹಿಳೆಯರಿಗಲ್ಲ, ವಿಜ್ಞಾನದ ಉತ್ಕಟ ಪ್ರೇಮಿಗಳಿಗೆಲ್ಲ ಮೇರಿ ಕ್ಯೂರಿ ಆದರ್ಶವಾದಳು. ಮಾನವತಾವಾದಿಗಳಿಗೆ ದಾರಿದೀಪವಾದಳು (ನೇಮಿಚಂದ್ರ, ೨೦೦೭(ii), ಪುಟ. ೬೮). ಮೇರಿ ಕ್ಯೂರಿಯ ಈ ಜೀವನಚಿತ್ರ ಸಾಹಸಗಾಥೆಯಂತೆ ಕಂಡರೆ ಅಚ್ಚರಿಯಲ್ಲ.

ನೋವಿಗದ್ದಿದ ಕುಂಚ

ಪ್ರಸಿದ್ಧ ಪಾಶ್ಚಾತ್ಯ ಚಿತ್ರಕಾರ ವ್ಯಾನ್‌ಗೋನ ಜೀವನಚರಿತ್ರೆಯೇ ಈ ಕೃತಿ. ಆತನೇ ಬರೆದಿರುವ ಡಿಯರ್‌ಥಿಯೋ ಹಾಗೂ ಇನ್ನಿತರ ಲೇಖಕರ ಕೃತಿಗಳನ್ನಾಧರಿಸಿದ ವ್ಯಾನ್‌ಗೋನ ಬದುಕಿನ ವ್ಯಥೆಯನ್ನೊಳಗೊಂಡಿದೆ. ಬಾಲಕ ವಿನ್ಸೆಂಟ್ ಮಾರ್ಚ್ ೩೦, ೧೮೫೩ರಲ್ಲಿ ವ್ಯಾನ್‌ಗೋನ ಮನೆತನದಲ್ಲಿ ಹುಟ್ಟಿದನು. ತಂದೆ-ತಾಯಿಗಳ ತಿರಸ್ಕಾರದಲ್ಲಿ ಬೆಳೆದವನು. ತಾನು ಪ್ರೀತಿಸಿದ ಯಾವ ಹೆಣ್ಣು ಈತನನ್ನು ಪ್ರೀತಿಸಲಿಲ್ಲ. ಉರ್ಸುಲಾ, ಕೀ, ಸಿಯೇನ್, ಒಬ್ಬ ವೇಶ್ಯಾ ಹುಡುಗಿ ಇವರೆಲ್ಲ ಈತನ ಬದುಕಿನಲ್ಲಿ ಹಾದು ಹೋದವರು. ಉರ್ಸುಲಾ, ಕೀ ಇಬ್ಬರೂ ಈತನ ಪ್ರೀತಿಯನ್ನು ಪ್ರಾರಂಭದಲ್ಲಿಯೇ ತಿರಸ್ಕರಿಸಿ ಹೋದವರು. ಸಿಯೇನ್ ಸಿಡುಬುಮುಖದ, ಯಾರಿಗೋ ಬಸಿರಾದ, ವೇಶ್ಯಾವೃತ್ತಿಯಲ್ಲಿ ಪಳಗಿದ ಹೆಣ್ಣು. ಈಕೆ ಕೂಡ ವಿನ್ಸೆಂಟ್‌ನನ್ನು ಮನಃಪೂರ್ವಕವಾಗಿ ಪ್ರೀತಿಸದೆ, ತನ್ನ ವೃತ್ತಿಗೆ ಪ್ರಾಮುಖ್ಯತೆ ಕೊಟ್ಟಳು. ಕಲಾವಿದನಾಗಿ ವ್ಯಾನ್‌ಗೋ ಬದುಕಿದ್ದಾಗ ಯಶಸ್ವಿಯಾಗಲಿಲ್ಲ. ಅವನ ಮರಣಾನಂತರ ಆತನ ಚಿತ್ರಗಳು ಕೋಟಿಗಟ್ಟಲೆ ಡಾಲರ್‌ಗಳಿಗೆ ಮಾರಾಟವಾದದ್ದು ಚರಿತ್ರೆಯ ವ್ಯಂಗ್ಯ.

ಬೆಳಕು ತಂದ ಜೀವ : ಡಾ. ಈಡಾ ಸೋಫಿಯಾ ಸ್ಕಡರ್

ಇದು ಪ್ರಸಿದ್ಧ ವೈದ್ಯೆ ಈಡಾ ಸೋಫಿಯಾ ಸ್ಕಡರ್‌ಳ ಜೀವನಚರಿತ್ರೆ. "ಊರು ಕೇರಿಗಳಲ್ಲಿ ಹೈಟೆಕ್ ಆಸ್ಪತ್ರೆಗಳು, ನರ್ಸಿಂಗ್ ಹೋಂಗಳು ತೆರೆದು ನಿಂತ ಕಾಲದಲ್ಲೂ, ರೋಗ ಉಲ್ಬಣವಾದಾಗ,

ಅಸಾಧ್ಯ ರೋಗ ಬಡಿದಾಗ 'ವೆಲ್ಲೂರು ಆಸ್ಪತ್ರೆ' ರೋಗಿಗಳ ಕಣ್ಣಲ್ಲಿ ಸಂಜೀವಿನಿಯಂತೆ ಹೊಳೆಯುತ್ತವೆ. ಶತಮಾನಕ್ಕೂ ಹಿಂದೆ ಆರಂಭವಾದ ವೆಲ್ಲೂರು ಅಸ್ಪತ್ರೆಯ ಹಿಂದೊಂದು ಅದ್ಭುತ ಕತೆ ಇದೆ. ಒಂದು ನಿಸ್ವಾರ್ಥ ಹೃದಯದ ಜೀವನ ಪ್ರೀತಿಯ ಕತೆ ಅದೇ ಡಾ. ಈಡಾ ಸ್ಕಡರ್‌ಳ ಕತೆ"(ನೇಮಿಚಂದ್ರ, ೨೦೦೭((i), ಪು. ೫).

ಈ ಕೃತಿಯು ೧೩ ಅಧ್ಯಾಯಗಳನ್ನು ಒಳಗೊಂಡಿದೆ. ಈ ಅಧ್ಯಾಯಗಳಲ್ಲಿ ಈಡಾಳ ವೈದ್ಯಕೀಯ ಸೇವೆಯ ಆರಂಭ, ಸಾಧನೆ ಹಾದಿಗಳನ್ನು ವಿಸ್ತಾರವಾಗಿ ಲೇಖಕಿ ತಿಳಿಸಿದ್ದಾರೆ. ನಮ್ಮ ನೆಲದಲ್ಲೇ ಹುಟ್ಟಿದ ಈಡಾ, ಭಾರತದ ಮಹಿಳೆಯರ ನೋವಿನ ಸ್ಥಿತಿಗೆ ಕರಗಿದವಳು. ಭಾರತದ ಮಹಿಳೆಯರಿಗಾಗಿಯೇ ವೈದ್ಯಳಾಗಿ ಅಮೇರಿಕಾದ ಸರ್ವಸಂಪತ್ತನ್ನು ತೊರೆದು ಭಾರತದಲ್ಲಿ ನೆಲೆಸಿದವಳು.

ಡಿಸೆಂಬರ್ ೯, ೧೮೭೦ರಂದು ಈಡಾ ಜನಿಸಿದಾಗ, ಈ ನೆಲದ ಹೆಣ್ಣು ಮಕ್ಕಳ ಭವಿಷ್ಯವನ್ನೇ ಬದಲಿಸುತ್ತಾಳೆ ಎಂದು ಯಾವ ಪ್ರವಾದಿಯೂ ನುಡಿದಿರಲಿಲ್ಲ. ಈ ನೆಲದ ಹೆಣ್ಣು ಮಕ್ಕಳಿಗೆ ವೈದ್ಯರಂಗದ ಬಾಗಿಲು ಬಡಿದು ತೆರೆಸಲಿದ್ದಳು ಈಡಾ ಸೋಫಿಯಾ ಸ್ಕಡರ್. ಸ್ಕಡರ್ ಮನೆತನದ ಅನೇಕ ಪೀಳಿಗೆಗಳಿಗೆ ಮಿಷನರಿ ವೈದ್ಯರಾಗಿ ಜನಸೇವೆಯಲ್ಲಿ ತೊಡಗಿದ ಹಿನ್ನೆಲೆಯಿದೆ. ತಾಯಿಯ ಆರೋಗ್ಯ ಕೆಟ್ಟ ಕಾರಣದಿಂದ ಅಮೇರಿಕೆಯಿಂದ ಭಾರತಕ್ಕೆ ಈಡಾ ಹೊರಟಳು. ಅದಾಗಲೇ ಪದವೀಧರಳಾಗಿದ್ದಳು. ವೆಲ್ಲೂರು ಕ್ಯಾಂಪಿನಲ್ಲಿ ನಡೆದ ಮೂರು ಜನ ಮಹಿಳೆಯರ ಸಾವುಗಳು ಈಡಾಳ ಮನಸ್ಸನ್ನು ಬದಲಿಸಿ, ವೈದ್ಯಳಾಗುವಂತೆ ಮಾಡಿದವು. ೧೮೯೪ರಲ್ಲಿ ಪುನಃ ಅಮೇರಿಕಾಗೆ ತೆರಳಿ ವೈದ್ಯಕೀಯ ಕಾಲೇಜು ಸೇರಿ, ತನ್ನ ಅಭ್ಯಾಸವನ್ನು ಮುಗಿಸಿದಳು. ೧೯೦೦ರಲ್ಲಿ ಪುನಃ ಭಾರತಕ್ಕೆ (ವೆಲ್ಲೂರು) ಆಗಮಿಸಿ ತನ್ನ ವೃತ್ತಿಯನ್ನು ಆರಂಭಿಸಿದಳು. ಸುತ್ತಮುತ್ತಲ ೫೦,೦೦೦ ಭಾರತೀಯ ಸ್ತ್ರೀಯರ ಸೇವೆಗೆ ನಿಂತಿದ್ದಳು. ಮಹಿಳೆಯರಿಗಾಗಿಯೇ ೧೯೧೮ರಲ್ಲಿ ಹೊಸ ಆಸ್ಪತ್ರೆಗೆ ಹಾಗೂ ಮಹಿಳಾ ಮೆಡಿಕಲ್ ಕಾಲೇಜಿಗಾಗಿ ಈಡಾ ಹೋರಾಡಿದಳು. ಕೊನೆಗೂ ಆಕೆಯ ಪ್ರಯತ್ನ ಫಲಿಸಿತು. ನಮ್ಮ ಚರಿತ್ರೆಯ ಪುಟಗಳಲ್ಲಿ ಎಲ್ಲೋ ಕಳೆದು ಹೋದ ಅದ್ಭುತ ಮಾನವತಾವಾದಿ ಮಹಿಳೆ ಈಡಾಳ ಬದುಕನ್ನು. ಲೇಖಕಿ ನೇಮಿಚಂದ್ರರು ದಾಖಲಿಸುವ ಮೂಲಕ ಆಕೆಗೊಂದು ಕೃತಜ್ಞತೆ ಮೆರೆದಿದ್ದಾರೆ. ಎಲ್ಲಾ ಸ್ತ್ರೀಯರ ವೈದ್ಯಕೀಯ ಅಧ್ಯಯನದ ಹಿಂದೆ ಈಡಾಳ ಸಾಧನೆಯು ಗುರುತು ಮಾಸದೆ ಉಳಿದಿದೆ. ಇದನ್ನು ಲೇಖಕಿ ನೇಮಿಚಂದ್ರ ಅರ್ಥಪೂರ್ಣವಾಗಿ ದಾಖಲಿಸಿದ್ದಾರೆ.

ದುಡಿವ ಹಾದಿಯಲಿ ಜೊತೆಯಾಗಿ

ದುಡಿಯವ ಹಾದಿಯಲಿ ಜೊತೆಯಾಗಿ ಸಾಗಿ ಬದುಕಿನ ಸಾರ್ಥಕತೆಯನ್ನು ಕಂಡ ಹಲವು ದಂಪತಿಗಳ ವ್ಯಕ್ತಿ ಚಿತ್ರಣ ಇಲ್ಲಿದೆ. ದುಡಿಯುವ ದಂಪತಿಗಳಿಗಾಗಿ ಇದನ್ನು ರಚಿಸಿರುವ ನೇಮಿಚಂದ್ರ

ತಮ್ಮ ಬದುಕಿನ ಉದಾಹರಣೆಯೊಂದಿಗೆ, ಪರಿಚಿತ ದಂಪತಿಗಳ ಬದುಕನ್ನು ಸಮೀಪದಿಂದ ಚಿತ್ರಿಸಿದ್ದಾರೆ. ಪರಸ್ಪರ ಅರಿತು ನಡೆಯುವ ಗಂಡ-ಹೆಂಡತಿಯರಾದಾಗ ಸಂಸಾರದ ಗಾಡಿ ಸುಗಮವಾಗಿ ನಡೆಯುತ್ತದೆ. ಗಂಡನ ಏಳಿಗೆಯನ್ನು ಬಯಸಿ, ಮನೆ ನಿಭಾಯಿಸಲು ಉಳಿಯುವ ಹೆಂಡತಿ, ಜೊತೆಗೆ ಹೆಂಡತಿಯ ಏಳಿಗೆಗಾಗಿ ಸಣ್ಣಪುಟ್ಟ ಸಂತೋಷಗಳನ್ನು ತ್ಯಾಗಮಾಡುವ ಗಂಡ ಇರುವ ಸಂಸಾರ ಅರ್ಥಪೂರ್ಣವಾಗುತ್ತದೆ. ಸಿ. ಪದ್ಮಾ ಮತ್ತು ಚಂದ್ರಶೇಖರ್ ಇಬ್ಬರೂ ಉದ್ಯೋಗನಿರತ ದಂಪತಿಗಳು. ಪದ್ಮಾ ತನ್ನ ಉದ್ಯೋಗದಲ್ಲಿ ಉನ್ನತ ಹುದ್ದೆಗೆ ಏರಿದಾಗ ಮನೆಯ ವಾತಾವರಣ ಹಾಗೂ ಮಗುವಿನ ಆರೈಕೆಯನ್ನು ಆಕೆಯ ಪತಿ ವಹಿಸಿಕೊಳ್ಳುತ್ತಾರೆ. ಕೊನೆಗೆ ಚಂದ್ರಶೇಖರ್ ತಮ್ಮ ಹುದ್ದೆಗೆ ರಾಜೀನಾಮ ನೀಡಿ ಹೆಂಡತಿಯ ಏಳಿಗೆಗೆ ನೆರವಾಗುತ್ತಾರೆ. ತಾಯ್ತನ ಅನೇಕ ಮಹಿಳೆಯರ ಉದ್ಯೋಗವನ್ನು ನುಂಗಿಹಾಕುತ್ತದೆ. ಆದರೆ ರೀನಾ ರಾಮಚಂದ್ರನ್ ಅವರ ಕುಟುಂಬವೂ ಇದಕ್ಕೆ ವಿರುದ್ಧವಾಗಿದೆ. ಮೂರು ತಿಂಗಳ ಮಗಳನ್ನು ತಂದೆ ಬಳಿ ಬಿಟ್ಟು ತರಬೇತಿಗಾಗಿ ಫ್ರಾನ್ಸ್‌ಗೆ ತೆರಳಿ, ಕೊನೆಗೆ "ಫಾರ್ಚೂನ್ ಇನ್‌ಸ್ಟಿಟ್ಯೂಟ್ ಆಫ್ ಇಂಟರ್‌ನ್ಯಾಷನಲ್ ಬಿಸಿನೆಸ್"ನ ಡೈರೆಕ್ಟರ್ ಜನರಲ್ ಆದಳು. ಹೀಗೆ ಆದರ್ಶ ದಂಪತಿಗಳ ಹಲವು ಚಿತ್ರಣಗಳು ಇಲ್ಲಿವೆ.

ಬೆಳಗೆರೆ ಜಾನಕಮ್ಮ ಬದುಕು-ಬರಹ (ಸಮಗ್ರ ಕವನ ಸಂಕಲನದೊಂದಿಗೆ)

ಈ ಕೃತಿಯಲ್ಲಿ ನೇಮಿಚಂದ್ರರು ಬೆಳಗೆರೆ ಜಾನಕಮ್ಮನವರ ಬದುಕು-ಬರಹವನ್ನು ಸಂಕಲಿಸುವುದರೊಂದಿಗೆ ಅವರು ರಚಿಸಿದ ಕವನಗಳಲ್ಲಿ ಕೆಲವನ್ನು ಸಂಗ್ರಹಿಸಿ ನೀಡಿದ್ದಾರೆ. ಬಯಲುಸೀಮೆಯ ಹಳ್ಳಿಗಾಡಿನಲ್ಲಿ ಜನಿಸಿದ, ಓದು-ಬರಹಗಳಿಂದ ವಂಚಿತಳಾದ, ಮತ್ತೆಲ್ಲ ಸಾಮಾನ್ಯ ಹೆಣ್ಣಿನಂತೆ ಮದುವೆ ಮಕ್ಕಳ ತುಂಬು ಸಂಸಾರಕ್ಕೆ ಎಳೆಯ ವಯಸ್ಸಿನಲ್ಲಿ ಪ್ರವೇಶಿಸಿದರೂ ಬದುಕು ಪೂರಾ ನಿರ್ಭಿಡೆಯಿಂದ ಹಾಡಿದರು. ಉಸಿರ ಕೊನೆಯವರೆಗೂ ಬರೆದಿಟ್ಟರು. ಜಾನಕಮ್ಮ ೧೯೪೦ರ ಸುಮಾರಿಗೆ ಬರೆದಿಡುವ ಹವ್ಯಾಸ ಬೆಳೆಸಿಕೊಂಡರು.ಅವರಿಗೆ ಕ್ಲಿಷ್ಟಪದಗಳನ್ನು ಬರೆಯುವುದು ಕಷ್ಟವಾಗುತ್ತಿತ್ತು. ಕಾಗುಣಿತದ ತಪ್ಪುಗಳೂ ಉಂಟಾಗುತ್ತಿದ್ದವು. ತೌರಿಗೆ ಬಂದಾಗ ತಮ್ಮ ಕೃಷ್ಣಶಾಸ್ತ್ರಿಯ ಕೈಗೆ ಕೊಟ್ಟು ತಿದ್ದಿಸಿಕೊಳ್ಳುವರು ಎಂದು ಲೇಖಕಿ ವಿವರಿಸುತ್ತಾರೆ. ಸ್ವತಂತ್ರಪೂರ್ವ ಕಾಲದ ಜಾನಕಮ್ಮನವರ ಬದುಕು ಹಾಗೂ ಕಾಲದಲ್ಲಿ ಕವಿತೆ ರಚಿಸುವಾಗ ಸಮಾಜ ಅವರನ್ನು ನೋಡುತ್ತಿದ್ದ ರೀತಿ ಇತ್ಯಾದಿ ವಿವರಗಳನ್ನು ಲೇಖಕಿ ಸಮಗ್ರವಾಗಿ ಸಂಕಲಿಸಿದ್ದಾರೆ.

ನೊಬೆಲ್ ಪ್ರಶಸ್ತಿ ವಿಜೇತ ಮಹಿಳಾ ವಿಜ್ಞಾನಿಗಳು

ಸಂಶೋಧನೆಗಳನ್ನು ಕೈಗೊಂಡ ನೊಬೆಲ್ ಪಾರಿತೋಷಕಗಳನ್ನು ಗಳಿಸಿದ ಮಹಿಳಾ ವಿಜ್ಞಾನಿಗಳ ಬದುಕಿನ ಸಾಧನೆಗಳನ್ನು ಲೇಖಕಿ ನೇಮಿಚಂದ್ರ ಇಲ್ಲಿ ದಾಖಲಿಸಿದ್ದಾರೆ.

ಮೇರಿಕ್ಯೂರಿ (೧೯೦೩, ೧೯೧೧ರಲ್ಲಿ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ)

ಐರೀನ್ ಚೋಲಿಯೋ ಕ್ಯೂರಿ (೧೯೩೫ - ರಸಾಯನಶಾಸ್ತ್ರ)

ಗರ್ಟಿ ತೆರೇಸಾ ಕೋರಿ (೧೯೪೭ ವೈದ್ಯಶಾಸ್ತ್ರ)

ಮರಿಯಾ ಗೋಪರ್ಟ್ ಮೇಯರ್ (೧೯೬೩ - ಭೌತಶಾಸ್ತ್ರ)

ಡರೋತಿ ಕ್ರೊಪ್ಹುಟ್ ಹಾಜ್ಕಿನ್ (೧೯೬೪ - ರಸಾಯನಶಾಸ್ತ್ರ)

ರೋಸಾಲಿನ್ ಯಾಲೋ (೧೯೭೭ - ವೈದ್ಯಶಾಸ್ತ್ರ)

ಮ್ಯಾಕ್ ಕ್ಲಿಂಟ್‌ಕ್ ಬಾರ್ಬರ (೧೯೮೩ - ವೈದ್ಯಶಾಸ್ತ್ರ)

ರೀಟಾ ಲೆವಿ ಮಾಂಟಾಲ್ಜಿನಿ (೧೯೮೬ - ವೈದ್ಯಶಾಸ್ತ್ರ)

ಗರಟ್ರೂಡ್ ಬಿ. ಇಲಿಯನ್ (೧೯೮೮ - ವೈದ್ಯಶಾಸ್ತ್ರ)

ಕ್ರಿಸ್ತೀನ್ ನುಸ್‌ಲಾಯ್ನ್ ವೋಲ್‌ಹಾರ್ಡ್ (೧೯೯೫ - ವೈದ್ಯಶಾಸ್ತ್ರ)

ಈ ಹತ್ತು ಮಹಿಳಾ ವಿಜ್ಞಾನಿಗಳೂ ಮನೆ, ಮಕ್ಕಳು, ಸಂಸಾರದ ಜವಾಬ್ದಾರಿಗಳ ಜೊತೆಗೇ ತಮ್ಮ ಇಷ್ಟವುಳ್ಳ ಕ್ಷೇತ್ರದಲ್ಲಿ ಸಾಧನೆಮಾಡಿ ಕೀರ್ತಿಯನ್ನು ಗಳಿಸಿದರು. ಇವರು ಆಯ್ಕೆ ಮಾಡಿದ ಪುರುಷ ಸಂಗಾತಿಗಳೂ ಕೂಡಾ ಪತ್ನಿಯರ ಪ್ರತಿಭೆಯನ್ನು ಪೋಷಿಸಿ ಸಹಕಾರ ನೀಡಿದವರು. ಈ ತೆರನಾದ ವಿವಿಧ ವಿಜ್ಞಾನಿಗಳ ಜೀವನ ಸಾಧನೆಯನ್ನು ಗುರುತಿಸಬಹುದಾಗಿದೆ. ಇಂಥ ಅಸಾಧಾರಣ ಸಾಧನೆಗೈದ ಮಹಿಳೆಯರನ್ನು ಪರಿಚಯಿಸಿದ ಲೇಖಕಿ ನೇಮಿಚಂದ್ರ ಅಭಿನಂದನಾರ್ಹರು.

ಪ್ರವಾಸ ಕಥನ

ಒಂದು ಕನಸಿನ ಪಯಣ

ಇದೊಂದು ಪ್ರವಾಸ ಕಥನ. ಪ್ರವಾಸ ಕೈಗೊಳ್ಳಲು ಉದ್ದೇಶ ಇರಲೇಬೇಕೆಂದಿಲ್ಲ. ಬೇಕನ್ ಎಂಬಾತ 'ಚಿಕ್ಕವರಿಗೆ ಪ್ರವಾಸ ಒಂದು ಶಿಕ್ಷಣ, ದೊಡ್ಡವರಿಗೆ ಒಂದು ಅನುಭವ' ಎಂದಿದ್ದಾನೆ. 'ಕೋಶ ಓದು ದೇಶ ನೋಡು' ಎಂಬ ಗಾದೆಯ ಅಂತರಾರ್ಥ ಜೀವನಾನುಭವವೇ ಆಗಿದೆ. ಹೀಗೆ ಲೇಖಕಿ ನೇಮಿಚಂದ್ರರು ತಮ್ಮ ಯುರೋಪಿನ ಪ್ರವಾಸದ ಅನುಭವಗಳನ್ನು ಈ ಕೃತಿಯಲ್ಲಿ ಚಿತ್ರಿಸಿದ್ದಾರೆ.

ಲೇಖಕಿ ಇಡೀ ಯುರೋಪನ್ನು ತಮ್ಮ ಗೆಳತಿ ಹೇಮಲತಾ ಮಹಿಷಿಯವರೊಡನೆ ಸುತ್ತಾಡಿ ಬಂದು ಬರೆದ ಪ್ರವಾಸ ಕಥನವಾಗಿದೆ. ಇದು ಕೇವಲ ಪ್ರವಾಸ ಕಥನ ಮಾತ್ರವಾಗಿರದೆ,

ಖಗೋಳಶಾಸ್ತ್ರಜ್ಞೆ ಕ್ಯಾರೋಲಿನ್ ಹರ್ಷಲ್ ಕತೆ, ಐನ್‌ಸ್ಟೈನ್‌ರ ಪತ್ನಿ ವಿವರ, ಪ್ಯಾರಿಸ್‌ನಲ್ಲಿ ಮೇರಿಕ್ಯೂರಿಯ ಶಾಲೆಯನ್ನು ಹುಡುಕಿ ಹೊರಟದ್ದಾಗಿರಬಹುದು. ಇವೆಲ್ಲವೂ ಮುಖ್ಯವಾಗಿ ಲೇಖಕಿಯ ಆಸಕ್ತಿಯ ಅಭಿವ್ಯಕ್ತಿಗಳಾದ ಕಾರಣದಿಂದಾಗಿ ಲೇಖಕಿ ಇಡೀ ಯುರೋಪಿನ, ಮಹಿಳಾ ಸಾಹಿತಿಗಳ ಮಹಿಳಾ ವಿಜ್ಞಾನಿಗಳ, ರೋಚಕ ಉಪಕತೆಯೊಂದಿಗೆ ಈ ಪ್ರವಾಸ ಕಥನ ರಚಿಸಿದ್ದಾರೆ. ಪ್ರಸ್ತುತ ಪ್ರವಾಸ ಕಥನದ ವಿಶೇಷತೆ ಗುರುತಿಸಿ ೨೦೦೧ನೇ ವರ್ಷದಲ್ಲಿ ಮಾತೃಶ್ರೀ ರತ್ನಮ್ಮ ಹೆಗ್ಗಡೆ ಪ್ರಶಸ್ತಿ ಮತ್ತು ವಿಶ್ವೇಶ್ವರಯ್ಯ ಪ್ರಶಸ್ತಿಗಳೆರಡನ್ನು ಲೇಖಕಿಗೆ ನೀಡಲಾಗಿದೆ.

ಪೆರುವಿನ ಪವಿತ್ರ ಕಣಿವೆಯಲ್ಲಿ

ನೇಮಿಚಂದ್ರರ ಮತ್ತೊಂದು ಪ್ರವಾಸ ಕಥನ "ಪೆರುವಿನ ಪವಿತ್ರ ಕಣಿವೆಯಲ್ಲಿ". ಈ ಪ್ರವಾಸ ಕಥನ ಕುರಿತಾಗಿ ರಹಮತ್ ತರೀಕೆರೆ ಈ ರೀತಿಯಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ''...ತಿರುಗಾಟವು ಕೇವಲ ಹೊಸ ಹೊಸ ಅರಿವು ಅನುಭವಗಳಿಗೆ ಮಾತ್ರ ಕಾರಣವಾಗುವುದಿಲ್ಲ. ಅದು ಜಾತಿ, ಮತ, ಭಾಷೆ, ದೇಶಗಳ ಹೆಸರಲ್ಲಿ ನಾವು ಕಟ್ಟಿಕೊಂಡಿರುವ ಸಣ್ಣತನಗಳನ್ನು ಕಳೆದು ಹಾಕಿಬಿಡುತ್ತದೆ. ಈ ಅರ್ಥದಲ್ಲಿ ಪ್ರವಾಸವು ಎಂದೂ ಜಾತ್ಯಾತೀತವಾದುದು ಮತ್ತು ದಾರ್ಶನಿಕವಾದುದು. ಪ್ರವಾಸ ಕಥನಗಳಲ್ಲಿ ಪ್ರವಾಸಿಗರ ದೇಶದ ನೆನಪು ಎರಡು ಬಗೆಯಲ್ಲಿ ಕಾಣಿಸಿಕೊಳ್ಳುತ್ತದೆ. ಒಂದೂ ಇದು ಪರದೇಶವನ್ನು ಅಲ್ಲಗಳೆಯುತ್ತ ನಮ್ಮ ಗತಕಾಲದ ಆಧ್ಯಾತ್ಮಿಕ ಪರಂಪರೆಯನ್ನು ವೈಭವೀಕರಿಸುವುದಕ್ಕಾಗಿ ಬರುತ್ತದೆ. ಇಲ್ಲವೇ ಶ್ರೀಮಂತ ದೇಶಗಳ ಅಭಿವೃದ್ಧಿ, ಶಿಸ್ತು, ಅಚ್ಚುಕಟ್ಟುತನ ಪ್ರಾಮಾಣಿಕತೆಗಳನ್ನು ಕೊಂಡಾಡುತ್ತಾ ನಮ್ಮನ್ನು ನಾವು ಹಳಿದು ಕೊಳ್ಳುವುದಾಕ್ಕಾಗಿ ಬರುತ್ತದೆ. ಆದರೆ ಪ್ರವಾಸದಲ್ಲಿ ಸಿಗುವ ನೋಟಗಳು ಆತ್ಮನಿಂದನೆಗೂ ಆತ್ಮಸ್ತುತಿಗೂ ಕಾರಣವಾಗಬೇಕಿಲ್ಲ; ಬದಲಿಗೆ ಆತ್ಮವಿಮರ್ಶೆಗೂ ಆತ್ಮಪ್ರತ್ಯಯಕ್ಕೂ ಪ್ರೇರಣೆ ಕೊಡಲು ಸಾಧ್ಯವಾಗುವುದಾದರೆ, ಪರಿಣಾಮ ಭಿನ್ನವಾಗಿರಬಲ್ಲದು. ಆಗ ಪ್ರವಾಸ ಕಲಿಕೆಯಾಗುತ್ತದೆ, ಅರಿವಿನ ಪಯಣವಾಗುತ್ತದೆ, ಕನ್ನಡಿಯ ನೋಟವಾಗುತ್ತದೆ, ಚಿಂತನೆಯಾಗುತ್ತದೆ. ಇಂತಹ ಕನ್ನಡ ನೋಟದ ಕೆಲಸವನ್ನು ಈ ಕೃತಿ ಮಾಡುತ್ತದೆ"(ನೇಮಿಚಂದ್ರ, ೨೦೦೮, ಪು. ೪).

ಹಾಗೆಯೆ ಕಾರುಣ್ಯರವರು ಈ ಕೃತಿಯ ಕುರಿತಾಗಿ ಈ ರೀತಿಯ ಮಾತುಗಳನ್ನಾಡಿದ್ದಾರೆ. ...ತಮ್ಮ ಪ್ರವಾಸದುದ್ದಕ್ಕೂ ವರ್ತಮಾನದ ಕಣ್ಣಿನಿಂದ ಪೆರುವಿನ ಇತಿಹಾಸವನ್ನು ಸಂಗ್ರಹಿಸುತ್ತಾ ಹೋಗುತ್ತಾರೆ. ಮೂಲತಃ ಕತೆಗಾರ್ತಿಯಾಗಿರುವ ನೇಮಿಚಂದ್ರರ ಗದ್ಯಕ್ಕೆ ಕಾವ್ಯದ ಸ್ಪರ್ಶವಿದೆ. ಸಂಗ್ರಹಿಸಿದ ಇತಿಹಾಸವನ್ನು ಬರೇ ವರದಿಯ ರೂಪದಲ್ಲಿ ಮಂಡಿಸುತ್ತಾ ಹೋಗುವುದಿಲ್ಲ. ಆದ್ದರಿಂದ ಇಡೀ ಪ್ರವಾಸ ಲೇಖನಕ್ಕೆ ಕಥನ ಗುಣವಿದೆ.

ಲೇಖಕಿಗೆ ಎಲ್ಲೂ ಪ್ರದೇಶಗಳನ್ನು ವಿವರಿಸಲು ಮಧ್ಯವರ್ತಿಗಳಿಲ್ಲ. ಆದುದರಿಂದ ಈ ಕೃತಿ ಯಾವನೋ ಒಬ್ಬ ಗೈಡ್ ಹೇಳಿದ ವಿವರವಾಗುವ ಅಪಾಯವೂ ತಪ್ಪಿದೆ. ಇಂಗ್ಲೀಷ್ ಬಾರದ

ಜನರೊಂದಿಗೆ ಮೂಕ ಭಾಷೆಯಲ್ಲಿ ವ್ಯವಹರಿಸುವ ಮೂಲಕ ಅವರನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಬಡತನ ದುಡಿಮೆಯ ನಡುವೆಯೂ ಅವರ ಹೃದಯವಂತಿಕೆಯನ್ನು ಗುರುತಿಸುವಲ್ಲಿ, ಮೂಕಭಾಷೆಯಿಂದ ಯಶಸ್ವಿಯಾಗುತ್ತಾರೆ''(ನೇಮಿಚಂದ್ರ, ೨೦೦೮, ಪು. ೪).

'ಪೆರು' ದೇಶವನ್ನು ಪರಿಚಯಿಸುವ ಪುಸ್ತಕವೊಂದನ್ನು ಓದಿ ಆ ದೇಶದ ಅಮೆಜಾನ್ ನದಿ, ಕಾಡು ಇತ್ಯಾದಿಗಳ ಬಗ್ಗೆ ಕುತೂಹಲ ಬೆಳೆಸಿಕೊಂಡ ಕತೆಗಾರ್ತಿ ಮತ್ತು ವಿಜ್ಞಾನ ಲೇಖಕಿ ನೇಮಿಚಂದ್ರ ಅವರು ಪೆರುವಿನಲ್ಲಿ ಮಾಡಿದ ಪ್ರವಾಸದ ಅನುಭವಗಳನ್ನು ಈ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಅಮೇರಿಕಾದ ಉದ್ದಗಲದಕ್ಕೂ ಸುತ್ತಾಡಿ ಆ ದೇಶದ ಜನರ 'ಎಲ್ಲವನ್ನೂ ಬಳಸು, ಬಿಸಾಕು' ಧೋರಣೆಯ ಅತಿರೇಕಗಳನ್ನು ಕಂಡು ಅಚ್ಚರಿ ಪಡುತ್ತಲೇ ಅದಕ್ಕೆ ತದ್ವಿರುದ್ಧವಾದ ಪುರಾತನ ಸಂಸ್ಕೃತಿಯ 'ಪೆರು' ಆಸಕ್ತಿಗೆ ಪೂರಕವಾಗಿ ಪೆರುವಿನ ಸಂಸ್ಕೃತಿ, ಇತಿಹಾಸ, ರಾಜಕೀಯ ವ್ಯವಸ್ಥೆ, ಮಹಿಳಾ ಹೋರಾಟ, ಅಮೆಜಾನ್ ನದಿ ಮತ್ತು ಕಾಡು ನೋಡಿದ ವಿವರಗಳು ಕುತೂಹಲ ಹುಟ್ಟಿಸುತ್ತವೆ. ಈ ಪ್ರವಾಸ ಕಥನದ ಒಂದೊಂದೇ ಲೇಖನ ಓದುತ್ತಾ ಹೋದಂತೆ ಬದುಕಿನ ಹಲವು ಮುಖಗಳ ಪರಿಚಯವಾಗುತ್ತದೆ. ಇದೊಂದು ಮಹತ್ವಪೂರ್ಣ ಕೃತಿ ಎಂದು ಹೇಳಬಹುದು.

ಅನುವಾದ

ನನ್ನ ಕತೆ...ನಮ್ಮ ಕತೆ

ಫ್ಲೇವಿಯಾ ಅವರ ಬದುಕಿನ ಸಾಹಸಗಾಥೆಯಾದ ಈ ಆತ್ಮಚರಿತ್ರೆಯನ್ನು ನೇಮಿಚಂದ್ರ ಅವರು ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಸ್ತ್ರೀವಾದಿ ಸಾಹಿತ್ಯ ಹಾಗೂ ಬದುಕಿನ ಅಪರೂಪದ ಆತ್ಮಕಥನವಾಗಿ ಈ ಕೃತಿ ಸಾಮಾಜಿಕ ಬದುಕಿನೊಳಗಿನ ವೈರುಧ್ಯಗಳನ್ನು ಎತ್ತಿ ತೋರುತ್ತದೆ. ಈ ಸಾಹಸಗಾಥೆಯ ಕುರಿತಾಗಿ ಲೇಖಕಿ ಈ ರೀತಿ ಹೇಳುತ್ತಾರೆ. ''ಇದು ಕೌಟುಂಬಿಕ ಕ್ರೌರ್ಯದಲ್ಲಿ ಛಿದ್ರ ಛಿದ್ರಗೊಂಡು ಮತ್ತೆ ಪುನರುಜ್ಜೀವನಗೊಂಡ ಫ್ಲೇವಿಯಾರ ಕತೆ. ನೂರು ಸೋಲಿನ ಅಂಚಿನಲ್ಲೂ ಜಯದ ಕನಸು ಕಂಡ ದಿಟ್ಟ ಹೆಣ್ಣಿನ ಕತೆ. ಹಿಂಸೆಯ ವಿವಾಹದ ಈ ಕತೆ ಕೇವಲ ಫ್ಲೇವಿಯಾರ ಕತೆಯಾಗಿ ಮುಗಿಯುವುದಿಲ್ಲ. ಮುಸುಕಿನ ಮರೆಯಲ್ಲಿ ಅನುಭವಿಸುತ್ತಿರುವ ನಮ್ಮ ನಡುವಿನ ನೂರಾರು ಹೆಂಗಳೆಯರ ನೋವಿನ ಕತೆ ಇದು. ಓರ್ವ ಸಾಮಾನ್ಯ ಗೃಹಿಣಿಯ ಅಸಾಧಾರಣ ಸಾಧನೆಯ ಕತೆ'' (ನೇಮಿಚಂದ್ರ, ೧೯೯೯(ii), ಪುಟ.೯) ವೈವಾಹಿಕ ಬದುಕಿನಲ್ಲಿ ಗಂಡನ ಹೊಡೆತ-ಕಿರುಕುಳ ಕೇವಲ ಕೆಳವರ್ಗಕ್ಕೆ, ಅವಿದ್ಯಾವಂತರಿಗೆ ಮಾತ್ರ ಅನ್ವಯಿಸುತ್ತದೆ. ಕುಡುಕರು, ಕೆಡುಕರು ಮಾತ್ರ ಹೊಡೆಯುತ್ತಾರೆ ಎಂಬ ತಪ್ಪು ಕಲ್ಪನೆಯನ್ನು ಈ ಕೃತಿ ಹುಸಿ ಎಂದು ತೋರಿಸುತ್ತದೆ.

ಕೌಟುಂಬಿಕ ಹಿಂಸೆ ನಮ್ಮ ಸಮಾಜದಲ್ಲಿ ಬೆಳಕಿಗೆ ಬಾರದೆ, ಸೆರಗಿನ ಮರೆಯಲ್ಲಿ, ಬಿಗಿದ ತುಟಿಗಳ ಬಿಕ್ಕುಗಳಲ್ಲಿ ತಡೆದು ಮುಗಿಯುತ್ತದೆ. ಕ್ರೌರ್ಯ ತುಂಬಿದ ವಿವಾಹದಲ್ಲೇ ಕಡೆಯವರೆಗೂ

ಉಳಿದು ತಮ್ಮೊಡನೆ ತಮ್ಮ ಕರ್ಮ ಕತೆಯನ್ನು ನಿಗೂಢವಾಗಿ ಉಳಿಸಿಹೋಗುವವರೇ ಹೆಚ್ಚು. ಅತ್ಯಂತ ದುಃಖದ ವಿಚಾರವೆಂದರೆ 'ಮನೆತನ ಗೌರವ' ಎಂಬ ಪದಗಳಿಗೆ ಜೋತುಬಿದ್ದು ವಿವಾಹದೊಳಗಿನ ದೌರ್ಜನ್ಯ ವರದಿಯಾಗದೆ ಉಳಿಯುತ್ತದೆ. ಅನಿವಾರ್ಯವೆಂಬಂತೆ ಅನುಭವಿಸುವವರು ಜೀವನವಿಡೀ ಬಡಿಸಿಕೊಂಡು ಬದುಕುತ್ತಾರೆ. ಅಸಾಧ್ಯವೆನಿಸಿದಾಗ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಇಂಥ ಹಿಂಸೆಯ ಸಂಬಂಧವನ್ನು ಬಯಲಿಗಿಟ್ಟು, ಓದು ಉದ್ಯೋಗವಿಲ್ಲದಿದ್ದರೂ ಹೊರಬಂದು ತಮ್ಮ ಕಾಲ ಮೇಲೆ ನಿಂತವರು ಅಪರೂಪ. ಇಂಥ ಅಪರೂಪದ ಮಹಿಳೆ ಫ್ಲೇವಿಯಾ. ಪ್ರಥಮ ನೀರ್ಜಾ ಭನೋಟ್ ಪ್ರಶಸ್ತಿ ಪಡೆದ ಫ್ಲೇಮಿಯಾ, ೧೫ ವರ್ಷಗಳ ಕಾಲ ಸಿಕ್ಕಿಬಿದ್ದ ಹಿಂಸೆಯ ವಿವಾಹದಾಚೆಗೆ ಸಿಡಿದು ನಡೆದ ದಿಟ್ಟ ಮಹಿಳೆ. ಈ ಮಹಿಳೆ ಮಾಡಿದ ದಾಖಲೆಗಳನ್ನು ನೇಮಿಚಂದ್ರರು ನನ್ನ ಕತೆ .... ನಮ್ಮ ಕತೆಯ ಕೃತಿಯ ರೂಪದಲ್ಲಿ ಅನುವಾದಿಸಿದ್ದಾರೆ. ಮೂಲ ಕೃತಿಗೆ ಧಕ್ಕೆ ಬಾರದ ರೀತಿಯಲ್ಲಿ ಅನುವಾದಿಸಿದ್ದಾರೆ. ನೇಮಿಚಂದ್ರರು ಕೈ ಹಾಕದ ಸಾಹಿತ್ಯ ವಲಯವೇ ಇಲ್ಲವೆಂದು ಇದರಿಂದ ಸ್ಪಷ್ಟವಾಗುತ್ತದೆ.

ಕೇವಲ ಒಂದು ದಶಕದಲ್ಲಿ ಹಿಂಸೆಯ ವಿವಾಹದಲ್ಲಿ ಸಿಕ್ಕಿಬಿದ್ದ ಸಾಮಾನ್ಯ ಗೃಹಿಣಿ, ಫ್ಲೇವಿಯಾ, ಯಶಸ್ವೀ ಸ್ತ್ರೀವಾದಿ ನ್ಯಾಯವಾದಿಯಾಗಿ ಬೆಳೆದು ನಿಂತರು. ಇಂದು ಫ್ಲೇವಿಯಾ ಕೇವಲ ನ್ಯಾಯವಾದಿ ಮಾತ್ರವಲ್ಲ, ಅಪರೂಪದ ಸ್ತ್ರೀ ದೃಷ್ಟಿಕೋನದ ನ್ಯಾಯಾವಾದಿಯಾದುದನ್ನು ಕೃತಿಯು ಚಿತ್ರಿಸುತ್ತದೆ. ಪ್ರತಿ ಹೆಣ್ಣಿನಲ್ಲಿರುವ ಸ್ತ್ರೀ ಶಕ್ತಿಯನ್ನು ಜಾಗೃತಗೊಳಿಸುವ ನಿಟ್ಟಿನಲ್ಲಿ ಈ ಕೃತಿಯೂ ಕೈಗನ್ನಡಿಯಾಗಿದೆ "ವಿಪರ್ಯಾಸವಿತ್ತು ನಾನು, ನನ್ನದೇ ವಿಚ್ಛೇದನವನ್ನು ಪಡೆಯಲಾರದವಳು, ಇಂದು ಇಡೀ ದಿನ ಕೋರ್ಟಿನ ಮೊಗಸಾಲೆಯಲ್ಲಿ ಇತರ ಹೆಂಗಸರಿಗೆ ವಿಚ್ಛೇದನ ಕೊಡಿಸುವುದರಲ್ಲಿ ಬಿಡುವಿಲ್ಲದಂತೆ ಓಡಾಡುತ್ತಿದ್ದೇನೆ" ಎಂದು ಫ್ಲೇವಿಯಾ ಅಭಿಪ್ರಾಯಿಸುತ್ತಾರೆ. (ನೇಮಿಚಂದ್ರ, ೧೯೯೯(ii), ಪು.೭೨) "ಆತ್ಮಚರಿತ್ರೆಗಳನ್ನು ಯಶಸ್ವಿ ವ್ಯಕ್ತಿಗಳು ಮಾತ್ರ ಬರೆಯುತ್ತಾರೆ. ಬದುಕಿನಲ್ಲಿ ಸೋತವರಲ್ಲ" ಎನ್ನುತ್ತಾರೆ ಲೇಖಕಿ ನೇಮಿಚಂದ್ರ.

ಸಂಕೀರ್ಣ

ನೇಮಿಚಂದ್ರರ ಸ್ತ್ರೀವಾದಿ ದೃಷ್ಟಿಕೋನದ ವೈಚಾರಿಕ ಬರಹಗಳನ್ನು, ಮಹಿಳಾಲೋಕ, ಮಹಿಳಾ ಅಧ್ಯಯನ, ಸಾಹಿತ್ಯ ಮತ್ತು ವಿಜ್ಞಾನ ಕೃತಿಯಲ್ಲಿ ಗುರುತಿಸಬಹುದು.

ಬದುಕು ಬದಲಿಸಬಹುದು

"ಬದುಕು ಬದಲಿಸಬಹುದು" ಕೃತಿಯಲ್ಲಿನ ಒಂದೊಂದು ಲೇಖನವು ಬದುಕಿನ ಹಲವು ಮುಖಗಳ ಪರಿಚಯ ಮಾಡಿಸುತ್ತದೆ. ನೋವು ನಲಿವಿನ, ನಿಟ್ಟುಸಿರಿನ ತುಣುಕುಗಳು ಸೇರಿಯೇ ಈ ಬದುಕು ನಡೆಯುತ್ತದೆ ಎಂಬುದನ್ನು ಸೋಲನ್ನು, ನೋವನ್ನು, ನಿರಾಶೆಯನ್ನು, ಕೆಲವೊಮ್ಮೆ, ತನ್ನ ತಪ್ಪಿಲ್ಲದಿದ್ದರೂ ಒದಗಿ ಬರುವ ಅಪಮಾನವನ್ನು ಹೇಗೆ ಎದುರಿಸಬೇಕೆಂಬುದನ್ನು, ಮುಗ್ಗುರಿಸಿ

ಬಿದ್ದರೂ ಎದ್ದು ಕೊಡವಿ ನಡೆಯುವ ತಾಕತ್ತನ್ನು, ಸತ್ತು ಮುಗಿಯದೆ ಇದ್ದು ಬದುಕುವ ದಿಟ್ಟತನವನ್ನೂ, ಮತ್ತೆ ಪ್ರಾರಂಭಿಸಬಲ್ಲ ಛಲವನ್ನು ಓದುಗರ ತಲೆಗೂ ಹೋಗಿಸುವ ಲೇಖನಗಳಿವು. 'ಸ್ನೇಹಕ್ಕೆ ಯಾವ ಸರಹದ್ದು' ಎನ್ನುವ ಲೇಖನದಲ್ಲಿ ಮನುಷ್ಯ-ಮನುಷ್ಯರ ನಡುವೆ ಸ್ನೇಹದ ಸೇತುವೆ ನಿರ್ಮಾಣವಾಗಲು ಅರೆಗಳಿಗೆ ಸಾಕು ಎಂದು ಹೇಳುತ್ತಾ ಯಾರ್ಕ್‌ಶೈರ್‌ಗೆ ಹೋದ ಅನುಭವವನ್ನು ಹೇಳಿಕೊಳ್ಳುತ್ತಾರೆ. ಹೀಗೆ ಇಲ್ಲಿಯ ೪೫ ಲೇಖನಗಳಲ್ಲಿ ತಮ್ಮ ಬದುಕಿನ ವಿವಿಧ ಅನುಭವಗಳನ್ನು ಚಿತ್ರಿಸಿದ್ದಾರೆ.

ಸೃಜನೇತರ ಬರವಣಿಗೆಯನ್ನು ಮೈಗೂಡಿಸಿಕೊಂಡಿರುವ ಲೇಖಕಿ ನೇಮಿಚಂದ್ರರು ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಮಹಿಳೆಯರನ್ನು ಕುರಿತು ಪುಸ್ತಕಗಳನ್ನು ರಚಿಸಿದ್ದಾರೆ. ಸಾಹಿತ್ಯ, ವಿಜ್ಞಾನ, ವೈದ್ಯಕೀಯ ಹೀಗೆ ಹಲವು ಕ್ಷೇತ್ರದಲ್ಲಿ ಮಹಿಳೆಯ ಸಾಧನೆಯ ಮೈಲುಗಲ್ಲುಗಳನ್ನು ಇಲ್ಲಿ ನೆನೆದಿದ್ದಾರೆ. ಹೀಗೆ ಬೇರೆ ಬೇರೆ ರಂಗಗಳಲ್ಲಿ ದುಡಿದ ಮಹನೀಯರ ಬಗೆಗೆ ವ್ಯಕ್ತಿ ಚಿತ್ರಗಳನ್ನು "ದುಡಿವ ಹಾದಿಯಲಿ ಜೊತೆಯಾಗಿ" ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ವ್ಯಕ್ತಿ ವಿಕಸನ ಸಂಬಂಧಿ ಲೇಖನಗಳನ್ನು ಇದು ಒಳಗೊಂಡಿದೆ.

ಮಹಿಳಾ ಅಧ್ಯಯನ

ತಮ್ಮ ಕತೆ ಮತ್ತು ಲೇಖನಗಳ ಮೂಲಕ ಪರಿಚಿತರಾದ ನೇಮಿಚಂದ್ರ ಅವರ 'ಮಹಿಳಾ ಅಧ್ಯಯನ'ಕ್ಕೆ ಸಂಬಂಧಿಸಿದ ಲೇಖನಗಳ ಸಂಗ್ರಹವಿದು. ವಿಜ್ಞಾನ, ತಂತ್ರಜ್ಞಾನ, ವೈಮಾನಿಕ ರಂಗಗಳ ಮಹಿಳಾ ಪರಂಪರೆ ಮತ್ತು ಸಾಧನೆ ಇವರ ತೀವ್ರ ಆಸಕ್ತಿ ಮತ್ತು ಅಧ್ಯಯನದ ವಿಷಯವಾದ ಕಾರಣ, ಇಲ್ಲಿಯ ಅನೇಕ ಲೇಖನಗಳು ಈ ವಿಷಯಕ್ಕೆ ಸಂಬಂಧಿಸಿವೆ. ಒಟ್ಟು ಹದಿನೆಂಟು ಲೇಖನಗಳ ಸಂಗ್ರಹವಿದು. ಇದರಲ್ಲಿ ವೈಚಾರಿಕ ಲೇಖನಗಳೂ ಸೇರಿಕೊಂಡಿವೆ.

'ಸ್ತ್ರೀವಾದಿ ಚಿಂತನೆ ಮತ್ತು ನನ್ನ ಬರಹ' ಲೇಖನದಲ್ಲಿ ಕತೆಗಳ ರಚನೆಗೆ ಹಿನ್ನೆಲೆಯನ್ನು ಪ್ರಸ್ತಾಪಿಸಿದ್ದಾರೆ. ಸ್ತ್ರೀವಾದಿ ದೃಷ್ಟಿಕೋನವು 'ಹೊಸ ಹುಟ್ಟು', 'ಮತ್ತೆ ಬರೆದ ಕವನಗಳು' ಕತೆಗಳು ನಿರ್ಮಾಣವಾಗಲಿಕ್ಕೆ ಆಂತರಿಕವಾಗಿ ಪ್ರೋತ್ಸಾಹ ನೀಡಿತು ಎನ್ನುತ್ತಾರೆ ಲೇಖಕಿ. "ಒಂದು ಕೃತಿ, ಕೃತಿಕಾರಳ ಜೀವನ ದರ್ಶನ ಧೋರಣೆ ಚಿಂತನೆಗಳನ್ನು ಪ್ರತಿಬಿಂಬಿಸಬೇಕು, ಬರಹದಲ್ಲಿ ಅಪ್ಪಟ ಸ್ತ್ರೀವಾದಿಯಾಗಿ, ನಿಜ. ಬದುಕಿನಲ್ಲಿ ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುವುದು ನಮಗೆ ವಿಚಿತ್ರವಾಗಿ, ಅಪ್ರಮಾಣಿಕವಾಗಿ ಕಾಣುತ್ತದೆ. ನಿಜ ನಮ್ಮ ಸ್ತ್ರೀವಾದಿ ಧೋರಣೆಗಳೆಲ್ಲವನ್ನೂ ಒಮ್ಮೆಗೇ ಅಳವಡಿಸುವುದು ಸುಲಬವಲ್ಲ. ಆದರೆ ಆ ಸ್ತ್ರೀವಾದದಲ್ಲಿ ಅದರ ವಾಸ್ತವೀಕರಣದಲ್ಲಿ ನಮಗೆ ಮೊದಲು ನಂಬುಗೆ ಇರಬೇಕು. ಅದನ್ನು ಬದುಕಿಗಳವಡಿಸುವ ಪ್ರಜ್ಞಾಪೂರ್ವಕ ಪ್ರಯತ್ನ ನಮ್ಮಿಂದಾಗಬೇಕು ಎಂದು ಬಯಸುತ್ತೇನೆ" ಎಂದು ಸ್ತ್ರೀವಾದದ ವಾಸ್ತವತೆಯನ್ನು ಕುರಿತು ಚರ್ಚಿಸುತ್ತಾರೆ (ನೇಮಿಚಂದ್ರ, ೨೦೦೧(ii), ಪು. ೧೫೦).

ಪತಿತೆಯ ಪರ ನಿಂತು ಹೋರಾಡಿದ ಜೋಸೆಫೀನ್ ಬಟ್ಲರ್ ಲೇಖನವು ವೇಶ್ಯೆಯರ ಪರ ಹೋರಾಡಿದ ಮಹಿಳೆಯ ಕುರಿತಾಗಿ ಪರಿಚಯ ಮಾಡಿಕೊಡುತ್ತದೆ. ಸಾಮಾಜಿಕ ನ್ಯಾಯ ಮತ್ತು ಸ್ತ್ರೀ ಪುರುಷರ ಸಮಾನತೆಯತ್ತ ಹೋರಾಡುತ್ತಿರುವ ಇಂಗ್ಲೆಂಡಿನ ಸಂಸ್ಥೆಯೇ ಜೋಸೆಫೀನ ಬಟ್ಲರ್ ಸೊಸೈಟಿ ವೇಶ್ಯೆಯರ ಸಹಾಯಕ್ಕೆ ಮುಂದಾದುದನ್ನು ಲೇಖಕಿ ತಿಳಿಸುತ್ತಾರೆ.

ಜೋಸೆಫೀನ್ ಬಟ್ಲರ್ ವೇಶ್ಯೆಯರ ಪರವಾಗಿ ಇನ್ನಿಲ್ಲದಂತೆ ಹೋರಾಡಿದಾಕೆ ಲಿಂಗಬೇಧ ನೀತಿಗಳ ವಿರುದ್ಧ ಒಂದೂವರೆ ಶತಮಾನಗಳ ಹಿಂದೆಯೇ ದನಿಯೆತ್ತಿದವಳು. ಜೋಸೆಫೀನ್ ಬಟ್ಲರ್ ಆಂಗ್ಲ ಸ್ತ್ರೀವಾದಿ, ಸಕ್ರೀಯ ಸಮಾಜ ಸೇವಕಿ. ಈಕೆ ನಾರ್ತ್ ಅಂಬರ್ಲ್ಯಾಂಡ್‌ನಲ್ಲಿ ೧೮೨೮ರಲ್ಲಿ ಜನಿಸಿದಳು. ಸಾಕಷ್ಟು ಶ್ರೀಮಂತ ಪ್ರಭಾವಶಾಲಿ, ಭೂಮಾಲೀಕರ ಕುಟುಂಬದಲ್ಲಿ ಹುಟ್ಟಿದಾಕೆ. ತಂದೆ ಜಾನ್ ಗ್ರೇ, ಕೃಷಿ ಸುಧಾರಣೆಯಲ್ಲಿ ತೊಡಗಿದವ, ಗುಲಾಮಗಿರಿ ಪದ್ಧತಿಯನ್ನು ರದ್ದು ಮಾಡುವತ್ತ ವಾದಿಸಿದವ. ಏಳು ಮಕ್ಕಳಲ್ಲಿ ಕಡೆಯವಳಾಗಿ, ಮುದ್ದಿನವಳಾಗಿ ಬೆಳೆದವಳು ಜೋಸೆಫೀನ್. ಈಕೆ ತಾಯಿಯಿಂದ ವಿದ್ಯಾಭ್ಯಾಸ ಪಡೆದಳು. ಅಲ್ಪಕಾಲ ನ್ಯೂಕ್ಯಾಸಲ್‌ನಲ್ಲಿ ಶಾಲೆಗೆ ಹೋದದ್ದು ಉಂಟು. ಬಾಲ್ಯದಿಂದಲೂ ಆಕೆ ಬೆಳೆದ ಪರಿಸರ ರಾಜಕೀಯ ವಾದ ವಿವಾದಗಳನ್ನು ಕುರಿತು ಸಾಕಷ್ಟು ಮಾಹಿತಿಯನ್ನು ಲೇಖನ ನೀಡುತ್ತದೆ. ಸಾಮಾಜಿಕ ಏಳುಬೀಳುಗಳು ಆಕೆಯನ್ನು ಅಳುಕಿಸಲಿಲ್ಲ. ಜೊತೆಗೆ ಜೋಸೆಫೀನರ ಹೋರಾಟಕ್ಕೆ ಪತಿಯ ಬೆಂಬಲವಿತ್ತು. ಅವರದು ಸುಗಮವಾಗಿ ಸಾಗಿದ, ಸುಖೀ ದಾಂಪತ್ಯ. ಜೋಸೆಫೀನ್ ಆಯ್ದ ಹಾದಿ ಕಲ್ಲು ಮುಳ್ಳಿನದಾಗಿತ್ತು ಎಂದು ಜೋಸೆಫೀರ ಸಾಧನೆಯನ್ನು ಕೂಲಂಕುಶವಾಗಿ ಪರಿಚಯಿಸಿದ್ದಾರೆ.

'ಸ್ವಾತಂತ್ರ್ಯ ಸಂಗ್ರಾಮದ ಓರ್ವ ಸ್ವಾಭಿಮಾನಿ ಮಹಿಳೆ ಅತ್ತರ್ ಕೌರ್' ಲೇಖನವು ಜಲಿಯನ್ ವಾಲಾಬಾಗ್ ದುರಂತದಲ್ಲಿ ಹುತಾತ್ಮನಾದ ಪತಿಯ ಹೆಣಕ್ಕೆ ಹೆಗಲುಕೊಟ್ಟು ಮನೆಗೆ ಹೊತ್ತು ತಂದ ಗರ್ಭಿಣಿ ಅತ್ತರರೌರ್‌ನ ಸಾಹಸವನ್ನು ಪರಿಚಯಿಸುತ್ತದೆ.

೧೮೯೬ರಲ್ಲಿ ಹುಟ್ಟಿದ ಅತ್ತರ್ ಕೌರ್, ೧೯೧೦ರಲ್ಲಿ ಭಾಗಮಲ್ ಭಾಟಿಯಾ ಅವರನ್ನು ವಿವಾಹವಾಗಿದ್ದರು. ಭಾಟಿಯಾ, ಲಕಡಿಮಂಡೀ ಬಸಾರ್‌ನಲ್ಲಿ ಅಂಗಡಿ ಇದ್ದ ಸ್ಥಿತಿವಂತ ವ್ಯಾಪಾರಿ. ೧೯೧೭ರಲ್ಲಿ ಅಮೃತಸರದಲ್ಲಿ ಕಾಂಗ್ರೆಸ್ ಶಾಖೆ ತೆರೆದಾಗ, ಭಾಟಿಯಾ ಕಾಂಗ್ರೆಸ್‌ನ ಸಕ್ರೀಯ ಕಾರ್ಯಕರ್ತರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದರು.

ಜಲಿಯನ್ ವಾಲಾಬಾಗ್ ದುರಂತದಲ್ಲಿ ಅತ್ತರರೌರ್ ಸಾವಿರಾರು ಹೆಣಗಳ ನಡುವೆ ರಕ್ತತಪ್ತ ನೆಲದಲ್ಲಿ ತಮ್ಮ ಪತಿಯ ದೇಹವನ್ನು ಹುಡುಕತೊಡಗಿದರು. ಸತ್ತವರ ಸಾಯುತ್ತಿರುವವರ ಆಕ್ರಂದನದ ಮಧ್ಯೆ ಆ ಕ್ಷಣದಲ್ಲಿ ಅವರಿಗೆ ಕೇಳುತ್ತಿದ್ದುದು ನಗಾರಿಯಂತೆ ಬಾರಿಸುತ್ತಿದ್ದ ತಮ್ಮ ಎದೆಯ ಬಡಿತವೊಂದೆ. ಹೆಣಗಳನ್ನು ಎತ್ತಿ ಅಲುಗಿಸಿ ತಮ್ಮ ಪತಿಯ ಮುಖವನ್ನು ಹುಡುಕುವ ಈ ಮಹಿಳೆಯ ಸೀರೆಯೆಲ್ಲ ರಕ್ತಮಯ. ನೆಲದ ಮಟ್ಟಕ್ಕಿದ್ದ ಅಗಲ ಭಾವಿಯಲ್ಲಿ ಇಣುಕುತ್ತಾರೆ.

ಆಳದ ನೀರೆಲ್ಲ ರಕ್ತಕೆಂಪು. ಕತ್ತಲಾಗುತ್ತಿದೆ ಹತ್ತಿರ ಬಂದವರೆ ಸಾವನ್ನಪ್ಪಿದ ಪತಿಯನ್ನು ಗುರುತಿಸಿದ್ದರು. ತೆರೆದ ಬರಿಗಣ್ಣು, ಎಗರಿ ಹೋದ ಕಿವಿ, ಜೀವ ಹಾರಿಹೋದರೂ, ಇನ್ನೂ ಬಿಸಿ ಇದ್ದ ದೇಹ ಮಡಲಿಗೆ ಎಳೆದುಕೊಳ್ಳುತ್ತಿದ್ದಂತೆ ಸೀರೆ, ಸೆರಗು ತೋಳುಗಳೆಲ್ಲ ರಕ್ತದಿಂದ ತೋಯ್ದವು. ಗಂಡನ ದೇಹದ ಮೇಲೆ ಅದೆಷ್ಟು ಗುಂಡಿನ ಗುರುತುಗಳು! ಇಷ್ಟೆಲ್ಲಾ ದುರಂತ ವಿಸ್ಮಯಗಳನ್ನು ಲೇಖನದಲ್ಲಿ ಹೃದಯವಿದ್ರಾವಕವಾಗಿ ಲೇಖಕಿ ವಿವರಿಸಿದ್ದಾರೆ.

ಸರಕಾರಿ ಅಧಿಕಾರಿಗಳು ಸಾಕಷ್ಟು ಬಾರಿ ಅತ್ತರ್ ಕೌರ್ ಮನೆಗೆ ಬಂದು 'ಮಕ್ಕಳ ಭವಿಷ್ಯಕ್ಕಾದರೂ ಪರಿಹಾರ ಧನವನ್ನು ತೆಗೆದುಕೊಳ್ಳಿ' ಎಂದು ಹೇಳುತ್ತಿದ್ದರು. ಅತ್ತರ್ ಕೌರ್‌ದು ಒಂದೇ ಎತ್ತರ ಭಾರತೀಯ ನಾರಿಗೆ ಪತಿ ಭಗವಂತನ ಸ್ವರೂಪ. ಹಣಕ್ಕಾಗಿ ತನ್ನ ದೇವರನ್ನು ನಾ ಮಾರುವುದಿಲ್ಲ. ನನ್ನ ಮಕ್ಕಳು ಹಸಿವಿನಿಂದ ಒದ್ದಾಡುವುದನ್ನಾದರೂ ನೋಡುತ್ತೇನೆ, ನನ್ನ ಪತಿಯ ರಕ್ತದ ಬೆಲೆ ಪಡೆದು, ಆ ಹಣದಲ್ಲಿ ಮಕ್ಕಳನ್ನು ಸಾಕಲಾರೆ ಎಂದು ಸರಕಾರದ ಸಹಾಯ ಧನವನ್ನು ನಿರಾಕರಿಸಿದ ದಿಟ್ಟ ಮಹಿಳೆ.

ಇಂದು ಅಮೃತಸರದಲ್ಲಿ ಈ ಸ್ವಾತಂತ್ರ್ಯ ಯೋಧರ ನೆನಪಿಗಾಗಿ ಭಾಗಮಲ್ ಭಾಟಿಯೂ ಹೆಸರನ್ನು ರಸ್ತೆಯೊಂದಕ್ಕೆ ಇರಿಸಲಾಗಿದೆ. ಅಷ್ಟೇ ಅಲ್ಲ ಇಂದು ಅಮೃತಸರದ ಮುಖ್ಯ ರಸ್ತೆಯೊಂದು ಅತ್ತರ್ ಕೌರ್ ಹೆಸರು ಹೊತ್ತಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ನೇರವಾಗಿ ಧುಮುಕಿ ಹುತಾತ್ಮರಾದ ಸಾವಿರಾರು ಜನರಂತೆ ಇತಿಹಾಸದ ಪುಟಗಳಲ್ಲಿ ಅದೃಶ್ಯರಾಗಿ, ಎಲ್ಲಿಯೂ ದಾಖಲಾಗದಿದ್ದರೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕನಸುಕಂಡ ಅತ್ತರ್ ಕೌರ್ ಅಂಥಾ ಸಾವಿರಾರು ಮಹಿಳೆಯರಿದ್ದಾರೆ. ಇವರೆಲ್ಲರ ತ್ಯಾಗದ ಬಲಿದಾನದ ಬುನಾದಿಯ ಮೇಲೆ ನಿಂತಿದೆ. ನಮ್ಮ ಇಂದಿನ ಸುವರ್ಣ ಸ್ವಾತಂತ್ರ್ಯವೆಂದು ಲೇಖಕಿ ನೇಮಿಚಂದ್ರ ಅಭಿಪ್ರಾಯ ಪಡುತ್ತಾರೆ. ಈ ಮೇಲೆ ಪ್ರಸ್ತಾಪಿಸಿದ ಲೇಖನಗಳಲ್ಲದೆ 'ಸ್ತ್ರೀವಾದಿ ದೃಷ್ಟಿಕೋನ : ಒಂದು ತಾತ್ವಿಕ ವಿವೇಚನೆ', 'ಮುಗಿಲು ಮುಟ್ಟಿದ ದಿಟ್ಟೆಯರು ಮಹಿಳಾ ವೈಮಾನಿಕರು', 'ಈ ನೆಲದ ಮಹಿಳಾ ವಿಜ್ಞಾನಿಗಳು ಪರ್ಯಾಯ ಮಾದರಿಗಳು', 'ಶತಮಾನದ ಮಹಿಳಾ ವಿಜ್ಞಾನಿಗಳು', 'ಮಹಿಳೆ ಮತ್ತು ವಿಜ್ಞಾನ', 'ಸ್ತ್ರೀವಾದ ಮತ್ತು ಮಾನವಶಾಸ್ತ್ರ', 'ನಿಲ್ಲದ ವರದಕ್ಷಿಣೆ ಸಾವುಗಳು' ಹೀಗೆ ಈ ಕೃತಿಯಲ್ಲಿನ ಬಹುಪಾಲು ಲೇಖನಗಳು ಸ್ತ್ರೀವಾದಿ ಚಿಂತನೆಯನ್ನು ಜಾಗೃತಗೊಳಿಸುವಲ್ಲಿ ದಾಪುಗಾಲು ಹಾಕುತ್ತವೆ.

ಸಾಹಿತ್ಯ ಮತ್ತು ವಿಜ್ಞಾನ

"ಸಾಹಿತ್ಯ ಮತ್ತು ವಿಜ್ಞಾನ" ಕೃತಿಯೂ ಅಂತರ್‌ಶಿಸ್ತೀಯ ನೆಲೆಯ ಅಧ್ಯಯನವನ್ನು ಒಳಗೊಂಡಿದೆ. ಸಾಹಿತ್ಯವನ್ನು ಇತರ ಶಿಸ್ತುಗಳೊಂದಿಗೆ ತುಲನೆ ಮಾಡಿ ಅಧ್ಯಯನ ಮಾಡುವ ಕ್ರಮವಿದೆ. ಇದೇ ಮಾದರಿಯಲ್ಲಿ ಸಾಹಿತ್ಯ ವಿಜ್ಞಾನ ಕೃತಿಯು ಹೊರಹೊಮ್ಮಿದೆ. ಈ ಕೃತಿಯು ಏಳು ಅಧ್ಯಾಯಗಳನ್ನು ಹೊಂದಿದೆ. ಸಾಹಿತ್ಯ ಮತ್ತು ವಿಜ್ಞಾನ ಮೇಲ್ನೋಟಕ್ಕೆ ಸಂಪೂರ್ಣವಾಗಿ ವಿಭಿನ್ನ ಪ್ರಕಾರಗಳಾಗಿ ಕಂಡರೂ ಮೂಲಭೂತವಾಗಿ ಎರಡೂ ರಂಗಗಳ ನಡುವಿನ ಅಂತರ

ಅತ್ಯಲ್ಪವೆಂದೇ ಹೇಳಬೇಕಾಗುತ್ತದೆ. ವಿಜ್ಞಾನ ಪ್ರಶ್ನಿಸುತ್ತದೆ, ಪೂರ್ವಗ್ರಹಗಳನ್ನು ಧಿಕ್ಕರಿಸುತ್ತದೆ. ಸಿದ್ಧಜಾಡಿನ ಚಿಂತನೆಗಳಲ್ಲಿ ಕೊಳೆತರೆ ವಿಜ್ಞಾನ ಮುಂದುವರೆಯಲಾರದು. ಬದುಕಿನ ಸತ್ಯ ಚಿತ್ರವನ್ನು ಕೊಡುವ ಪ್ರಯತ್ನ ಸಾಹಿತ್ಯದ್ದು. ಇವೆರಡೂ ಸತ್ಯದ ಅನ್ವೇಷಣೆಯ ಬೇರೆ ಬೇರೆ ಮಾಧ್ಯಮಗಳು ಎಂದು ಲೇಖಕಿ ವಿವರಿಸುತ್ತಾರೆ. ವಿಜ್ಞಾನದ ಚರಿತ್ರೆಯನ್ನು ಹೇಳುತ್ತಾ ಲೇಖಕಿ ಕ್ರಿಸ್ತಪೂರ್ವ ೬೦೦ರಿಂದ ೪ನೇ ಶತಮಾನದ ಅರಿಸ್ಟಾಟಲ್ ೧೬೬೧ರ ರಾಬರ್ಟ್ ಬಾಯ್ಲೆ, ೧೭ನೇ ಶತಮಾನದ ನ್ಯೂಟನ್ನರ ಚರಿತ್ರೆ ೧೯೦೫ರ ಅಲ್ಬರ್ಟ್ ಐನ್‌ಸ್ಟೈನ್ ಚರಿತ್ರೆ ಹಾಗೂ ಕೊನೆಯಲ್ಲಿ ೧೯೨೭ರ ವಿ. ಹೈಸನ್‌ಬರ್ಗ್ ಚರಿತ್ರೆಯವರೆಗೆ ವಿಸ್ತಾರವಾಗಿ ತಿಳಿಸಿದ್ದಾರೆ. ಸಾಹಿತ್ಯದ ಮೇಲೆ ವಿಜ್ಞಾನದ ಪ್ರಭಾವ ಎಂಬ ಅಧ್ಯಾಯದಲ್ಲಿ ವಿಜ್ಞಾನದ ಪ್ರಭಾವಕ್ಕೆ ಒಳಗಾಗಿರುವ ಕೃತಿಗಳನ್ನು ಚರ್ಚಿಸುತ್ತಾ, ವಿಜ್ಞಾನ ಮಾನವನ ಬದುಕಿನ ಗತಿಯನ್ನೇ ಬದಲಿಸಿತು. ಬಹುಮುಖ್ಯವಾಗಿ ರೂಢಿಗತ ಪದ್ಧತಿಗಳನ್ನು ಮೊದಲಬಾರಿಗೆ ಪ್ರಶ್ನಿಸಿತು. ಈ ಶತಮಾನದ ಆರಂಭದಲ್ಲೇ ಜಾತೀಯತೆ, ಬಾಲ್ಯವಿವಾಹ ಪದ್ಧತಿಗಳಿಗೆ ತೀವ್ರವಾಗಿ ಪ್ರತಿಕ್ರಿಯಿಸಿದ ಕಾದಂಬರಿಗಳು ಹೊರಬಂದವು ಎಂದು ಲೇಖಕಿ ವಿವರಿಸುತ್ತಾರೆ. ವೈಜ್ಞಾನಿಕತೆಗಳು ಎನ್ನುವ ಅಧ್ಯಾಯದಲ್ಲಿ ವಿಜ್ಞಾನ ಮತ್ತು ಸಾಹಿತ್ಯ ನೇರವಾಗಿ ಸಂಧಿಸುವುದನ್ನು ವೈಜ್ಞಾನಿಕ ಕತೆಗಳಲ್ಲಿ ಕಾಣಬಹುದು ಎಂದು ಲೇಖಕಿ ಹಲವು ವೆಜ್ಞಾನಿಕ ಕತೆಗಳನ್ನು ಉದಾಹರಣೆ ಸಹಿತ ಚರ್ಚಿಸಿದ್ದಾರೆ.

೨.೨. ನೇಮಿಚಂದ್ರರ ಬಗೆಗೆ ಇದುವರೆಗೆ ನಡೆದಿರುವ ಅಧ್ಯಯನಗಳು

ನೇಮಿಚಂದ್ರರ ಜೀವನ, ಸಾಹಿತ್ಯ ಸಾಧನೆಯ ಕುರಿತಾಗಿ ಪ್ರತ್ಯೇಕ ಅಧ್ಯಯನಗಳು ಈವರೆಗೆ ನಡೆದಿಲ್ಲ. ಕೆಲವು ಪಿಎಚ್.ಡಿ. ಅಧ್ಯಯನಗಳಲ್ಲಿ ಮತ್ತು ವಿಮರ್ಶಾ ಕೃತಿಗಳಲ್ಲಿ ಪ್ರಾಸಂಗಿಕವಾಗಿ ಅವರ ಕತೆಗಳ ಕುರಿತು ವಿಶ್ಲೇಷಿಸಲಾಗಿದೆ. ಅವುಗಳನ್ನು ಸ್ಥೂಲವಾಗಿ ಇಲ್ಲಿ ಪರಿಶೀಲಿಸಬಹುದಾಗಿದೆ. ಎನ್.ಕೆ.ಕೋದಂಡರಾಮ ಅವರ ಪಿಎಚ್.ಡಿ ಪ್ರಬಂಧವಾದ 'ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ' ಎಂಬ ಕೃತಿಯಲ್ಲಿ ನೇಮಿಚಂದ್ರರ ಕತೆಗಳ ಕುರಿತಾಗಿ ಪ್ರಸ್ತಾಪಿಸಿದ್ದಾರೆ. ಅವರು 'ಸ್ತ್ರೀ ಸಂವೇದನೆ' ಭಾಗದಲ್ಲಿ ವೈದೇಹಿ, ವೀಣಾ ಶಾಂತೇಶ್ವರ, ಬಿ.ಟಿ.ಲಲಿತಾನಾಯಕ ಕುರಿತಾಗಿ ಪ್ರಸ್ತಾಪಿಸುತ್ತಾ ನೇಮಿಚಂದ್ರರ ಕತೆಗಳ ವೈಶಿಷ್ಟ್ಯತೆಯನ್ನು ತಿಳಿಸಿದ್ದಾರೆ. ಹಾಗೆ ತಾವು ಹೇಳುವ ರೀತಿಯು ಹೊಸದಾಗಿ ಇರಬೇಕೆಂಬುದು ಅವರ ಪ್ರತಿಯೊಂದು ಕತೆಯಲ್ಲೂ ಎದ್ದು ಕಾಣುತ್ತದೆ. ಬಹುಶಃ ಮಹಿಳಾ ಸಾಹಿತ್ಯದಲ್ಲಿ ಯಾರೂ ಪ್ರಯೋಗಿಸದ ಪದಸಮೃದ್ಧಿಯನ್ನು ಇವರು ಅನಾಯಾಸವಾಗಿ ಸೃಷ್ಟಿಸುತ್ತಾರೆ. ಹೆಣ್ಣು ತನ್ನತನವನ್ನು ಶೋಧಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ನೇಮಿಚಂದ್ರರ ಭಾಷಾ ಬಳಕೆ ಪೂರಕವಾಗಿ ದುಡಿಯುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ.

ಗಿರಿಜಾಶಾಸ್ತ್ರಿಯವರ 'ಆಧುನಿಕ ಕನ್ನಡ ಸಣ್ಣ ಕತೆಗಳ ಸ್ತ್ರೀವಾದಿ ಅಧ್ಯಯನ' ಎನ್ನುವ ಮಹಾಪ್ರಬಂಧವು ನಂತರದಲ್ಲಿ 'ಕಥಾಮಾನಸಿ' ಎಂಬ ಪುಸ್ತಕವಾಗಿ ಪ್ರಕಟವಾಗಿದೆ. ಇವರು

ನವ್ಯೋತ್ತರ ಕಥಾಸಾಹಿತ್ಯದ ವಿಭಿನ್ನ ಧಾರೆಗಳನ್ನು ವಿಶ್ಲೇಷಿಸುತ್ತಾ ನೇಮಿಚಂದ್ರರ ಕತೆಗಳಲ್ಲಿನ ಒಳತೋಟಿಗಳನ್ನು ವಿವರಿಸಿದ್ದಾರೆ. ಮಾನವೀಯ ಸಂಬಂಧಗಳ ನೆಲೆಯಲ್ಲಿ ಸ್ತ್ರೀಪ್ರಜ್ಞೆಯನ್ನೇ ಶೋಧಿಸುತ್ತಾ ಅನುಭವದ ಸಾಚಾತನವನ್ನು ತಮ್ಮ ಕಥೆಗಳ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಮಾಡಿಕೊಂಡಿರುವ ಯುವ ಬರಹಗಾರ್ತಿ ನೇಮಿಚಂದ್ರ ಕನ್ನಡಕ್ಕೆ ಬಹಳ ಒಳ್ಳೆಯ ಕತೆಗಳನ್ನು ಕೊಟ್ಟಿದ್ದಾರೆಂದು ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದಾರೆ.

ಎಲ್.ಹನುಮಂತಯ್ಯನವರ 'ಬಂಡಾಯ ಕತೆಗಳಲ್ಲಿ ದಲಿತ ಪ್ರಜ್ಞೆ' ಎನ್ನುವ ಪಿಎಚ್.ಡಿ. ಪ್ರಬಂಧವು 'ಕಥಾಕಥನ' ಎಂಬ ಹೆಸರಿನಲ್ಲಿ ಪುಸ್ತಕವಾಗಿ ಪ್ರಕಟವಾಗಿದೆ. ಲಿಂಗಭೇಧ ನೀತಿ ಕತೆಗಾರ್ತಿಯರ ಕೌತುಕಗಳು ಎನ್ನುವ ಭಾಗದಲ್ಲಿ ಸಾರಾ ಅಬೂಬಕರ್‌ರ ಸಾಹಿತ್ಯ, ವೈದೇಹಿಯವರ ಕತೆಗಳು, ವೀಣಾರ ಕತೆಗಳು, ಬಾನುಮುಷ್ತಾಕ್‌ರ ಕತೆಗಳನ್ನು ವಿಶ್ಲೇಷಿಸಿದ್ದಾರೆ. ವೀಣಾ ಶಾಂತೇಶ್ವರ ಮತ್ತು ನೇಮಿಚಂದ್ರರ ಕತೆಗಳಲ್ಲಿ ಸಮಾನ ಅಂಶಗಳಿವೆ ಎಂದು ವಿವರಿಸುತ್ತಾರೆ. ಮಹಿಳೆಯರ ದಿಟ್ಟತನವನ್ನು ಚಿತ್ರಿಸುವಲ್ಲಿ ಲೇಖಕಿಯ ಒಳಮನಸ್ಸು ಕಾರ್ಯ ನಿರ್ವಹಿಸುತ್ತದೆ ಎನ್ನುತ್ತಾರೆ.

'ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ' ಎಂಬ ಪಿಎಚ್.ಡಿ ಪ್ರಬಂಧದಲ್ಲಿ ಮಲ್ಲಿಕಾ ಘಂಟಿಯವರು ದಲಿತ-ಬಂಡಾಯದ ಬರಹಗಾರರನ್ನು ಚರ್ಚಿಸುತ್ತಾ ನೇಮಿಚಂದ್ರರು ನಗರೀಕರಣ ಮತ್ತು ಯಾಂತ್ರೀಕರಣಗಳು ಗಂಡು ಹೆಣ್ಣಿನ ನಡುವಣ ಸಂಬಂಧಗಳ ಮೇಲೆ ವಿಶೇಷ ಪರಿಣಾಮ ಬೀರಿವೆ ಎಂಬುದನ್ನು ಸಾಬೀತು ಪಡಿಸುವಂತೆ ವಿಶಿಷ್ಟ ಶೈಲಿಯಲ್ಲಿ ಕತೆಗಳನ್ನು ರಚಿಸಿದ್ದಾರೆಂದು ಅಭಿಪ್ರಾಯ ಪಡುತ್ತಾರೆ.

ನೇಮಿಚಂದ್ರರ ಕತೆಗಳು ಹಾಗೂ ಅವರ ಇನ್ನಿತರ ಬರವಣಿಗೆ ಕುರಿತಾಗಿ ಕೆಲವು ವಿಮರ್ಶಕರು ವಿಶ್ಲೇಷಿಸಿದ್ದಾರೆ. ಅವುಗಳನ್ನು ಈ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ. ಆರ್ಯಾಂಭ ಪಟ್ಟಾಭಿಯವರು ಸಂಪಾದಿಸಿರುವ 'ಮಹಿಳಾ ಸಾಹಿತ್ಯ ಸಮೀಕ್ಷೆ' ಕೃತಿಯೂ ಸುದೀರ್ಘವಾಗಿ ಮಹಿಳಾ ಸಾಹಿತ್ಯದ ವಿವರಗಳನ್ನು ಒದಗಿಸುತ್ತದೆ. ಸ್ವಾತಂತ್ರೋತ್ತರ ಕನ್ನಡ ಮಹಿಳಾ ಸಾಹಿತ್ಯ ಭಾಗದಲ್ಲಿ ಸಿ.ಜಿ.ಉಷಾದೇವಿಯವರು ಬರೆದ ಲೇಖನವು ನೇಮಿಚಂದ್ರರ ಕತೆಗಳ ಕುರಿತು ಸಮಗ್ರ ಮಾಹಿತಿಯನ್ನು ನೀಡುತ್ತದೆ. ಲೇಖನದಲ್ಲಿ ನೇಮಿಚಂದ್ರರ ಮೂರು ಕಥಾ ಸಂಕಲನಗಳನ್ನು ಪ್ರಸ್ತಾಪಿಸುತ್ತಾ ಲೇಖಕಿಯ ಕತೆಗಳು ವಿಚಾರವಂತಿಕೆಯ ಜೊತೆಗೆ ಸ್ವಂತಿಕೆಯನ್ನು ಬೆಸೆಯುತ್ತವೆ ಎಂದು ಹೇಳುತ್ತಾರೆ.

ಇದೇ ಪುಸ್ತಕದ 'ಜೀವನ ಚರಿತ್ರೆ' ಎನ್ನುವ ಭಾಗದಲ್ಲಿ ಕೆ.ಅಕ್ಕಮಹಾದೇವಿಯವರು ನೇಮಿಚಂದ್ರರು ರಚಿಸಿರುವ ಮಹನೀಯ ಮಹಿಳೆಯರ ಜೀವನ ಚರಿತ್ರೆಗಳನ್ನು ಪರಿಚಯಿಸಿದ್ದಾರೆ. ಮಹಿಳೆಯರ ಬದುಕಿನ ನೋವು ನಲಿವುಗಳನ್ನು ಬರವಣಿಗೆಯ ಮೂಲಕ ಬಿಚ್ಚಿಡುವ ಪ್ರಯತ್ನದಲ್ಲಿ ಈ ಆತ್ಮಚರಿತ್ರೆಗಳು ದಾಖಲೆಯ ಸಾಧನಗೈದಿವೆಯೆಂದು ವಿವರಗಳನ್ನು ನೀಡಿದ್ದಾರೆ.

ಎಚ್.ಎಸ್.ಶ್ರೀಮತಿಯವರು ಸಂಪಾದಿಸಿರುವ 'ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ' ಎಂಬ ಕೃತಿಯಲ್ಲಿ ನೇಮಿಚಂದ್ರರ ಕಥಾ ಸಾಹಿತ್ಯವನ್ನು ವಿಶ್ಲೇಷಿಸಲಾಗಿದೆ. ೧೯೭೦ರ ನಂತರದ ಕನ್ನಡ

ಮಹಿಳಾ ಸಾಹಿತ್ಯದ ಭಾಗದಲ್ಲಿ ನೇಮಿಚಂದ್ರರ ಕತೆಗಳ ವಸ್ತುವೈವಿಧ್ಯತೆ, ಪಾತ್ರ, ಸಂಭಾಷಣೆಯು ಹೊಸತನದಿಂದ ಕೂಡಿದೆ ಎಂದು ಕೆ.ಆರ್. ಸಂಧ್ಯಾರೆಡ್ಡಿಯವರು ಅಭಿಪ್ರಾಯ ಪಡುತ್ತಾರೆ. ಪರಂಪರಾಗತ ಸ್ತ್ರೀ-ಪುರುಷ ಅಸಮಾನತೆಯಿಂದ ಸ್ತ್ರೀಯರಿಗೆ ಎದುರಾಗುವ ಸಮಸ್ಯೆಗಳು ಮತ್ತು ಅವರು ಪ್ರಜ್ಞಾಪೂರ್ವಕವಾಗಿಯೇ ಪರಂಪರೆಯನ್ನು ಧಿಕ್ಕರಿಸಿಕೊಳ್ಳುವ ನಿಲುವುಗಳನ್ನು ನೇಮಿಚಂದ್ರ ಅವರು ಆಧುನಿಕ ಬದುಕಿನ ನೆಲೆಯಲ್ಲಿ ಚಿತ್ರಿಸುತ್ತಾರೆ ಎಂದು ವಿವರಿಸುತ್ತಾರೆ.

ಬರಗೂರು ರಾಮಚಂದ್ರಪ್ಪ ಅವರು ಪ್ರಧಾನ ಸಂಪಾದಕರಾಗಿರುವ 'ಕನ್ನಡ ಸಾಹಿತ್ಯ ಸಮೀಕ್ಷೆ ೧೯೯೨' ಎನ್ನುವ ಅಕಾಡೆಮಿಯ ಪುಸ್ತಕದ 'ಸಣ್ಣಕತೆ'ಯ ಭಾಗದಲ್ಲಿ ನೇಮಿಚಂದ್ರರ ಕತೆಗಳ ಕುರಿತಾಗಿ ನಟರಾಜ್ ಹುಳಿಯಾರ್ ಉಪಯುಕ್ತ ಮಾಹಿತಿ ನೀಡಿದ್ದಾರೆ. ಮಹಾಬಲಮೂರ್ತಿ, ಪಿ.ಶ್ರೀನಿವಾಸರಾವ್ ಕತೆಗಳಿಗಿಂತ ನೇಮಿಚಂದ್ರರ ಕತೆಗಳಲ್ಲಿ 'ಸ್ವ'ದ ಶೋಧನೆ ಸ್ಪಷ್ಟವಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ. ಆಧುನಿಕ ಹೆಣ್ಣನ್ನು ಉದಾತ್ತೀಕರಿಸುವಾಗಲೂ ನೇಮಿಚಂದ್ರರ ನಿರೂಪಣಾ ಪ್ರಜ್ಞೆ ಅಲ್ಲಿನ ವಿರೋಧಾಭಾಸಗಳತ್ತ ಒಂದು ಕಣ್ಣನ್ನಿಟ್ಟೇ ಇರುತ್ತದೆ. ಇವರ ಹಲವು ಕತೆಗಳಲ್ಲಿ ಮತ್ತೆ ಮತ್ತೆ ಹಾಜರಾಗುವ ಆಧುನಿಕ ಬದುಕಿನ ಛಿದ್ರತೆ, ತಲ್ಲಣಗಳು ಕತೆಗಳನ್ನು ದಟ್ಟವಾಗಿಸುವ ಪ್ರಯತ್ನ ಮಾಡುತ್ತವೆಯೆಂದು ವ್ಯಾಖ್ಯಾನಿಸುತ್ತಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ 'ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ' ಕೃತಿಯಲ್ಲಿನ ಎಸ್.ವಿ.ಪ್ರಭಾವತಿಯವರ "ಆಧುನಿಕ ಕನ್ನಡ ಮಹಿಳಾ ಕಾವ್ಯ ಮತ್ತು ಕಥಾ ಸಾಹಿತ್ಯ" ಎಂಬ ಲೇಖನಗಳು ನೇಮಿಚಂದ್ರರ ಕಥಾ ಸಂಕಲನಗಳನ್ನು ಸ್ತ್ರೀವಾದಿ ನೆಲೆಯಲ್ಲಿ ವಿಶ್ಲೇಷಿಸುತ್ತವೆ. ಎಸ್.ವಿ.ಪ್ರಭಾವತಿಯವರು ತಮ್ಮ ಲೇಖನದಲ್ಲಿ "ವೈದೇಹಿ, ನೇಮಿಚಂದ್ರರ ಬರವಣಿಗೆಯ ಹೊಸತನ, ಸರಳತೆ, ಕಲಾತ್ಮಕತೆ, ಸ್ತ್ರೀವಿಶಿಷ್ಟ ದೃಷ್ಟಿಕೋನಗಳಿಂದ ಕೂಡಿ ಪ್ರಗತಿಪರರಾಗಿದ್ದೂ ಕಲಾತ್ಮಕತೆಯನ್ನು ಸಿದ್ಧಿಸಿಕೊಂಡಿದ್ದಾರೆ" ಎಂದು ಅಭಿಪ್ರಾಯ ವ್ಯಕ್ತಗೊಳಿಸಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಹೊರತಂದಿರುವ ೧೯೯೨ರ 'ಸಾಹಿತ್ಯ ವಿಮರ್ಶೆ'ಯಲ್ಲಿ ಕೆ.ಕೇಶವಶರ್ಮ ಅವರು ಬರೆದಿರುವ ಆಧುನಿಕ ಸಣ್ಣ ಕತೆಗಳಲ್ಲಿ ಮಹಿಳಾ ಸಮಸ್ಯೆ ಎಂಬ ಲೇಖನವು ನೇಮಿಚಂದ್ರರ ಸಾಹಿತ್ಯಾಭ್ಯಾಸಿಗಳಿಗೆ ಪೂರಕ ಮಾಹಿತಿ ನೀಡುತ್ತದೆ. ನವೋದಯ, ಪ್ರಗತಿಶೀಲ, ನವ್ಯಕತೆಗಾರ್ತಿಯರ ಸಮಸ್ಯೆಗಳನ್ನು ಪ್ರಸ್ತಾಪಿಸುತ್ತಾ ದಲಿತ ಬಂಡಾಯ ಸಂದರ್ಭದ ನೇಮಿಚಂದ್ರರ ಕತೆಗಳಲ್ಲಿ ಅಭಿವ್ಯಕ್ತವಾಗಿರುವ ಸ್ತ್ರೀ ಸಮಸ್ಯೆಯ ನೆಲೆಗಳನ್ನು ಗುರುತಿಸಿದ್ದಾರೆ.

ಜಿ.ಎಸ್.ಆಮೂರ ಅವರು ತಮ್ಮ 'ಸಾತ್ವಿಕಪಥ' ಮತ್ತು 'ಅರ್ಥಲೋಕ' ಎಂಬ ಎರಡು ಕೃತಿಗಳಲ್ಲಿ ನೇಮಿಚಂದ್ರರ ಕತೆಗಳನ್ನು ವಿಮರ್ಶಿಸಿದ್ದಾರೆ. ಹಗುರವಾದ ಕನಸುಗಾರಿಕೆ ಅಥವಾ ತೀವ್ರವಾದ ಪುರುಷದ್ವೇಷ ಇಂಥ ವೈಪರೀತ್ಯಗಳಿಂದ ಮುಕ್ತರಾಗಿ ಕೇವಲ ಅನುಭವದ ಸಾಚಾತನವನ್ನೇ ನಂಬಿ ಸಾಹಿತ್ಯ ರಚನೆಗೆ ಕೈ ಹಾಕಿರುವ ನೇಮಿಚಂದ್ರರ ಬರವಣಿಗೆ ಮಹತ್ವವಾದುದು ಎಂದು ಅಭಿಪ್ರಾಯ ಪಡುತ್ತಾರೆ.

‘ಶತಮಾನದ ಸಣ್ಣ ಕತೆಗಳ ಸಮೀಕ್ಷೆ’ ಕೃತಿಯಲ್ಲಿ ಕರೀಗೌಡ ಬೀಚನಹಳ್ಳಿಯವರು ‘ಸ್ತ್ರೀ ಸಂವೇದನೆ’ಯನ್ನು ಚರ್ಚಿಸಿದ್ದಾರೆ. ಹೀಗೆ ಚರ್ಚಿಸುವಾಗ ನೇಮಿಚಂದ್ರರ ಕತೆಗಳು ಸ್ತ್ರೀ ಸಂವೇದನೆಯನ್ನು ದಟ್ಟವಾಗಿ ಪ್ರಭಾವಿಸಿರುವುದನ್ನು ಪ್ರಸ್ತಾಪಿಸುತ್ತಾರೆ. ಇವರ ಕತೆಗಳು ಸ್ತ್ರೀ ಶಕ್ತಿ ಬಿಂಬಿಸುವ ಕತೆಗಳಾಗಿ ಕಾಣಿಸಿಕೊಳ್ಳುತ್ತವೆ. ಮಹಿಳೆಗೆ ಅವಳದೇ ಆದ ಹೆಣ್ಣುತನದ ವ್ಯಕ್ತಿತ್ವ, ಸ್ವಾತಂತ್ರ್ಯ, ಆಯ್ಕೆಗಳು ಇರುತ್ತವೆ ಎಂಬ ತತ್ವವನ್ನು ನೇಮಿಚಂದ್ರರ ಕತೆಗಳು ಧ್ವನಿಪೂರ್ಣವಾಗಿ ಚಿತ್ರಿಸುತ್ತವೆ ಎಂದು ವಿಮರ್ಶಿಸಿದ್ದಾರೆ.

ಇಷ್ಟೆಲ್ಲಾ ಅಧ್ಯಯನ ವಿಶಾಲತೆಯನ್ನು ಹೊಂದಿರುವ ಕನ್ನಡ ಸಾಹಿತ್ಯದ ವಿಶಿಷ್ಟ ಮಹಿಳಾ ಬರಹಗಾರ್ತಿಯಾದ ನೇಮಿಚಂದ್ರರ ಬಗೆಗಿನ ಅಧ್ಯಯನವು ಪ್ರಮುಖವಾದುದಾಗಿದೆ.

ಇವು ಇಲ್ಲಿ ಪ್ರಸ್ತಾಪಿಸಬಹುದಾದ ನೇಮಿಚಂದ್ರ ಅವರ ಕತೆಗಳ ಕುರಿತಾಗಿ ನಡೆದಿರುವ ಕೆಲವು ಪ್ರಮುಖ ಅಧ್ಯಯನಗಳಾಗಿವೆ. ಇವಲ್ಲದೆ ನೇಮಿಚಂದ್ರ ಅವರ ಬಗೆಗೆ ಇತರೆಡೆಗಳಲ್ಲೂ ಅಲ್ಲಲ್ಲಿ ಪ್ರಸ್ತಾಪವಾಗಿರುವ ಸಾಧ್ಯತೆಗಳಿವೆ. ಪ್ರಸ್ತುತ ಅಧ್ಯಯನದ ಮಿತಿಯಲ್ಲಿ ಅಂಥವುಗಳನ್ನೆಲ್ಲ ಗಮನಿಸಲು ಸಾಧ್ಯವಾಗಿಲ್ಲ.

ಒಟ್ಟಾರೆಯಾಗಿ ಹೇಳುವುದಾದರೆ ಇಲ್ಲಿ ಪ್ರಸ್ತಾಪಿಸಿರುವ ಅಧ್ಯಯನಕಾರರೆಲ್ಲ ನೇಮಿಚಂದ್ರ ಅವರ ಕತೆಗಳಲ್ಲಿ ಅಭಿವ್ಯಕ್ತವಾಗಿರುವ ಸ್ತ್ರೀ ಸಂವೇದನೆಯ ವಿವಿಧ ನೆಲೆಗಳನ್ನು ಗುರುತಿಸಿ ವಿಶ್ಲೇಷಿಸಿದ್ದಾರೆ. ನೇಮಿಚಂದ್ರ ಅವರ ಕತೆಗಳ ಕುರಿತಾದ ಪ್ರಸ್ತುತ ನಿಬಂಧಕ್ಕೆ ಅವುಗಳೆಲ್ಲ ಆನುಷಂಗಿಕ ಸಾಮಗ್ರಿಗಳಾಗಿ ನೆರವಾಗುತ್ತವೆ.

ಅಧ್ಯಾಯ-೩

ನೇಮಿಚಂದ್ರರ ಕಥಾಸಾಹಿತ್ಯ : ವಸ್ತು, ಭಾಷೆ, ತಂತ್ರ ಮತ್ತು ಶೈಲಿ

ಕಥನ ಮನುಷ್ಯನ ಹುಟ್ಟುಗುಣಗಳಲ್ಲಿ ಒಂದು. ಅದರ ಇತಿಹಾಸ ಭಾಷೆಯ ಇತಿಹಾಸದಷ್ಟೆ ಹಳೆಯದು. ಮನುಷ್ಯ ತಾನು ಅನುಭವಿಸಿದ್ದನ್ನು ಎಂದರೆ ಕಂಡಿದ್ದನ್ನು, ಕೇಳಿದ್ದನ್ನು, ಚಿಂತಿಸಿದ್ದನ್ನು, ಕಲ್ಪಿಸಿದ್ದನ್ನು ಎರಡನೆಯವರಿಗೆ ಹೇಳತೊಡಗಿದಾಗ ಕತೆಯು ಉಗಮವಾಯಿತು. ಕತೆಯ ಆಕರ್ಷಣೆಯಿಂದ ಯಾರೂ ತಪ್ಪಿಸಿಕೊಳ್ಳಲಾರರು. ಚಿಕ್ಕ ಮಕ್ಕಳಿನಿಂದ ಹಿಡಿದು ವೃದ್ಧರವರೆಗೆ ಎಲ್ಲರೂ ಕತೆಗಳಲ್ಲಿ ಆಸಕ್ತಿ ಹೊಂದಿದವರೆ. ಭಾರತೀಯ ಪರಂಪರೆಯಲ್ಲಿ ಕತೆಯ ಹುಟ್ಟನ್ನು ಅಲೌಕಿಕ ನೆಲೆಯಲ್ಲಿಯೇ ವಿವರಿಸಲಾಗುತ್ತದೆ. ಶಿವಪಾರ್ವತಿಗೆ ಹೇಳಿದ ಕತೆಗಳನ್ನು ಕದ್ದು ಕೇಳಿದ ಗಣನೊಬ್ಬ ಗುಣಾಢ್ಯನಾಗಿ ಜನ್ಮತಾಳಿ ಬೃಹತ್ಕಥೆಯ ಸೃಷ್ಟಿಗೆ ಕಾರಣನಾದ ಎಂದು ಪರಂಪರೆ ಹೇಳುತ್ತದೆ. ತೆಲುಗು ಕವಿ ಪಿಂಗಳಸೂರನನ ಕಲಾ ಪೂರ್ಣೋದಯದ ಬ್ರಹ್ಮ ಸರಸ್ವತಿಗೆ ಕತೆ ಹೇಳಿದುದರ ಉಲ್ಲೇಖವಿದೆ. ದೇವತೆಗಳು ಕೂಡ ಕತೆಗಳ ಮೋಹಕ್ಕೆ ಒಳಗಾದವರೇ.

ಭಾರತೀಯ ಸಂಸ್ಕೃತಿಯಲ್ಲಿ ಪ್ರಾಚೀನ ಕಾಲದಿಂದಲೂ ಕಥನ ಸಾಹಿತ್ಯಕ್ಕೆ ಬೇರೆ ಯಾವ ಸಂಸ್ಕೃತಿಯಲ್ಲಿಯೂ ಕಾಣದ ಪ್ರಾಶಸ್ತ್ಯ ದೊರಕಿದೆ. ಇಲ್ಲಿ ದೊರೆಯುವ ಪ್ರಮಾಣದಲ್ಲಿ ಕಥನದ ಪ್ರಕಾರಗಳು ಬೇರೆಲ್ಲಿಯೂ ದೊರೆಯಲಾರವು. ವೇದ ಉಪನಿಷತ್ತುಗಳಲ್ಲಿ ಬರುವ ಕತೆಗಳು, ಭಾಗವತ ಮೊದಲಾದ ಪುರಾಣಗಳು, ರಾಮಾಯಣ, ಮಹಾಭಾರತದಂಥ ಇತಿಹಾಸಗಳು ರಘುವಂಶದಂಥ ಮಹಾಕಾವ್ಯಗಳು, ಬೌದ್ಧ-ಜೈನರ ಜಾತಕ ಮತ್ತು ಆರಾಧನಾ ಕತೆಗಳು, ಪಂಚತಂತ್ರ, ಹಿತೋಪದೇಶಗಳು, ನೀತಿ ಕತೆಗಳು, ಕಥಾ ಸರಿತ್ಸಾಸಾಗರದಂಥ ಕಥಾ ಕೋಶಗಳು, ಭಾರತದ ಎಲ್ಲ ಭಾಷೆಗಳಲ್ಲಿಯೂ ದೊರೆಯುವ ಜನಪದ ಕತೆಗಳು ಹೀಗೆ ಕಥನ ಪ್ರಪಂಚದ ವಿಸ್ತಾರ ವೈವಿಧ್ಯತೆಗಳಿವೆ. ಕತೆಯೂ ಮೂಲದಲ್ಲಿ ಮೌಖಿಕ ಸ್ವರೂಪದ್ದಾಗಿದ್ದರೂ ಅದು ಲಿಖಿತ ಸ್ವರೂಪವನ್ನು ಪಡೆದುಕೊಂಡು ಸಾಹಿತ್ಯದ ಒಂದು ಪ್ರಮುಖ ಹಾಗೂ ಆಕರ್ಷಕ ಪ್ರಕಾರವಾಗಿ ಬೆಳೆದಿದೆ. "ಕನ್ನಡದಲ್ಲಿ ಕಾದಂಬರಿಯ ತರುವಾಯ ಸಣ್ಣಕತೆಯೇ ಅತ್ಯಂತ ಲೋಕಪ್ರಿಯವಾದ ರೂಪವಾಗಿದೆ. ಈ ಮಾತು ಭಾರತದ

ಉಳಿದೆಲ್ಲ ಪ್ರಾಂತಗಳ ಸಾಹಿತ್ಯಗಳಿಗೂ ಅನ್ವಯಿಸುತ್ತದೆ" (ಕೀರ್ತಿನಾಥ ಕುರ್ತಕೋಟಿ ೨೦೦೨; ಪುಟ ೧೩೩). ಕತೆಯ ಬಗ್ಗೆ ಮನುಷ್ಯನಿಗಿರುವ ಜನ್ಮಜಾತವಾದ ಕುತೂಹಲವೇ ಇದಕ್ಕೆ ಕಾರಣ.

ಮಹಿಳೆ ಹಾಗೂ ಕತೆ ಸಂಬಂಧ ಇಂದು ನಿನ್ನೆಯದಲ್ಲ. ಭಾರತೀಯ ಪರಂಪರೆಯಲ್ಲಿ ಕತೆಗೆ ನಾಟಕಕ್ಕಿದ್ದಂತೆ ದೈವೀ ನೆಲೆಯನ್ನು ಕಲ್ಪಿಸಲಾಗಿದೆ. ವಸುಭಾಗ ಹೇಳುವಂತೆ ಗುಣಾಢ್ಯನ ಬೃಹತ್ಕಥೆಯ ಮೂಲ ಶಿವನಿಂದ ಕತೆ ಕೇಳಬೇಕೆನ್ನುವ ಪಾರ್ವತಿಯ ಇಚ್ಛೆಯಲ್ಲಿದೆ. ಅಂತಿರ್ಧ ಪರಮೇಶ್ವರಂಗೆ ಗಿರಿರಾಜ ತನುಜೆ ಕರಕಮಲಂಗಳಂ ಮುಗಿದು -ದೇವಾ ನೀವೆನಗೆ ಅಪೂರ್ವಮಪ್ಪ ಕತೆಯಂ ಪೇಳಲೇಳ್ಪುದೆನೆಃ ಹರಂ ದರಹ ಸಿತವದನಾರವಿಂದನಾಗಿ ಪಾರ್ವತಿಗಪೂರ್ವಮಪ್ಪ ಕತೆಗಳಂ ಪೇಳುತ್ತಿರಲು" ಆ ಕತೆಗಳನ್ನು ಕೇಳಿದ ಗಣಪ್ರಧಾನ ಪುಷ್ಪದಂತನೆಂಬುವನು ಗುಣಾಢ್ಯನಾಗಿ ಮಾನವಲೋಕದಲ್ಲಿ ಹುಟ್ಟಿ ಬೃಹತ್ಕಥೆಗಳನ್ನು ಮಾಡಿದನಂತೆ" (ವರದರಾಜ ಹುಯಿಲಗೋಳ, ೧೯೭೬, ಪುಟ ೫೩) ಹೀಗೆ ಕತೆ ಹೇಳುವುದರಲ್ಲಿಯೂ ಮಹಿಳೆಯದೇ ಮೇಲುಗೈಯಾಗಿತ್ತೆನ್ನುವುದಕ್ಕೆ ಪಂಚತಂತ್ರದ ದೇವದತ್ತನೂ ಕುಂಟಣಿಯೂ ಕತೆಯಲ್ಲಿ ಬರುವ ಡಾವರ ಡಾಕಿನಿ ಸಾಕ್ಷಿಯಾಗಿದ್ದಾಳೆ. ನಾನಾ ರೀತಿಯ ಕತೆಗಳನ್ನು ಅತಿಶಯವಾಗಿ ಹೇಳುವ ವಿದ್ಯೆ ಹೊಂದಿದ ಇವಳು ಕತೆ ಹೇಳುವುದಕ್ಕೆ ಸಾವಿರ ಗಡ್ಯಾಣದ ದಕ್ಷಿಣೆ ಕೇಳುತ್ತಿದ್ದಳಂತೆ! ಇಂದಿನ ವಿನಿಮಯದರದಲ್ಲಿ ಇದು ಯಾವ ಕತೆಗಾರ್ತಿಗೂ ಹೆಮ್ಮೆ ಪಡಬಹುದಾದ ಸಂಗತಿ. ಹೀಗಿದ್ದರೂ ಕೂಡ ಒಂದು ಗಂಭೀರ ಸಾಹಿತ್ಯ ಪ್ರಕಾರವೆಂದು ಕತೆ ಕನ್ನಡದಲ್ಲಿ ನೆಲೆಗೊಂಡಿದ್ದು ಇಪ್ಪತ್ತನೆಯ ಶತಮಾನದಲ್ಲಿಯೇ ಎನ್ನುವುದು ನಿರ್ವಿವಾದ.

ನಮ್ಮ ದೇಶ ಸ್ವತಂತ್ರವಾದ ಮೇಲೆ ಮಹಿಳೆಗೂ ಪುರುಷನಿಗೆ ಸಮಾನವಾದ ಸ್ವಾತಂತ್ರ್ಯ ಸಿಕ್ಕಿ, ಮನುವಿನ ಕಾಲದಿಂದ ರೂಢಿಯಾಗಿದ್ದ ಮಾತು ಅರ್ಥ ಕಳೆದುಕೊಂಡಿತು. ಇಂದು ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಪ್ರವೇಶಿಸುತ್ತ, ಶ್ರಮಪಟ್ಟು ದುಡಿಯುತ್ತಿರುವುದರಿಂದ ದೇಶಕ್ಕೆ ಒಂದು ಹೊಸ ಚಾಲನೆ ಪ್ರಾಪ್ತವಾಗುತ್ತ ಬಂತೆಂದು ಹೇಳಬಹುದು. ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿಯಂತೆ ಶಿಕ್ಷಣ, ಸಂಸ್ಕೃತಿ, ಕಲೆ ಮುಂತಾದ ಕ್ಷೇತ್ರಗಳಲ್ಲಿ ಆಧುನಿಕ ಮಹಿಳೆ ತನ್ನ ಪಾತ್ರ ನಿರ್ವಹಿಸುತ್ತ ಒಂದು ದೇಶವನ್ನು ಹೊಸ ತಿರುವಿನಲ್ಲಿ ಕೊಂಡೊಯ್ಯಲು ಸಾಧ್ಯವಾಯಿತು.

ಶತ ಶತಮಾನಗಳಿಂದ ವಂಚಿತವಾಗಿದ್ದ ಮಹಿಳೆಗೆ ಸ್ವಾತಂತ್ರ್ಯ ಲಭ್ಯವಾಗಿ ಅವಳಲ್ಲಿ ಸುಪ್ತವಾಗಿದ್ದ ಪ್ರತಿಭೆ, ಕಲ್ಪನೆ, ಪ್ರತೀಕಾರ ಭಾವನೆಗಳು ಜಾಗೃತಗೊಂಡು ಅದು ಕತೆ, ಕಾವ್ಯ, ಕಾದಂಬರಿ, ಸಂಗೀತ, ಕಲೆ ಇವುಗಳ ರೂಪದಲ್ಲಿ ವ್ಯಕ್ತವಾಗಲಾರಂಭಿಸಿತು. ಆಧುನಿಕ ಮಹಿಳೆ ತನ್ನ ಸುತ್ತಲಿನ ಪರಿಸರ, ಬದುಕಿನ ಘೋರ ಕಷ್ಟ-ನಷ್ಟಗಳನ್ನು ವರದಕ್ಷಿಣೆ, ಮದುವೆ, ಮೂಢನಂಬಿಕೆಗಳು, ಮೇಲು-ಕೀಳು, ಅಸಮಾನತೆ, ಸ್ತ್ರೀಯರ ಸ್ಥಾನಮಾನಗಳು, ಹಲವು ವರ್ಷಗಳಿಂದ ಹಾಗೂ ವರ್ತಮಾನದಲ್ಲಿ ಕಾಡುವ

ಸಮಸ್ಯೆಗಳು ಇತ್ಯಾದಿ ಸಾಹಿತ್ಯಕ ವಸ್ತುವಾಗಿ ಗಮನ ಸೆಳೆದವು. ಸಾಹಿತ್ಯ ಹೊಸ ಭಾವನೆ, ಹೊಸ ವಿಚಾರಗಳಿಂದ ಪ್ರೇರಿತವಾಗಿ ಪ್ರಗತಿಯ ಹೆಜ್ಜೆಯನ್ನಿಡುತ್ತ ಮುನ್ನಡೆದ ಸಂದರ್ಭದಲ್ಲಿ ಕೊಡಗಿನ ಗೌರಮ್ಮ, ತ್ರಿವೇಣಿ, ಎಚ್.ಎಸ್.ಪಾರ್ವತಿ, ನೀಳಾದೇವಿ, ಟಿ.ಸುನಂದಮ್ಮ, ಯಮುನಾಮೂರ್ತಿ, ಶಾಂತದೇವಿ ಮಾಳವಾಡ, ಶಾಂತದೇವಿ ಕಣವಿ, ವೀಣಾ ಶಾಂತೇಶ್ವರ, ಅನುಪಮಾ ನಿರಂಜನ, ನೇಮಿಚಂದ್ರ ಮುಂತಾದವರು ಬರೆಯಲು ಪ್ರಾರಂಭಿಸಿದರು. ಆಧುನಿಕ ಕನ್ನಡ ಕಥೆಯ ಮೊದಲಹಂತ ಪ್ರಾರಂಭವಾಗಿದ್ದು ಐತಿಹಾಸಿಕ ಕಥೆಗಳ ರೂಪದಲ್ಲಿ ಪಂಜೆ, ಕೆರೂರು ಹಾಗೂ ಎಂ.ಎನ್. ಕಾಮತ್ ಅವರಿಂದ. ನವೋದಯದ ಸಂದರ್ಭದಲ್ಲಿ ದೇಶದಾದ್ಯಂತ ಹಬ್ಬಿದ ಸಾಮಾಜಿಕ ಹಾಗೂ ರಾಜಕೀಯ ಚಟುವಟಿಕೆಗಳಿಂದ, ಆಧುನಿಕ ವಿಚಾರಧಾರೆಗಳಿಂದ ಈ ಲೇಖಕರು ಪ್ರಭಾವಿತರಾದರು. ಅಂದಿನ ಸಾಮಾಜಿಕ ಚಳುವಳಿಯ ಭಾಗವಾಗಿ ವಿಧವಾ ವಿವಾಹ, ಬಾಲ್ಯವಿವಾಹ ವಿರೋಧ, ಸ್ತ್ರೀಶಿಕ್ಷಣ ಮುಂತಾದ ಆದರ್ಶಗಳು ಅವರ ಸಾಹಿತ್ಯದ ವಸ್ತುವಾದವು. ಕೆರೂರರಿಗೆ ಪ್ರತಿನಿಷ್ಠೆಗಾಗಿ, ನಾಡಿನ ಸಲುವಾಗಿ ಸಾಹಸಶೌರ್ಯ ಬಲಿದಾನಗಳಿಗೆ ಸಿದ್ಧವಾಗುತ್ತಿದ್ದ ರಜಪೂತ ಮಹಿಳೆಯರು ಆದರ್ಶವಾಗಿದ್ದಾರೆ. ಕೆರೂರರ 'ಇಂದಿರೆ'ಯೂ ವಿಧವಾ ಸಮಸ್ಯೆಯನ್ನು ಚಿತ್ರಿಸುವ ವಸ್ತುವನ್ನು ಒಳಗೊಂಡಿದೆ. ಗುಲ್ವಾಡಿಯವರ 'ಇಂದಿರಾಬಾಯಿ'ಯು ಹೆಣ್ಣನ್ನೇ ಕೇಂದ್ರವಾಗಿಟ್ಟುಕೊಂಡು ನಿರ್ಮಾಣವಾದ ಕಾದಂಬರಿ. ಹೀಗಾಗಿ ಆರಂಭದ ಕಾಲಘಟ್ಟದಲ್ಲಿಯೂ ಸ್ತ್ರೀಪರವಾದ, ಸ್ತ್ರೀ ಕೇಂದ್ರವಾದ ವಸ್ತುವಾಗಿರುವುದನ್ನು ಕತೆ, ಕಾದಂಬರಿಗಳಲ್ಲಿ ಕಾಣುತ್ತೇವೆ. ಮಾಸ್ತಿಯವರ "ಗೌತಮಿ ಹೇಳಿದ ಕತೆ", "ಮೊಸರಿನ ಮಂಗಮ್ಮ" ಇತ್ಯಾದಿ ಮಾದರಿಯ ಕತೆಗಳು ಸಂಪ್ರದಾಯ ಮತ್ತು ಆಧುನಿಕತೆಯ ಸಂಘರ್ಷವನ್ನು ವ್ಯಕ್ತಪಡಿಸುತ್ತವೆ. ಕನ್ನಡ ಕಥಾ ಸಾಹಿತ್ಯದಲ್ಲಿ ವಸ್ತುವಿನ ವೈವಿಧ್ಯತೆಯಲ್ಲಿ ಆದ ವಿಸ್ತಾರ ಪ್ರಗತಿಶೀಲರ ಸಾಧನೆ ಎಂದು ಗುರುತಿಸಬಹುದು. ವೇಶ್ಯೆಯರು, ವಿಧವೆಯರು, ಭಿಕ್ಷುಕಿಯರು, ಹೆಣ್ಣು ಜೀತದಾಳುಗಳು, ಸ್ತ್ರೀ ಕಾರ್ಮಿಕರು, ವೈವಾಹಿಕ ಚೌಕಟ್ಟಿನಾಚೆಗೆ ಬರಲೆತ್ನಿಸುವ ಅತೃಪ್ತ ಗೃಹಣಿಯರು ಹೀಗೆ ಹತ್ತು ಹಲವು ವೈವಿಧ್ಯತೆಯನ್ನು ಪ್ರಗತಿಶೀಲ ಕಥಾವಸ್ತುವು ಒಳಗೊಂಡಿತ್ತು. ಅನಕೃ, ತರಾಸು, ಬಸವರಾಜ ಕಟ್ಟೀಮನಿ, ಚದುರಂಗ ಮುಂತಾದವರ ಕತೆಗಳು ಈ ವರ್ಗಕ್ಕೆ ಸೇರುತ್ತವೆ.

ನೇಮಿಚಂದ್ರರ ಕಥಾ ಸಾಹಿತ್ಯದ ವಸ್ತು, ಭಾಷೆ, ತಂತ್ರಶೈಲಿ ವಿಶ್ಲೇಷಣೆಗೆ ಹಿನ್ನೆಲೆಯಾಗಿ ನಮ್ಮ ಕನ್ನಡದ ಕಥನ ಪರಂಪರೆಯಲ್ಲಿನ ಮಹಿಳೆಯರ ಪ್ರಾತಿನಿಧ್ಯವನ್ನು ಸ್ಥೂಲವಾಗಿ ಅವಲೋಕಿಸುವುದು ಪ್ರಸ್ತುತವೆನಿಸುತ್ತದೆ. ಅನಕೃ ಅವರ 'ಸಮಾಗಮ' ಕತೆಯಲ್ಲಿ ಬರುವ ಮಹಿಳೆ ನೈಸರ್ಗಿಕ ಬಯಕೆಗಳಿಗೆ ಬಲಿಯಾದವಳು. ವೈವಾಹಿಕ ಕಟ್ಟುಪಾಡಿನಾಚೆಗೆ ಸಂಬಂಧ ಬೆಳೆಸಿದಾಗ ಅವಳಲ್ಲಿ ಪಾಪಪ್ರಜ್ಞೆ ಜಾಗೃತವಾಗುತ್ತದೆ. "ದೊಡ್ಡ ಮನುಷ್ಯ" ಕತೆಯಲ್ಲಿ ಓಡಿ ಹೋದ ಹೆಂಡತಿ ಮತ್ತೆ

ಗಂಡನೆಡೆಗೆ ಬಂದಾಗ ಅವಳನ್ನು ಕ್ಷಮಿಸುವದರಿಂದ ಗಂಡ ದೊಡ್ಡ ಮನುಷ್ಯನಾಗುತ್ತಾನೆ. ನಿರಂಜನರ 'ಕೊನೆಯ ಗಿರಾಕಿ'ಯಲ್ಲಿ ಬರುವ ವೇಶ್ಯೆ ತನ್ನದೇ ಆದ ಪ್ರಪಂಚವನ್ನು ತೆರೆದಿರಿಸುತ್ತಾಳೆ. ವ್ಯಾಸರಾಯ ಬಲ್ಲಾಳರ "ವಾತ್ಸಲ್ಯ ಪರೀಕ್ಷೆ" ಕತೆಯು ಕುಟುಂಬದ ಎರಡು ಹೊತ್ತಿನ ಭವಣೆ ತೀರಿಸುವುದಕ್ಕಾಗಿ ಗಂಡನ ಜೊತೆ ಮನೆಯ ಹೊರಗೆ ಹಾಗೂ ಮನೆಯ ಒಳಗೆ ದುಡಿಯುವ ಹೆಣ್ಣಿನ ಸ್ಥಿತಿಯ ಚಿತ್ರಣ ಹೊಂದಿದೆ.

ನವ್ಯದ ಕತೆಗಾರರು ಸ್ತ್ರೀ ವ್ಯಕ್ತಿತ್ವದ ವಿಭಿನ್ನ ಆಯಾಮಗಳನ್ನು ವಿವಿಧ ಮಗ್ಗಲುಗಳನ್ನು ಶೋಧಿಸಿದ್ದಾರೆ. ಸ್ತ್ರೀಪ್ರಜ್ಞೆಯಲ್ಲಿ ಆದ ಪಲ್ಲಟ ನವ್ಯ ಕಥಾಸಾಹಿತ್ಯದ ಪ್ರಮುಖ ಸಾಧನೆಗಳಲ್ಲಿ ಒಂದು. ಇಲ್ಲಿ ಲಂಕೇಶ್, ಅನಂತಮೂರ್ತಿ, ತೇಜಸ್ವಿ, ಶಾಂತಿನಾಥ ದೇಸಾಯಿ ಮೊದಲಾದ ಲೇಖಕರನ್ನು ಹೆಸರಿಸಬಹುದು. ತೇಜಸ್ವಿಯವರ 'ಕಿರುಗೂರಿನ ಗಯ್ಯಾಳಿಗಳು' ಕತೆಯು ಸ್ತ್ರೀಯರು ನಡೆಸುವ ಪ್ರತಿಭಟನೆಯ ಧ್ವನಿಗಳು ಸಮಾಜದ ಬದಲಾದ ಸ್ಥಿತಿಯನ್ನು ತೋರಿಸುತ್ತವೆ. ಸಾಮೂಹಿಕವಾಗಿ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುವ ಪರಿ ಅಪರೂಪದ್ದು. ದುಡಿಮೆ ತಂದುಕೊಡುವ ಆತ್ಮವಿಶ್ವಾಸ, ಆ ಮೂಲಕ ಸಂಘಟನೆಗೆ ಕಾರಣವಾಗುವುದು ಇವರ ಮುಖ್ಯ ನೆಲೆಯಾಗಿದೆ.

ಮಹಿಳಾ ಜಾಗೃತಿಯನ್ನು ಧ್ಯೇಯವಾಗಿರಿಸಿಕೊಂಡ ಮಹಿಳೆಯರೇ ಸಾಹಿತ್ಯಾಭಿವ್ಯಕ್ತಿಯನ್ನು ಮಾಧ್ಯಮವನ್ನಾಗಿರಿಸಿಕೊಂಡರು.ಇಂತಹ ಮಹಿಳೆಯರಲ್ಲಿ ತಿರುಮಲಾಂಬಾ, ಕಲ್ಯಾಣಮ್ಮ, ಶ್ಯಾಮಲಾ, ಕೊಡಗಿನ ಗೌರಮ್ಮ, ವಾಣಿ, ಅನುಪಮಾ ನಿರಂಜನ, ವೀಣಾ ಶಾಂತೇಶ್ವರ ಪ್ರಮುಖರಾಗಿದ್ದಾರೆ. ಹಾಗೆಯೇ ಇವರ ಸಾಹಿತ್ಯಾಭಿವ್ಯಕ್ತಿಯ ಪ್ರಧಾನವಸ್ತು ಸ್ತ್ರೀಯರೇ ಹಾಗೂ ಅವರಿಗೆ ಎದುರಾದ ಸಮಸ್ಯೆಗಳೇ ಆಗಿರುತ್ತವೆ. ಇವರುಗಳ ಸಾಹಿತ್ಯದಲ್ಲಿ ಪರಂಪರಾಗತವಾಗಿ ಬಂದಿರುವ ಸ್ತ್ರೀಗೆ ಸಲ್ಲಬೇಕಾದ ಸ್ಥಾನಗಳ ಚರ್ಚೆ ಇದೆ.

ದಲಿತ-ಬಂಡಾಯ ಸಂವೇದನೆಯ ಭಾಗವಾಗಿ ಸ್ತ್ರೀ ಸಂವೇದನೆಗಳು ಸಾಹಿತ್ಯಕ್ಕೆ ಕಾಲಿರಿಸಿದವು. ಬಂಡಾಯ ಸಾಹಿತ್ಯವನ್ನು ಕುರಿತು ಜಿ.ಎಸ್.ಎಸ್. ಪ್ರಸ್ತಾಪಿಸುತ್ತಾ ಹೀಗೆ ಹೇಳುತ್ತಾರೆ.' "ಕಳೆದ ಒಂದೂವರೆ ದಶಕಗಳಲ್ಲಿ ಬಹುಸಂಖ್ಯಾತ ಮಹಿಳೆಯರು ಬರೆಯಲು ಶುರು ಮಾಡಿರುವುದು ಮತ್ತು ಅವರ ಬರಹಗಳಲ್ಲಿ ಕಂಡು ಬರುತ್ತಿರುವ ವೈಚಾರಿಕ ಎಚ್ಚರಗಳು ಹಾಗೂ ದೃಷ್ಟಿಕೋನಗಳು ಖಂಡಿತವಾಗಿಯೂ ಬಂಡಾಯ ಸಾಹಿತ್ಯ ಚಳುವಳಿಯ ಪರಿಣಾಮಗಳಾಗಿವೆ ಎಂದು ನನ್ನ ತಿಳುವಳಿಕೆ. ಏಕೆಂದರೆ ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಎಚ್ಚರಗೊಂಡು ಮಾತನಾಡಲು ತೊಡಗಿದ ಸಾಮಾಜಿಕ ವರ್ಗಕ್ಕೆ ಮಹಿಳೆಯರೂ ಸೇರುತ್ತಾರೆ"(ಗಿರಿಜಾಶಾಸ್ತ್ರಿ; ೨೦೦೦; ಪುಟ ೨೮). ಅವರ ಈ ಅಭಿಪ್ರಾಯ ಕನ್ನಡ ಸಾಹಿತ್ಯದ ಸ್ತ್ರೀವಾದದ ನೆಲೆಯಲ್ಲಿ ಬಂಡಾಯ ಸಾಹಿತ್ಯ ಚಳುವಳಿ ಒಂದು

ಮೈಲಿಗಲ್ಲಾಗಿರುವುದನ್ನು ಸೂಚಿಸುತ್ತದೆ. ಯಾವುದೇ ಸಾಹಿತ್ಯ ಕೃತಿಯ ಅಸ್ತಿತ್ವದ ಪರಿಧಿಯೊಳಗೆ ಮಾನವನ ಮನಸ್ಸು ಅವನ ಜೀವನಕ್ರಮ, ನೋವು, ನಲಿವು ಮುಂತಾದ ಬದುಕಿನ ಪರಾಮರ್ಶೆಯೇ ವ್ಯವಹರಿಸುತ್ತಿರುತ್ತದೆ. ಆದರೆ ಒಂದು ನಿಜವಾದ, ಸತ್ವಪೂರ್ಣವಾದ ಸಾಹಿತ್ಯ ಕೃತಿಯು ತನ್ನ ಅಸ್ತಿತ್ವದೊಳಗೆ ವಸ್ತು ಬೇರೆ, ಭಾಷೆ ಬೇರೆ ಸ್ವರೂಪ ಬೇರೆ, ತಂತ್ರಬೇರೆ ಎಂದು ಬಿಟ್ಟುಕೊಡುವುದಿಲ್ಲ. ಅದು ವಸ್ತು, ಭಾಷೆ, ತಂತ್ರ ಇವುಗಳೊಡನೆ ಸತತವಾದ ಸಾತತ್ಯವನ್ನು ಸಾಧಿಸುತ್ತದೆ. ನೇಮಿಚಂದ್ರ ಅವರು ಆಧುನಿಕ ಸ್ತ್ರೀ ಸಂವೇದನೆಯನ್ನು ಕೇಂದ್ರಪ್ರಜ್ಞೆಯನ್ನಾಗಿಟ್ಟುಕೊಂಡು ಬರಹವನ್ನು ಕೈಗೊಂಡಿದ್ದಾರೆ.

ಲೇಖಕಿ ನೇಮಿಚಂದ್ರರು ಕಥನ ವಿಶ್ಲೇಷಣೆಗೆ ಆಯ್ದುಕೊಳ್ಳುವ ವಸ್ತು, ಸ್ತ್ರೀ ಪರ ಕಾಳಜಿಯನ್ನು ಹೊಂದಿರುವಂತಹದು. 'ನನ್ನದಲ್ಲದ ಬದುಕಿಗಾಗಿ' ಕತೆಯ ವಸ್ತು ಕನ್ನಡ ಸಾಹಿತ್ಯ ಪರಂಪರೆಗೆ ಹೊಸದಲ್ಲ. ಏಕೆಂದರೆ ವಿಧವಾ ಪುನರ್ವಿವಾಹ ಸಮಸ್ಯೆಯ ಕುರಿತಾಗಿ ಕನ್ನಡದಲ್ಲಿ ಈಗಾಗಲೇ ಹಲವು ಲೇಖಕಿಯರು ನಿರ್ವಚಿಸಿದ್ದಾರೆ. ಕೊಡಗಿನ ಗೌರಮ್ಮನವರ ಪುನರ್ವಿವಾಹದ ಕತೆಯು ಸಹ ವಿಧವಾ ಸಮಸ್ಯೆಯ ಸುತ್ತ ಹೆಣೆದಿರುವ ಕತೆ. "ಬಾಲವಿಧವೆಯಾದ ರಾಜಿಯ ಕಡೆಗೆ, ಹೆಂಡತಿ ಸತ್ತ ಕೆಲದಿನಗಳಲ್ಲಿಯೇ ನಾಯಕ ಅಕರ್ಷಿತನಾಗುತ್ತಾನೆ. ಅವಳು ವಿಧವೆಯೆಂದು ತಿಳಿದ ತಕ್ಷಣ ಅಪವಿತ್ರನಾದವನಂತೆ ಥಟ್ಟನೆ ಹಿಂತೆಗೆಯುತ್ತಾನೆ. ಅದಕ್ಕೆ ನಾಯಕಿ ಪ್ರತಿಕ್ರಿಯಿಸುತ್ತಾ ಬೆಳಗಾದೊಡನೆ ವಿಧವೆ ಮುಖ ನೋಡುವ ಅಪೇಕ್ಷೆ ಇಲ್ಲವೆ? ನನಗೂ ಕೂಡ ಹೆಂಡತಿ ಸತ್ತು ಇನ್ನು ಆರು ತಿಂಗಳಾಗುವ ಮೊದಲೇ ತನ್ನ ಮಗುವನ್ನು ಮರೆತು ವಿವಾಹವಾಗಬಯಸುವ ಗಂಡಸಿನ ಮುಖ ನೋಡುವ ಆಸೆ ನನಗೂ ಇಲ್ಲ" (ಕಾಳೇಗೌಡ ನಾಗವಾರ (ಸಂ), ೨೦೦೨, ಪು. ೧೨೬) ಎಂದು ಅವನ ಮುಖಕ್ಕೆ ರಾಚುತ್ತಾಳೆ. ನೇಮಿಚಂದ್ರರ 'ನನ್ನದಲ್ಲದ ಬದುಕಿಗಾಗಿ' ಕತೆಯಲ್ಲಿನ ನಾಯಕಿ ಶೀಲ ಈಗಾಗಲೇ ಗಂಡನಿಂದ ಬಲತ್ಕಾರಕ್ಕೊಳಗಾಗಿರುವ ಹೆಣ್ಣು. ಲೈಂಗಿಕ ರಾಜಕಾರಣವನ್ನು ವಿರೋಧಿಸುತ್ತಾ ಶೀಲಾ ತನ್ನ ಹೊಸಬಾಳಿಗೆ ನಾಂದಿ ಹಾಡುತ್ತಾಳೆ. ಇಬ್ಬರು ಲೇಖಕಿಯರಲ್ಲಿ ಪುರುಷನ ಲೈಂಗಿಕ ರಾಜಕಾರಣದ ವಿರೋಧವಿರುವುದನ್ನು ಗ್ರಹಿಸಬಹುದು. 'ಸಮಾಜದಲ್ಲಿ ನಡೆಯದಿದ್ದುದನ್ನು ಮಾಡಿ ತಾನು ಪರರ ಹಾಸ್ಯಕ್ಕೆ ಈಡಾಗಬೇಕೆ? ಸಮಾಜದಲ್ಲಿ ನಡೆದರೂ ನಾನು ನನ್ನ ಪವಿತ್ರ ಕುಲವನ್ನು ವಿಧವಾ ವಿವಾಹದಿಂದ ಕಲುಷಿತ ಮಾಡಲು ತಯಾರಾಗಿಲ್ಲ. ಪ್ರತಿ ದಿನ ಬೆಳಗಾದೊಡನೆ ವಿಧವೆಯ ಮುಖ ನೋಡುವ ಬಯಕೆ ನನಗಿಲ್ಲ"(ಅದೇ; ೨೦೦೬, ಪುಟ ೧೨೬).

ಕತೆಯು ಈ ಸಂಭಾಷಣೆಯಿಂದ ಅಂದಿನ ಸಮಾಜದಲ್ಲಿ ವಿಧವಾ ವಿವಾಹ ಘೋರ ಅಪರಾಧ ಎಂಬ ರೀತಿಯಲ್ಲಿತ್ತು. ವಿಧವಾ ವಿವಾಹದಿಂದ ಕುಲಗಳು ಅಪವಿತ್ರವಾಗುತ್ತವೆ ಎಂಬ ನಂಬಿಕೆಯಿತ್ತು. ಆದರೆ ೬೦-೭೦ರ ದಶಕದ ನೇಮಿಚಂದ್ರರ "ನನ್ನದಲ್ಲದ ಬದುಕಿಗಾಗಿ" ಕತೆಯಲ್ಲಿ ವಿಧವಾ ವಿವಾಹ ಅಪರಾಧದ ರೀತಿಯಲ್ಲಿ ಚಿತ್ರಿತವಾಗಿಲ್ಲ. ಆದರೆ ಶೀಲ, ಪಾವಿತ್ರತೆಗೆ ಹೆಚ್ಚಿನ ಮಹತ್ವವಿರುವುದು ತಿಳಿಯುತ್ತದೆ. ಅದಕ್ಕಾಗಿ ಕತೆಯ ನಾಯಕಿ ತನ್ನ ಕನ್ಯತ್ವವನ್ನು ಮರುಜೋಡಿಸಲು ಮುಂಬಯಿಗೆ ಪಯಣ ಬಯಸುತ್ತಾಳೆ. ಮುಂದುವರೆದ ಆಧುನಿಕ ವೈದ್ಯಕೀಯ ಒಂದೆಡೆ ಚಿತ್ರಿತವಾದರೆ, ಸಂಪ್ರದಾಯದ,

ಮೂಢನಂಬಿಕೆಯಡಿಯಲ್ಲಿ ಶೀಲ, ಮಡಿ- ಮೈಲಿಗೆಯ ಚಿತ್ರಣಗಳು ಇನ್ನೊಂದೆಡೆ ಚಿತ್ರಣಗೊಂಡಿವೆ. "ನನ್ನದಲ್ಲದ ಬದುಕಿಗಾಗಿ" ನಾಯಕಿ ಶೀಲಾಗೆ ಎರಡನೆಯ ಮದುವೆ ಗೊತ್ತಾದಾಗ ಆಕೆಯು ಕುಟುಂಬಕ್ಕೆ ಎಲ್ಲಿಲ್ಲದ ಆನಂದವಾಗುತ್ತದೆ. ಶೀಲಾಗೆ ಉದ್ಯೋಗವಿದೆ, ಆದರೆ ಮದುವೆ ಮಾಡಿ ಹೆಣ್ಣನ್ನು ಗಂಡನ ಮನೆಗೆ ಕಳಿಸುವುದು ಆ ಕುಟುಂಬಕ್ಕೆ ಅನಿವಾರ್ಯವಾಗಿದೆ. ಗೌರಮ್ಮನ ಕತೆಯಲ್ಲಿ ರಾಜಿ ಬಾಲವಿಧವೆ. ಇನ್ನು ಶಾಲೆಗೆ ಹೋಗುವ ಬಾಲೆ. ಆದರೂ ಸಹ ಪರಿಸ್ಥಿತಿಯ ಗಂಭೀರತೆಯನ್ನು ತಿಳಿದವಳು. ಹೀಗೆ ಒಂದೇ ವಸ್ತುವು ಇಬ್ಬರು ಲೇಖಕಿಯರಲ್ಲಿ ವಿಭಿನ್ನವಾಗಿ ಚಿತ್ರಿತಗೊಂಡಿರುವುದನ್ನು ಕಾಣಬಹುದು.

ವೀಣಾರ 'ತಿರುಗಿ ಹೋದಳು' ಕತೆಯು ಗಂಡು-ಹೆಣ್ಣಿನ ವೈವಾಹಿಕ ಜೀವನದ ವಿಫಲತೆಯನ್ನು ಹೇಳುತ್ತದೆ. ಸುರೇಶ ಹೆಂಡತಿಯ ವಿನಾ ಬೇರೆ ನೆಂಟರಿಷ್ಟರಿಗೆಲ್ಲಾ ಹಣ ಕೊಡುತ್ತಾನೆ. ಬಸುರಿ ಲಕ್ಷ್ಮಿ ಆ ದಿನಗಳಲ್ಲಿ ಗಂಡನು ಆಕೆಗೆ ಏನಾದರೂ ತರಲೆಂದು ಬಯಸುತ್ತಾಳೆ. ಆದರೆ ಸುರೇಶ ಅವಳಿಗೊಂದು ಸೀರೆಯನ್ನು ಸಹ ತರುವುದಿಲ್ಲ. ಈ ಕತೆಯಲ್ಲಿ ಲಕ್ಷ್ಮೀ ಗಂಡನನ್ನು ಸರಿ ದಾರಿಗೆ ತರಲು ಎಲ್ಲಾ ಪ್ರಯತ್ನ ಮಾಡಿದರೂ ಅವು ವಿಫಲವಾಗುತ್ತವೆ. ಸುರೇಶನ ಸಂಬಂಧಿ ರೇಖಾಳೊಂದಿಗೆ ಈತನ ಸಂಬಂಧ ತೀವ್ರವಾದಾಗ ಲಕ್ಷ್ಮೀ ದಾಂಪತ್ಯವ್ಯೂಹದಿಂದ ತವರಿಗೆ ನಡೆಯುತ್ತಾಳೆ. ಆದರೆ ತವರಿನಲ್ಲಿರುವುದು ಒಳಿತಲ್ಲವೆಂದು ಮತ್ತೆ ಸುರೇಶನ ಬಳಿ ಬರುತ್ತಾಳೆ ಲಕ್ಷ್ಮೀಗೆ ಉದ್ಯೋಗದ ಭದ್ರತೆಯಿದೆ. ಆದರೆ ಅವಳಿಗೊಂದು ನಿರ್ದಿಷ್ಟ ನೆಲೆಯಿಲ್ಲ. ಇತ್ತ ಗಂಡನೊಡನೆ ಇರಲಾರದೆ ಅತ್ತ ತವರಿನಲ್ಲಿಯೂ ಇರಲಾರದೆ ಗೊಂದಲದಲ್ಲಿ ಲಕ್ಷ್ಮೀ ಸೆಣಸಾಡುತ್ತಾಳೆ. ನೇಮಿಚಂದ್ರರ 'ತ್ರಿಕೋನದಾಚೆಗೆ' ಕತೆಯು ಸಹ ಬಾಳಸಂಗಾತಿಗೆ ಅನ್ಯಾಯ ಮಾಡುವ ಗಂಡಸಿನ ಪ್ರವೃತ್ತಿಯನ್ನು ಹೇಳುತ್ತದೆ ಈ ಕತೆಯ ತುಷಾರ ಸಹ ಹೆಂಡತಿಯ ಭಾವನೆಗಳಿಗೆ, ಆಸೆ, ಅಭಿಲಾಷೆಗಳಿಗೆ ಲಕ್ಷ್ಯಕೊಡದೆ ಯೌವ್ವನದ ಹುಡುಗಿಯರೊಂದಿಗೆ ಕಾಮಾಲಾಪನೆ ನಡೆಸುತ್ತಾನೆ. ಈ ಎರಡೂ ಕತೆಗಳು ಹೆಣ್ಣು ಕುಟುಂಬವ್ಯೂಹದಿಂದ ಹೊರ ಹೋಗುವುದನ್ನು ಮತ್ತು ಹೊಸದಾದ ಸ್ವಾತಂತ್ರ್ಯ ಜೀವನವನ್ನು ನಡೆಸುವುದನ್ನು ಹೇಳುವುದಿಲ್ಲ. ಕುಟುಂಬದಲ್ಲಿಯೇ ಪರಿಸ್ಥಿತಿಯ ಬದಲಾವಣೆಗೆ ಪಾತ್ರಗಳು ನಿರ್ಧಾರಕ ನಿಲುವನ್ನು ಕೈಗೊಳ್ಳುತ್ತವೆ. 'ತಿರುಗಿ ಹೋದಳು' ಕತೆಯ ಲಕ್ಷ್ಮೀ ಗಂಡನನ್ನು ಸಂಪೂರ್ಣವಾಗಿ ನಂಬುತ್ತಾಳೆ. ಅವನ ಚಲನ-ವಲನಗಳ ಮೇಲೆ ಸಣ್ಣ ಅನುಮಾನವು ಅವಳಿಗಿಲ್ಲ. ಕೊನೆಗೆ ಸುರೇಶನ ಅಕ್ಕನ ಮಗ ರವಿಗೆ ಸ್ಕೂಟರ್ ಕೊಡಿಸಿರುವುದು ತನ್ನ ಗಂಡನೇ ಎಂದು ತಿಳಿದು ಒಮ್ಮೆಲೇ ಆಘಾತಕ್ಕೊಳಗಾಗುತ್ತಾಳೆ. ಆದರೆ 'ತ್ರಿಕೋನದಾಚೆಗೆ' ಕತೆಯಲ್ಲಿ ಗಂಡನ ಎಲ್ಲಾ ಚಲನ-ವಲನಗಳ ಪರಿಚಯವು ಅವಳಿಗಿರಲಿಲ್ಲ. ಆದರೂ ಅವನ ಎದುರುನಿಂತು ವಾದಿಸುವುದಿಲ್ಲ. ಪರಿಸ್ಥಿತಿಯನ್ನು ತಿಳಿಯಾಗಿ ಸಾಂತ್ವನಗೊಳಿಸಲು ಪ್ರಯತ್ನಿಸುತ್ತಾಳೆ. ಕತೆಯ ಖಳನಾಯಕಿ ವರ್ಷಾಗೆ

ತುಷಾರ್‌ನ ಹೆಂಡಿತಯ ಮೇಲೆ ಅನುಕಂಪವಿದೆ. ತಾನು ಮಾಡುತ್ತಿರುವುದು ತಪ್ಪು ಎಂಬ ಅಪರಾಧಿ ಭಾವವಿದೆ ಆದರೆ ವೀಣಾರ 'ತಿರುಗಿ ಹೋದಳು' ಕತೆಯ ರೇಖಾಗೆ ಈ ಪ್ರಜ್ಞೆಯಿಲ್ಲ.

ಸ್ತ್ರೀ ಸಂವೇದನೆಯನ್ನು ತಮ್ಮ ಕತೆಗಳಲ್ಲಿ ಸಾರ್ಥಕ ರೀತಿಯಲ್ಲಿ ನಿರ್ವಹಿಸುತ್ತಿರುವ ನೇಮಿಚಂದ್ರರು ಲೈಂಗಿಕತೆಯ ವಸ್ತುವನ್ನು ಸ್ತ್ರೀ ಮತ್ತು ಪುರುಷ ನೆಲೆಯಿಂದ ವಿವೇಚಿಸಿದ್ದಾರೆ. 'ಕೆಂಪು ಕಲಕಿದ ನೀರು' ಕತೆಯಲ್ಲಿ ಶೀಲಾ ನಾಲ್ಕು ಜನ ಗೂಂಡಾಗಳಿಂದ ಅತ್ಯಾಚಾರಕ್ಕೊಳಗಾದ ಹೆಣ್ಣು ಈ ಹೆಣ್ಣನ್ನು ತುಷಾರ್ ಸಂತೈಯಿಸುವ ರೀತಿಯೂ ಮಾನವೀಯತೆಯಿಂದ ಕೂಡಿದೆ. ಅತ್ಯಾಚಾರವೆಸಗಿದವ ಪುರುಷ, ಸಂತೈಯಿಸುವವನು ಪುರುಷ. ಆದರೆ ಪುರುಷ ಜಾತಿಯ ಎರಡು ವಿಭಿನ್ನ ಪ್ರವೃತ್ತಿಗಳ ಪರಿಚಯವಿದೆ. ಶೋಷಣೆಯ ವಿರುದ್ದ ಲೇಖಕಿಯ ಕ್ರೋಧವೇ ವಿನಃ ಪುರುಷರ ವಿರುದ್ಧವಲ್ಲ. ಲೇಖಕಿ ಲೈಂಗಿಕ ವಿವರಗಳನ್ನು ಅತೀ ಸೂಕ್ಷ್ಮವಾದ ಸೂಚ್ಯವಾದ ಮಾತುಗಳಲ್ಲಿ ಹೇಳಿ ಮುಗಿಸುತ್ತಾರೆ. ಅವರ ಬರವಣಿಗೆಯ ತೀಕ್ಷ್ಣತೆಗೆ 'ಕೆಂಪು ಕಲಕಿದ ನೀರು' ಕತೆಯ ವಿವರಣೆ ಸಾಕ್ಷಿಯಾಗಿದೆ. "ಬರೀ ಒರಟು ತೊಡೆ, ಅಹಸ್ಯ ವಾಸನೆಯ ತುಟಿಗಳ ಅನುಭವ. ಕಬ್ಬನ್ನು ಗಾಣದಲ್ಲಿ ಹಾಕಿ ಹಿಂಡಿ ಹಿಪ್ಪೆ ಮಾಡಿದಷ್ಟು ನೋವು... ನೋವು... ನಿರಂತರ ನೋವು... ಮಾಯದ ಗಾಯಗಳು... ಬಿರ್ಲಾ ಮಂದಿರದಿಂದ ಪ್ರಾರ್ಥನೆ ಕೇಳುತ್ತಲೆ ಇತ್ತು. ನನ್ನ ಮರಣಯಾತನೆ ಸಾಗಿತ್ತು"(ನೇಮಿಚಂದ್ರ, ೨೦೦೧(i), ಪುಟ ೩೨೮).

ಇದೇ ಮಾದರಿಯ ಸಾರವನ್ನು 'ನನ್ನದೆಯ ಕದನದಲಿ' ಕತೆಯು ಒಳಗೊಂಡಿದೆ. ಕೆಲಸದ ಬಾಲೆಯ ಮೇಲೆ ಗಂಡ ಲೈಂಗಿಕಕ್ರಿಯೆಗೆ ತೊಡಗಿರುವುದನ್ನು ಕಣ್ಣಾರೆ ಕಂಡ ಮಿಹಿಕಾ ತನ್ನ ಮನಸ್ಸಿನಲ್ಲಿಯೇ ಸಂಬಂಧಗಳನ್ನು ಉಳಿಸಿಕೊಳ್ಳುವುದರ ಬಗೆಗೆ ಕದನ ನಡೆಸುತ್ತಾಳೆ. ಕೊಡಗಿನ ಗೌರಮ್ಮನವರ 'ಅಪರಾಧಿ ಯಾರು?" ಕತೆಯ ಪಾರ್ವತಿಯೂ ಕೂಡ ಅತ್ಯಾಚಾರಕ್ಕೊಳಗಾಗಿ ಹಿಂದೂ ಸಮಾಜದಿಂದ ಮುಸ್ಲಿಂ ಸಮಾಜಕ್ಕೆ ಮತಾಂತರ ಹೊಂದುತ್ತಾಳೆ. ಇದೇ ವಸ್ತುವನ್ನು ಇಬ್ಬರೂ ಮಹಿಳೆಯರು ಕಾಲಾಂತರದಲ್ಲಿ ವಿಶ್ಲೇಷಿಸಿರುವುದನ್ನು ಗಮನಿಸಬಹುದು.

ಗಂಡು ಹೆಣ್ಣಿನ ಸಂಬಂಧಗಳು ಎಲ್ಲ ತಲೆಮಾರುಗಳ ಲೇಖಕಿಯರ ಕತೆಗಳಿಗೆ ವಸ್ತು ಒದಗಿಸಿವೆ. ನೇಮಿಚಂದ್ರರು ಸಹ ಅದಕ್ಕೆ ಹೊರತಾಗಿಲ್ಲ. 'ನಮ್ಮ ಕನಸುಗಳಲ್ಲಿ ನೀವಿದ್ದೀರಿ' ಕತೆಯ ನಾಯಕಿ ಕಾವ್ಯ ಗಂಡನಿಂದ ಸಿಗದ ಸುಖ-ಸಂತೋಷದ ಕ್ಷಣಗಳನ್ನು ಗಂಡನ ಗೆಳೆಯನ ಸಹವಾಸದಲ್ಲಿ ಕಾಣುತ್ತಾಳೆ. ಹೆಣ್ಣಿಗೆ ಅವಳದೇ ಆದ ಆಲೋಚನೆ, ಸ್ವತಂತ್ರ ಅಭಿಲಾಷೆಗಳಿವೆ. ಅವುಗಳನ್ನು ಪಡೆಯಲು ಕುಟುಂಬದ ವ್ಯೂಹದಿಂದ ಹೊರ ನಡೆಯುತ್ತಾಳೆ. ಹೀಗೆ ಹೊರ ನಡೆಯುವುದನ್ನು ಕತೆಯಲ್ಲಿ ಅಪರಾಧ ಎನ್ನುವಂತೆ ಸೃಷ್ಟಿಸಿಲ್ಲ. ಹಾಗಾಗಿ ನೇಮಿಚಂದ್ರ ವಿಶಿಷ್ಟ ಸ್ತ್ರೀಪ್ರಜ್ಞೆಯ

ಲೇಖಕಿಯಾಗುತ್ತಾರೆ. 'ತ್ರೀಕೋನದಾಚೆಗೆ' ಕತೆಯೂ ಇದೇ ಗಂಡು-ಹೆಣ್ಣಿನ ಸಂಬಂಧದ ನೆಲೆಯನ್ನು ವಿಮರ್ಶಿಸುವ ಸಂಕಥನ. ಗಂಡ ಯೌವ್ವನದ ಸ್ತ್ರೀಯರೊಂದಿಗೆ ನಡೆಸುವ ಕಾಮಾಲಾಪನೆಯನ್ನು ಲೀಲಾ ಕುಟುಂಬದ ವ್ಯೂಹದಿಂದಲೆ ವಿರೋಧಿಸುತ್ತಾಳೆ. ಸಾಂಪ್ರದಾಯಿಕ ಹೆಣ್ಣಿಗೆ ವಿಚ್ಛೇದನ ವಿರೋಧವಾಗಿ ಕಂಡರೂ 'ಕಪ್ಪು ಮೋಡ, ಬೆಳ್ಳಿ ಅಂಚು' ಕತೆಯ ನಾಯಕಿಗೆ ಇದು ಅನಿವಾರ್ಯವಾಗುತ್ತದೆ. "ಕಪ್ಪು ಮೋಡ, ಬೆಳ್ಳಿ ಅಂಚು" ಕತೆಯ ವಸ್ತುವು ಆಧುನಿಕ ಸ್ತ್ರೀಯ ಬದಲಾದ ಮನೋಸ್ಥೈರ್ಯವನ್ನು ಬಿಂಬಿಸುತ್ತದೆ.

"ಬದುಕು ಕಾಯುವುದಿಲ್ಲ" ಕತೆಯ ಸಾರಾಂಶವು ವಿಷಮ ಮನೋಭಾವದ ದಾಂಪತ್ಯದಿಂದ ಕೂಡಿದೆ. ಗಂಡ-ಹೆಂಡತಿಯ ಆಲೋಚನೆಗಳು ವೈರುಧ್ಯದಿಂದ ಕೂಡಿವೆ. ಬದುಕು ಯಾರಿಗೂ ಕಾಯುವುದಿಲ್ಲ. ಇದು ಯಾಂತ್ರಿಕೃತವಾದುದು ಎಂಬುದು ವಿಶೂನ ನಿಲುವಾದರೆ, ಬದುಕಿನ ಮಾನವೀಯ ಮೌಲ್ಯಗಳಿಗೇ ಬೆಲೆ ಕೊಡುವುದು ಸಂಯುಕ್ತಾಳ ನಿಲುವು. ಹೀಗೆ ನೇಮಿಚಂದ್ರರ ಗಂಡು-ಹೆಣ್ಣಿನ ಸಂಬಂಧದ ವಿವಿಧ ಮಗ್ಗಲುಗಳನ್ನು, ವೈರುಧ್ಯಗಳನ್ನು ಕಥಾಸಾಹಿತ್ಯದ ಮೂಲಕ ಅಭಿವ್ಯಕ್ತಿಗೊಳಿಸಿದ್ದಾರೆ.

ತಾಯ್ತನದ ಸಮಸ್ಯೆ ಬಹುತೇಕ ಎಲ್ಲಾ ಬರಹಗಾರರಿಗೆ ವಸ್ತುವಾಗಿರುವಂತೆ ನೇಮಿಚಂದ್ರರ 'ಹೊಸಹುಟ್ಟು' ಕತೆಯೂ ಕೂಡಾ ಇಂಥಹುದೇ ಸಮಸ್ಯೆಯನ್ನು ವಸ್ತುವನ್ನಾಗಿ ಹೊಂದಿದೆ. ತಾಯ್ತನ ಸ್ತ್ರೀಯ ನೈಸರ್ಗಿಕ ಅನುಭವಗಳಲ್ಲಿ ಒಂದು. ಇದರಿಂದ ವಂಚಿತಳಾದ ಶಶಿ ಚಿತ್ರಕಲೆಯ ಮೂಲಕ ಜೀವನದ ಸೃಜನಶೀಲತೆಯನ್ನು ಉಳಿಸಿಕೊಳ್ಳುತ್ತಾಳೆ. ಅವಳ ಕುಟುಂಬದವರೂ ಹಾಗೂ ಅವಳಿರುವ ಸಮಾಜ ಅವಳನ್ನು ಬಂಜೆ ಎಂದು ಅಸಮಾಧಾನ ವ್ಯಕ್ತಪಡಿಸಿದರೂ ಗಂಡ ಪೋಷಕ ಪಾತ್ರವಾಗಿರುವುದು ಪ್ರಧಾನ ಅಂಶ. ಗಂಡು-ಹೆಣ್ಣಿನ ಸಂಬಂಧದಲ್ಲಿ ಸಾಮಾನ್ಯವಾಗಿ ಬರುವ ಸಂಘರ್ಷ ಕತೆಯಲ್ಲಿಲ್ಲ. ಇಪ್ಪತ್ತೊಂದನೆಯ ಶತಮಾನದಲ್ಲಿ ಬರಬಹುದಾದ ಗಂಡು-ಹೆಣ್ಣಿನ ಸಂಬಂಧದ ಮಾದರಿ ಇಲ್ಲಿದೆ. ಅಂದರೆ ಅರಿತುಬಾಳುವ, ಸಮಾನತೆಯಿಂದ ಕಾಣುವ ಲಕ್ಷಣಗಳು ಎದ್ದು ಕಾಣುತ್ತವೆ.

'ತೆರೆಗಳು ಸರಿದವು', 'ನೀವು ಕಾಣದ ನಾಳೆಗಳಲ್ಲಿ', 'ಇತಿಹಾಸದಂಚಿನಲ್ಲಿ...', ಕತೆಗಳು ಕೌಟುಂಬಿಕ ನೆಲೆಯನ್ನು ನಿರ್ವಚಿಸುತ್ತವೆ. ಮನುಷ್ಯ-ಮನುಷ್ಯರ ನಡುವಿನ ಸಂಬಂಧವನ್ನು ತಿಳಿಸಲು ಪ್ರಯತ್ನಿಸುತ್ತವೆ. ನೇಮಿಚಂದ್ರ ಅವರು ಸ್ತ್ರೀ ಪರ ಕಾಳಜಿ ಹೊಂದಿರುವ ಪುರುಷ ಪಾತ್ರಗಳನ್ನು ನಿರ್ಮಿಸುವಲ್ಲಿ ಯಶಸ್ವಿಯಾಗಿದ್ದಾರೆ. 'ಮರಳಿ ಬದುಕಿಗೆ ಈ ಪಯಣ...' ಕತೆಯ ರಿಪುದಮನ್‌ಸಿಂಗ್ ಹೆಂಡತಿ ಸುಧಾಳ ಅನಾರೋಗ್ಯದಿಂದಾಗಿ ಮನೆಯ ಮತ್ತು ಮಡದಿಯ ಹೊಣೆಯನ್ನು ಹೊರುತ್ತಾನೆ. ತಂದೆ-ತಾಯಿಯರು ಸುಧಾಳ ಕಾಯಿಲೆ ಗುಣವಾಗುವಂತಹದಲ್ಲ. ಎರಡನೇ ವಿವಾಹ ಕುರಿತು

ಪ್ರಸ್ತಾಪಿಸಿದಾಗ ರಿಪು ಪರಿಸ್ಥಿತಿಯಿಂದ ಪಲಾಯನ ಮಾಡದೆ ಸುಧಾಳ ಸರ್ವಾಂಗೀಣ ಬದಲಾವಣೆಗೆ ಬೆಂಬಲ ನೀಡುತ್ತಾನೆ. ಈವರೆಗಿನ ಬದುಕಿನ ಎಲ್ಲ ಊರು ಮತ್ತು ವ್ಯಕ್ತಿಗಳ ಸಂಬಂಧವನ್ನು ಚಿಕ್ಕಮಗುವಿಗೆ ತಾಯಿ ಪರಿಚಯಿಸುವ ರೀತಿಯಲ್ಲಿ ರಿಪು ಹೆಂಡತಿಗೆ ತಿಳಿಸಿ ಹೇಳುತ್ತಾನೆ. ಸಾಮಾನ್ಯವಾಗಿ ಗಂಡಸು ದೈಹಿಕ ಸುಖ ನೀಡದ ಹೆಂಡತಿಯಿಂದ ಬೇರೆಯಾಗಿ, ಬೇರೊಂದು ಹೆಣ್ಣಿನ ಸಹವಾಸದಲ್ಲಿ ಇರಲು ಪ್ರಯತ್ನಿಸುತ್ತಾರೆ. ಆದರೆ ಲೇಖಕಿಗೆ ಇಲ್ಲಿ ಮುಖ್ಯವಾಗಿರುವುದು ಮಾನವೀಯತೆ. ಸುಧಾಳನ್ನು ದುರ್ಬಲ ಸ್ಥಿತಿಯಿಂದ ಆಕೆಯನ್ನು ಒಂಟಿ ಮಾಡದೆ ಪ್ರತಿಯೊಂದು ಹೆಜ್ಜೆ ಹೆಜ್ಜೆಗೂ ಜೊತೆಯಾಗುತ್ತಾನೆ. ಸಾಮಾನ್ಯವಾಗಿ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಹೆಣ್ಣಿನ ಮತ್ತು ಗಂಡಿನ ಅಂಶಗಳಿರುತ್ತವೆ. ಹೀಗೆ ಅತಿಯಾದ ಹೆಣ್ತನವನ್ನು ಹೊಂದಿರುವ ಪಾತ್ರಗಳೇ ಸ್ತ್ರೀಪರ ಕಾಳಜಿ ಹೊಂದಿರುವ ವ್ಯಕ್ತಿಗಳಾಗಿ ಕಾಣುತ್ತಾರೆ. 'ಹೊಸ ಹುಟ್ಟು' ಕತೆಯ ರಮೇಶ, 'ಕೆಂಪು ಕಲಕಿದ ನೀರು' ಕತೆಯ ತುಷಾರ ಮತ್ತು ಆಷು, 'ನನ್ನದಲ್ಲದ ಬದುಕಿಗಾಗಿ' ಕತೆಯ ಡಾಕ್ಟರ್, 'ಮರಳಿ ಬದುಕಿಗೆ ಈ ಪಯಣ' ಕತೆಯ ರಿಪುದಮನ್‌ಸಿಂಗ್ ಇತ್ಯಾದಿ ಪಾತ್ರಗಳು ಇದೇ ಮಾದರಿಗೆ ಸೇರಿದವು.

ಭಾಷೆ ಒಂದು ಸಾಮಾಜಿಕ ಸೃಷ್ಟಿ. ಸಾಹಿತ್ಯ ಬೇರೆ ಅಲ್ಲ. ಭಾಷೆ ಬೇರೆ ಅಲ್ಲ. ಏಕೆಂದರೆ ಸಾಹಿತ್ಯ ಸಂಭವಿಸುವುದು ಭಾಷೆಯಲ್ಲಿಯೇ. ಸಾಹಿತ್ಯಸೃಷ್ಟಿ ಭಾಷೆಯ ಮುಖಾಂತರ ಮತ್ತು ಭಾಷೆಯಲ್ಲಿಯೇ ಆಗುವಂತಹ ಒಂದು ವಿಶಿಷ್ಟ ಸಂವಹನ ಕ್ರಿಯೆ. ಶೈಲಿಶಾಸ್ತ್ರಜ್ಞರ ಪ್ರಕಾರ ಕೂಡ ಸಾಹಿತ್ಯವೆಂದರೆ ಅದರ ಭಾಷೆ ಕಥೆಗಳಲ್ಲಿನ ಪಾತ್ರಗಳನ್ನಾಗಲೀ, ಘಟನೆಗಳನ್ನಾಗಲೀ, ಸನ್ನಿವೇಶಗಳನ್ನಾಗಲೀ ಓದುಗರ ಅಥವಾ ವಿಮರ್ಶಕರ ಅರಿವಿಗೆ ತಂದು ಕೊಡುವುದರ ಮಾಧ್ಯಮ ಎಂದರೆ ಈ ಭಾಷೆಯೇ. ಭಾಷೆಯಲ್ಲಿ ಪ್ರಯೋಗಶೀಲತೆಯನ್ನು ನಡೆಸುವುದರ ಮೂಲಕ ಕತೆಗಾರ್ತಿ ನೇಮಿಚಂದ್ರ ಸಾಹಿತ್ಯಕ್ಕೆ ಅನನ್ಯವಾದ ರೀತಿಯಲ್ಲಿ ವೈವಿಧ್ಯತೆಯ ಭಾಷೆ, ವಿಶಿಷ್ಟತೆಯನ್ನು ಒದಗಿಸಿಕೊಟ್ಟಿದ್ದಾರೆ.

ಲೇಖಕಿಯು ಕಥನ ವಿಶ್ಲೇಷಣೆಗೆ ಬಳಸುವುದು ನಗರ ಜೀವನದ ಗ್ರಂಥಸ್ಥ ಭಾಷೆಯೇ. ಮಧ್ಯಮ ವರ್ಗದ ಶಿಕ್ಷಿತ ಹಾಗೂ ಉದ್ಯೋಗಸ್ಥ ಸ್ತ್ರೀಯರೇ ಹೆಚ್ಚಾಗಿ ಇವರ ಕತೆಗಳಲ್ಲಿ ಕಾಣಸಿಗುತ್ತಾರೆ. ಭಾಷೆಯ ಮೇಲೆ ಹಿಡಿತ ಸಾಧಿಸಿರುವ ಲೇಖಕಿಯು ಕತೆಗಳನ್ನು ಸರಳ ಶೈಲಿಯಲ್ಲಿ ಓದುಗರಿಗೆ ಮನಮುಟ್ಟುವಂತೆ ಬರೆದಿದ್ದಾರೆ. ಸ್ತ್ರೀವಾದಿ ದೃಷ್ಟಿಕೋನದಿಂದ ಬರವಣಿಗೆಯನ್ನು ಕೈಗೊಂಡಿರುವ ಲೇಖಕಿ ಬರವಣಿಗೆಯಲ್ಲಿ ಸೃಜನಶೀಲತೆಯನ್ನು ದುಡಿಸಿಕೊಂಡಿದ್ದಾರೆ. ಕಥಾನಿರೂಪಣೆಯಲ್ಲಿ ಹೇಳಬೇಕಾದುದನ್ನು ಅತ್ಯಂತ ಸೂಚ್ಯವಾಗಿ ತಿಳಿಸಲು ಪ್ರಯತ್ನಪಡುತ್ತಾರೆ. ಪಾತ್ರಗಳು ನಗರವಾಸಿಯಾದ ಕಾರಣ ಭಾಷೆಯೂ ಗ್ರಂಥಸ್ಥವಾಗಿದೆ. ಗ್ರಾಮೀಣ ಪಾತ್ರಗಳಲ್ಲಿ ಇರುವುದರಿಂದ ಗ್ರಾಮ್ಯ ಭಾಷೆಯ ಬಳಕೆಯಲ್ಲಿ ನೇಮಿಚಂದ್ರರ ಕತೆಗಳಲ್ಲಿ ಕಂಡುಬರುವ ತಾತ್ವಿಕ

ತಿಳಿವು. ಜಾಗೃತ ವಾಸ್ತವಪ್ರಜ್ಞೆಗೆ 'ತ್ರಿಕೋನದಾಚೆಗೆ' ಕತೆಯ ಈ ಸಂಭಾಷಣೆಯನ್ನು ನೋಡಬಹುದು. "ಒಳ್ಳೇ ಇತ್ತೀಚಿನ ನವ್ಯ ಧಾಟಿಯ ಕತೆಯಂತಿದೆ ಕಣೆ. ಹೆಣ್ಣು ಇದ್ದಕ್ಕಿದ್ದಂತೆ ಏನೋ 'ಪ್ರೂವ್' ಮಾಡಲು ಹೊರಟಂತಿದೆ. ಇಲ್ಲಿಯವರೆಗೂ ಸೀತೆ ಸಾವಿತ್ರಿಯರ ಆದರ್ಶೀಕರಿಸಿ ವಿವರಿಸಿದ್ದು ಸಾಕೆನಿಸಿ ಒಮ್ಮೆಗೇ ರಮ್ಯ ಅನುಭವಗಳಿಗೆ ನೆಗೀತಾ ಇದ್ದಾಳೆ" ಎಂದಿದ್ದಳು.

"ನಾ ಅನುಭವಕ್ಕಾಗಿ ಇಷ್ಟೆಲ್ಲಾ ಮಾಡಿದ್ದಲ್ಲ ಸುಧಾ. ನನ್ನ ಭಾವನೆಗಳಿಗೆ ನಾ ಪ್ರಾಮಾಣಿಕವಾಗಿರೋಕೆ ಇಚ್ಛಿಸುತ್ತೇನೆ. ಹೆಣ್ಣಿನ ಮನಸ್ಸಿಗೂ ಗಂಡಿನಂತೆಯೇ ಚಂಚಲತೆ ಸಹಜ ಸ್ವಭಾವ. ಆದರೆ ಸಹಜತೆ ಮರೆಮಾಡಿ ಸೀತೆ ಸಾವಿತ್ರಿಯರ ಪಾತ್ರ ಅಭಿನಯಿಸುವುದು ಅನಿವಾರ್ಯವಾಗಿತ್ತು. ಇಂದು ಮೊದಲ ಬಾರಿಗೆ ತನ್ನನ್ನು ತಾನಿದ್ದಂತೆ ತೋರ್ಪಡಿಸ್ತಾ ಇದ್ದಾಳೆ". ಅದು ಸರಿ, ಚಂಚಲತೆ ಮನಸ್ಸಿನ ಸಹಜ ಗುಣ ಎಂದೇ ಒಪ್ಪಿಕೊಳ್ಳೋಣ. ಆದರೆ ಆ ಚಂಚಲತೆಯನ್ನೇ ಸಮರ್ಥಿಸಿ ಮನಸ್ಸು ಹರಿದಲ್ಲಿಗೆ ಬಿಟ್ಟು, ಕೈ ಕಟ್ಟಿಕೂರೋದೆ? ನಮಗೆ ಚಂಚಲ ಮನಸ್ಸಿನೊಡನೆ ಬುದ್ದಿಯನ್ನೂ ಕೊಟ್ಟಿದ್ದಾನೆ ನೋಡು..." (ನೇಮಿಚಂದ್ರ, ೨೦೦೧(i), ಪುಟ ೩೧೨).

ಭಾಷೆಗೂ ಶೈಲಿಗೂ ಸಂಬಂಧವಿದೆ. ಭಾಷೆಯಲ್ಲಿ ಮೈದಾಳುವ ಒಂದು ಕ್ರಿಯೆ ಶೈಲಿ. ಪಾಶ್ಚಾತ್ಯರಲ್ಲಿ ಬಳಕೆಯಲ್ಲಿರುವ ಸ್ಟೈಲ್ ಎಂಬ ಪರಿಕಲ್ಪನೆಗೆ ಸಂವಾದಿಯಾದುದು. ನೇಮಿಚಂದ್ರರ ಕಥನ ಶೈಲಿಯು ಯಾವಾಗಲೂ ಭಾವಕ್ಕೆ ಅನುಗುಣವಾಗಿ ಮಾರ್ಮಿಕವಾಗಿ ಹೃದ್ಯವಾಗಿ, ಗಂಭೀರವಾಗಿ, ಸೂಚ್ಯವಾಗಿ ಕಥೆಗಳನ್ನು ಹೇಳುವಂತಹದು. ಪ್ರಸಂಗಗಳಿಂದ ಕತೆಗಳಿಗೆ ನಾಟಕೀಯ ತಿರುವುಗಳನ್ನು ನೀಡುತ್ತಾರೆ. ಇವರ ಕತೆಗಳಲ್ಲಿ ಬರುವ ಪಾತ್ರಗಳು ನಗರದ ಮಧ್ಯಮ ವರ್ಗದ ಶಿಕ್ಷಿತ ಪಾತ್ರಗಳಾದ ಕಾರಣ ಗ್ರಾಮೀಣ ಜನರ ಮುಗ್ಧತೆಯ ಅಭಿವ್ಯಕ್ತಿಗೆ ಅವಕಾಶವಿಲ್ಲ. ಬದುಕಿನ ಸ್ಪಷ್ಟ ಚಿತ್ರಣವಿದೆ. ನಿರ್ಧಾರಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ಮಾನವೀಯತೆಯ ಮರುಕವಿದೆ. 'ನನ್ನದೆಯ ಕದನದಲಿ' ಕತೆಯಲ್ಲಿ ಗಂಡನು ಲೈಂಗಿಕ ಕ್ರಿಯೆಗೆ ತೊಡಗಿರುವುದನ್ನು ಮತ್ತು ಮಿಹಿಕಾ ಊರಿನಿಂದ ವಾಪಾಸಾದ ಸಮಯವನ್ನೂ ಸರಿಹೊಂದುವಂತೆ ಕತೆಯಲ್ಲಿ ಜೋಡಿಸಿದ್ದಾರೆ. ಘಟನೆಗಳ ಜೋಡನೆಯಿಂದ ಕತೆಗೆ ಸ್ಪಷ್ಟತೆ ಬರುತ್ತದೆ.

ಶೈಲಿ ಮತ್ತು ತಂತ್ರ ಎರಡೂ ಜೊತೆ ಜೊತೆಯಾಗಿ ಸಾಹಿತ್ಯದಲ್ಲಿ ಅಧ್ಯಯನಕ್ಕೆ ಒಳಗಾಗಿವೆ. ಹಾಗಾಗಿ ತಂತ್ರವು ಕತೆಗಳಲ್ಲಿ ಬದುಕಿನ ಅನುಭವದ ಸೂಕ್ಷ್ಮತೆಗಳನ್ನು ಅತ್ಯಂತ ಭಾವಪೂರ್ಣವಾಗಿ ವ್ಯಕ್ತಪಡಿಸುವ ಕಲೆ. ನೇಮಿಚಂದ್ರರು ದಾಂಪತ್ಯದ ಕತೆಗಳು, ಪ್ರೇಮದ ಕತೆಗಳು, ಸ್ತ್ರೀ ಸಮಸ್ಯೆಯನ್ನು ವಸ್ತುವನ್ನುಳ್ಳ ಕತೆಗಳು, ಪರಿಸ್ಥಿತಿಯಿಂದ ಬದಲಾವಣೆಗೆ ಒಳಗಾಗುವ ಸ್ತ್ರೀ ವಿಮೋಚನೆಯ ಕತೆಗಳನ್ನು ತಮ್ಮ ಕಥನತಂತ್ರಕ್ಕೆ ವಸ್ತುವನ್ನಾಗಿ ಬಳಸಿದ್ದಾರೆ. ಇವರ ಕತೆಗಳು ಸಾಮಾನ್ಯವಾಗಿ

ಘಟನಾವಳಿಯ ಮೂಲಕ ಅಥವಾ ಪ್ರಸಂಗಗಳ ಮೂಲಕ ಆರಂಭಗೊಳ್ಳುತ್ತವೆ. ಅಂತಿಮಗೊಳ್ಳುವುದು ನಿರ್ಧಾರದಲ್ಲಿ. ಕತೆಯ ಪಾತ್ರವೇ ಮಾತನಾಡುವ ಮೂಲಕ ಕತೆಗಳು ಆರಂಭಗೊಳ್ಳುತ್ತವೆ. ಲೇಖಕಿಯ ಕಥಾ ನಿರೂಪಣಾ ತಂತ್ರವನ್ನು ಕುರಿತಾಗಿ ಕೆ.ನರಸಿಂಹಮೂರ್ತಿಯವರು ಈ ರೀತಿ ಅಭಿಪ್ರಾಯಪಡುತ್ತಾರೆ. "ರಾಜಲಕ್ಷ್ಮಿ ಎನ್.ರಾವ್, ವೀಣಾ, ವೈದೇಹಿ ಮತ್ತು ನೇಮಿಚಂದ್ರ ಇವರು ನವ್ಯ ಚಳುವಳಿಯ ಬಹುಮುಖ್ಯ ಪ್ರತಿಪಾದಕರು. ಕನ್ನಡ ಸಾಹಿತ್ಯದಲ್ಲಿ ಮಹಿಳಾ ನವ್ಯ ಸಾಹಿತ್ಯಕ್ಕೆ ಸಂಬಂಧಿಸಿದಂತೆ ನೇಮಿಚಂದ್ರ ಅವರು ಮುಖ್ಯ ಲೇಖಕಿಯಾಗಿದ್ದಾರೆ. ಅವರ ಕತೆಗಳಲ್ಲಿ ಸಾಂಕೇತಿಕತೆಯಿಲ್ಲ, ಮನಃ ಶಾಸ್ತ್ರೀಯವಾದ ಅನ್ವೇಷಣೆಗಳಿದ್ದರೂ ಕಾವ್ಯಾತ್ಮಕವಾದ ಎಳೆಯನ್ನು ಉಳಿಸಿಕೊಂಡಿರುವುದು ಕಂಡುಬರುತ್ತದೆ. ಅವರ ಕಥಾನಿರೂಪಣೆಯು ನಾಟಕೀಯ ವೈವಿಧ್ಯತೆಯಿಂದ ಮತ್ತು ಮನಃಶಾಸ್ತ್ರೀಯ ಒಳವಿವರಗಳಿಂದ ಕೂಡಿರುವುದಾಗಿದೆ*" (ನೇಮಿಚಂದ್ರ, ೧೯೯೨, ಬೆನ್ನುಡಿ).

ಸಂಭಾಷಣೆಯೇ ಪ್ರಧಾನವಾದ ನೇಮಿಚಂದ್ರರ ಕಥನಶೈಲಿಯ ಕುರಿತಾಗಿ ವಿಮರ್ಶಕಿ ಬಿ.ಎನ್. ಸುಮಿತ್ರಾಬಾಯಿ ಈ ರೀತಿ ವ್ಯಾಖ್ಯಾನಿಸಿದ್ದಾರೆ. "ನೇರವಾದ ಮನಮುಟ್ಟುವ ಹಲವೆಡೆ ಮೊನಚು ವ್ಯಂಗ್ಯವುಳ್ಳ ಸಂಭಾಷಣೆ ಪ್ರಧಾನವಾದ ಕಥನಶೈಲಿಯಲ್ಲಿ ಲೇಖಕಿ ಪಾತ್ರಗಳ ಮಾನಸಿಕ ಒಳತೋಟಗಳನ್ನು ನಿರ್ವಹಿಸುವ ಕ್ರಮ ಕುತೂಹಲಕರ. ಆದರೆ ತರ್ಕಬದ್ಧವಾಗಿ ಘಟನೆಗಳನ್ನು, ಪಾತ್ರ ಸ್ವಭಾವಗಳನ್ನು ನಿರೀಕ್ಷಕ ಪರಿಣಾಮ ಸೃಷ್ಟಿಗಾಗಿಯೇ ಕಲ್ಪಿಸಿದಂತೆ ತೋರುವುದರಲ್ಲಿ ಒಂದು ಪರಿಮಿತಿಯಿದೆ" ಎಂದು ಹೇಳುತ್ತಾರೆ"(ಸಾಹಿತ್ಯ ವಿಮರ್ಶೆ, ೧೯೯೪, ಪುಟ ೧೧೪). ನೇಮಿಚಂದ್ರರು ಕತೆಯ ಪ್ರಾರಂಭ, ಕೊನೆ ಇಲ್ಲವೆ ಮಧ್ಯದಲ್ಲಿ ಕೆಲವೊಂದು ಉಕ್ತಿ, ಗಾದೆಗಳನ್ನು ಬಳಸುವಲ್ಲಿ ಸಫಲರಾಗಿದ್ದಾರೆ. ಸಂದರ್ಭಕ್ಕೆ ತಕ್ಕ ಹಾಗೆ ಸಮಕಾಲೀನ ಪರಿಸ್ಥಿತಿಯ ಘಟನೆಗಳನ್ನು ಕತೆಗೆ ಜೋಡಿಸಿಕೊಂಡಿದ್ದಾರೆ.

"ದೀಪದಡಿಯಲ್ಲಿಯೇ ಕತ್ತಲು"(ನೇಮಿಚಂದ್ರ, ೨೦೦೧(i), ಪುಟ ೬೬). ಇವರ ಬರವಣಿಗೆಯಲ್ಲಿ ಇಂಗ್ಲಿಷ್ ಭಾಷೆಯ ಬಳಕೆ ಅಲ್ಲಲ್ಲಿ ಕಾಣಸಿಗುತ್ತದೆ. You can't afford self respect my dear" (ಕಪ್ಪುಮೋಡ ಬೆಳ್ಳಿ ಅಂಚು, ಪು. ೧೯೮). "Well, she is not a virigin"(ನನ್ನದಲ್ಲದ ಬದುಕಿಗಾಗಿ, ಪುಟ ೩೫೨). "What she writes, she may not mean it"(ಕರಗುವ ಕನಸುಗಳು, ಪುಟ ೩೩೨). You are too smart"(ಕರಗುವ ಕನಸುಗಳು, ಪುಟ ೩೩೪).

---

* Rajalakshmi N. Rao, Veena, Vaidehi and Nemichandra are among the finest exponents of the *Navya* movement. The latest trend in women's writing in this genere in Kannada is to be found in Namichandra's short stories which return from symbolism to psychological exploration but retain and continue the poetic vein... The narration is vividly dramatic and psychologically penetrating.

[*Nemichandra, 1992, Blurb*]

ಸಂದರ್ಭಕ್ಕೆ ತಕ್ಕ ಹಾಗೆ ಪ್ರಸಿದ್ಧ ವಿದ್ವಾಂಸರ, ಕವಿಗಳ, ದಾರ್ಶನಿಕರ ಹೇಳಿಕೆಗಳನ್ನು ಬಳಸಿಕೊಳ್ಳುವಲ್ಲಿ ಇವರ ಕಥನ ತಂತ್ರ ಯಶಸ್ವಿಯಾಗಿದೆ. ಕರಗುವ ಕನಸುಗಳು ಕತೆಯಲ್ಲಿ ನಾಯಕ ಪ್ರೇಮದ ನಿಲುವನ್ನು ಹೇಳುವಾಗ ಜೆ.ಕೃಷ್ಣಮೂರ್ತಿಯವರ ಮಾತುಗಳನ್ನು ನೆನಪಿಸುತ್ತಾನೆ.

"ವ್ಯಕ್ತಿ ಸತ್ತಾಗ ಉಕ್ಕುವ ದುಃಖವು ಕೇವಲ ಸ್ವಾರ್ಥ, ಅಸಹಾಯಕತೆ, ಒಂಟಿತನ. ಸ್ವಯಂ ಮರುಕ ನಮ್ಮನ್ನು ಅಳಿಸುತ್ತದೆ. ಒರಗಿದ ಮರ ಉರುಳಿದಾಗ ಆಧಾರ ಕಳಕೊಂಡ ಆ ಅನುಭವ ಪ್ರೇಮವೆ?" (ನೇಮಿಚಂದ್ರ, ೨೦೦೧(i), ಪು. ೩೩೩) ಹಾಗೆ ಮುಂದುವರೆದು ಇದೇ ಕತೆಯಲ್ಲಿ ಶೆಲ್ಲಿಯ ಮಾತುಗಳನ್ನು ಉದಾಹರಿಸುತ್ತಾ 'Joy once lost is pain',

"ನಿನ್ನೆ ಸತ್ತಿಹುದೀಗ ನಾಳೆ ಹುಟ್ಟದೆಯಿಹುದು
ಇಂದು ಸೊಗವಿರಲವನು ನೆನೆದಳುವುದೇಕೆ...?

ಆಡುವವನೆಸೆವಂತೆ ಬೀಳ್ವ ಚಂಡಿಗದೇಕೆ?' ಎಂದು ಉಮರನ ಮಾತುಗಳನ್ನು 'ಕರಗುವ ಕನಸುಗಳು' ಕತೆಯ ಮಧುರ ಪ್ರೇಮವೆಂಬುದು ಭ್ರಮೆ. ಅದು ವಾಸ್ತವವಾದಿಗಲ್ಲವೆಂದು ಸುಮಿಯ ಪ್ರೇಮದ ಅಳಲನ್ನು ನಿರಾಕರಿಸುತ್ತಾನೆ. ಅಲ್ಬರ್ಟ್ ಕಾಮು, ಫ್ರಾಯಿಡ್, ಉಮರ್, ಸಾತ್ರೆ ಹೀಗೆ ಎಲ್ಲಾ ಸಿದ್ಧಾಂತಿಗಳ ಮಾತುಗಳನ್ನು ಕತೆಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಉದಾಹರಿಸಿಕೊಳ್ಳುತ್ತಾರೆ. ಉಮರನ ಮಾತುಗಳಲ್ಲಿ ಕತೆಯ ಕೊನೆಯು ಅಡಗಿದೆ. ಲೇಖಕಿಯು ತಾನು ಕತೆಯಲ್ಲಿ ನೀಡಬೇಕಾದ ಸಂದೇಶವನ್ನು ಈತನ ಮಾತುಗಳಿಂದ ನೀಡಿದ್ದಾರೆ. ನಿನ್ನೆ ಎಂಬುದು ಸತ್ತು ಹೋಗಿದೆ. ನಿನ್ನೆಯ ಕುರಿತು ಚಿಂತಿಸುವುದು ವ್ಯರ್ಥ. ಇನ್ನು ಹುಟ್ಟದೇ ಇರುವ ನಾಳೆಯ ಕುರಿತು ಯೋಚನೆ ಸಲ್ಲದು. ಇಂದು ಸೊಗಸಾಗಿದೆ ಅದನ್ನು ಸಂಪೂರ್ಣವಾಗಿ ಅನುಭವಿಸಬೇಕು. ಚೆಂಡು ಆಡಿಸುವವನು ಎಸೆದ ಕಡೆ ಹೋಗಬೇಕೇ ವಿನಃ ತನ್ನಿಚ್ಛೆಯಂತೆ ನಡೆಯುವುದು ಅಸಾಧ್ಯವಾಗಿದೆ. ಹಾಗೆಯೇ ಜೀವನವು ಆಡಿಸುವಾತನ ಕೈಚಳಕದಲಿ ಅಡಗಿದೆ ಎಂದು ಸಂದೇಶಿಸುತ್ತಾರೆ. ಕತೆಗೆ ಅರ್ಥಗರ್ಭಿತವಾದ ಅಂತ್ಯವನ್ನು ನೀಡುವುದಕ್ಕೆ ಇಂತಹ ಮಾತುಗಳು ಬಳಕೆಯಾಗುತ್ತವೆ.

"ಕನಸುಗಳಿಲ್ಲದ ಹಾದಿಯಲ್ಲಿ" ಕತೆಗೆ ಪುಷ್ಟಿಯೆಂಬಂತೆ ಮತ್ತದೇ ಉಮರನ ಮಾತುಗಳನ್ನು ನೆನೆದಿದ್ದಾರೆ "ಈ ಮಣ್ಣ ಹೊದ್ದಿಕೆಯೊಳ್ ಎನಿಬರೋ ಹುದುಗಿಹರು ನಮಗೆಡೆಯಬಿಟ್ಟು. ಅವರಂತೆ ನಾವಿಂದು ತೆರೆಯೌತಣವನುಂಡು, ಮರೆಯಾಗಿ ಬಳಕಿದನು, ಕಿರಿಯರ್ಗೆ ಬಿಡುವಂ" (ಅದೇ, ಪುಟ ೩೪೦) ಎಂದು ಲೇಖಕಿ ಕತೆಯ ಕೊನೆಯ ಮಾತುಗಳಾಗಿ ಬಳಸಿದ್ದಾರೆ. ಈ ಮಾತುಗಳಲ್ಲಿ ಇಡೀ ಕತೆಯ ಸಾರ ಅಡಗಿರುವುದನ್ನು ಗಮನಿಸಬಹುದು. ಕತೆಯ ಕೊನೆಯ ಸಾಲುಗಳಲ್ಲಿ ... ಆದರೆ ... ಆದರೆ... ತೆರೆಯೌತಣವ ಸವಿಯದೆಯೆ.. ಎಂಥ ವಿಪರ್ಯಾಸ!! (ಅದೇ, ಪುಟ) ಕಡು ಬಡತನದಲ್ಲಿ ಬೆಂದ ಕೂಲೆಗಾರನೊಬ್ಬನ ಕೊನೆಯ ದಿನದ, ಕೊನೆಯ ಕ್ಷಣಗಳನ್ನು ಕತೆಯಲ್ಲಿ ಅಣು ಅಣುವಾಗಿ ಚಿತ್ರಿಸಿದ್ದಾರೆ.

ಸಾಮಾನ್ಯವಾಗಿ ಲೋಕದಲ್ಲಿ ತಂದೆ-ತಾಯಿಯರು ಮಕ್ಕಳನ್ನು ಪ್ರೀತಿಯಿಂದ ಬೆಳೆಸಿರುತ್ತಾರೆ. ಮಕ್ಕಳು ಬಯಸಿದ ಪ್ರತಿಯೊಂದನ್ನು ನೀಡುತ್ತಾರೆ. ಆದರೆ ವಿವಾಹದ ವಿಷಯದಲ್ಲಿ ಕೂಡ ಮಕ್ಕಳು ತಾವು ಹೇಳಿದ ಹುಡುಗಿಯನ್ನೇ ಮದುವೆಯಾಗಬೇಕೆಂದು ಬಯಸುತ್ತಾರೆ. ಹೀಗೆ ತಂದೆ-ತಾಯಿಯರ ವಿರೋಧದ ಮಧ್ಯೆ ಪ್ರೇಮ ವಿವಾಹವಾದ 'ನೀವು ಕಾಣದ ನಾಳೆಗಳಲ್ಲಿ...' ಕತೆಯ ನಾಯಕ ರವಿ ವ್ಯಕ್ತಿ-ವ್ಯಕ್ತಿಯ ಸಂಬಂಧ ಸೋತಿದ್ದು. ಪ್ರೇಮ ವಿವಾಹವೆಂಬ ವಿಚಾರವಲ್ಲ ಎಂದು ಹೇಳುತ್ತಾ ಖಲೀಲ್ ಗಿಬ್ರಾನನ ಮಾತುಗಳನ್ನು ನೆನೆಯುತ್ತಾನೆ.

"ನಿಮ್ಮ ಪ್ರೀತಿ ಕೊಡಬಲ್ಲಿರಿ
ನಿಮ್ಮ ಚಿಂತನೆಗಳನ್ನಲ್ಲ
ನಮಗೆ ನಮ್ಮದೇ ಚಿಂತನೆಗಳುಂಟು
ನಿಮ್ಮಂತೆ ನಾವಾಗಲು ಅರಸಬೇಡಿ
ಬದುಕು ಹಿಮ್ಮುಖವಾಗಿ ಹರಿಯುವುದಿಲ್ಲ
ನೀವು ಕಾಣದ ನಾಳೆಗಳಲ್ಲಿ
ನಮ್ಮ ನೆಲೆ, ನಮ್ಮ ಬೆಳೆ!"

ಹೀಗೆ ಬದುಕು ಮುಮ್ಮುಖ ಚಲನೆ ಹೊಂದಿದೆ. ತಮ್ಮ ಪೀಳಿಗೆಯ ಮುಂದುವರಿಕೆಯಾದ ಮಕ್ಕಳ ಮೇಲೆ ತಮ್ಮ ಹಿತಾಸಕ್ತಿಗಳನ್ನು ಹೇರಬಾರದು. ಅವರಿಗೂ ಸ್ವತಂತ್ರ ಚಿಂತನೆ, ಅಲೋಚನೆಗಳಿವೆ ಎಂಬುದನ್ನು ಹಿರಿಯರು ಮನಗಾಣಬೇಕು ಎಂಬ ಆಶಯವನ್ನು ಈ ಸಾಲುಗಳು ಧ್ವನಿಸುತ್ತವೆ.

'ಬದುಕು ಕಾಯುವುದಿಲ್ಲ' ಕತೆಯಲ್ಲಿ ಖ್ಯಾತ ಕವಿ ಕುವೆಂಪು ಕವನದ ಸಾಲುಗಳನ್ನು ಸಂದರ್ಭೋಚಿತವಾಗಿ ಲೇಖಕಿ ಬಳಸಿಕೊಂಡಿದ್ದಾರೆ. 'ವಿಶೂ' ಕುವೆಂಪು ಕವನವೊಂದಿದೆ. ಸ್ವರ್ಗದ ಬಾಗಿಲಲ್ಲಿ ಅವರನ್ನು ತಡೆದು 'ನೀನಾರು?' ಎಂದು ಕೇಳಿದರಂತೆ. ತಾವಂದುಕೊಂಡದ್ದನ್ನೆಲ್ಲಾ ಹೆಮ್ಮೆಯಿಂದ ಹೇಳಿಕೊಂಡರೂ ಮುಚ್ಚಿದ ಬಾಗಿಲು ತೆರೆಯಲಿಲ್ಲ. ಕುವೆಂಪು ತಮ್ಮ ಬಿರುದುಬಾವಲಿಗಳನ್ನು ಬದಿಗಿಟ್ಟು ಏನು ಹೇಳಿದರು ಗೊತ್ತೆ- 'ನಾ ಹೇಮಿ ಗಂಡ'. ವಿಶೂ ಸ್ವರ್ಗದ ಬಾಗಿಲಿನಲ್ಲಿ 'ನಿನ್ನ ಗುರುತೇನು?' (ನೇಮಿಚಂದ್ರ, ೨೦೦೧(i), ಪು. ೫೫) ಹೀಗೆ ಹುಟ್ಟಿದ ಪ್ರತಿಯೊಬ್ಬ ವ್ಯಕ್ತಿಗೂ ಕುಟುಂಬದೊಡನೆ ಒಂದು ಅಸ್ಮಿತೆ ಇದ್ದೇ ಇರುತ್ತದೆ. ಹೆಣ್ಣು-ಗಂಡಿನ ಸಂಬಂಧದ ಅಸ್ಮಿತೆಯು ಅವರ ಬಾಳಿನ ಅಸ್ತಿತ್ವಕ್ಕೆ ಬೇಕಾಗುತ್ತದೆ. ಯಾವ ಸಂಬಂಧದ ಹಂಗಿಲ್ಲದೆ ಬದುಕುವುದು ಯಾಂತ್ರಿಕವಾಗುತ್ತದೆ. ನೇಮಿಚಂದ್ರ ಪುನರಾವಲೋಕನ ಮಾದರಿಯನ್ನು ಕಥನತಂತ್ರದಲ್ಲಿ ಗುರುತಿಸಬಹುದು.

'ಎಲ್ಲಿ ಸೋತೆವು ಶಶಿ, ಎಲ್ಲಿ ತಪ್ಪಿದೆವು...'

ಎಲ್ಲಿ ಎಂದು ನನಗೆ ತಿಳಿದಿರಲಿಲ್ಲ. 'ತಪ್ಪಿದೆವೇ?' ಎಂಬ ಜಿಜ್ಞಾಸೆ ಇನ್ನೂ ಅಳಿದಿರಲಿಲ್ಲ. ಇದು ಅನಿರೀಕ್ಷಿತವಿತ್ತು. ಬೆಳೆವ ಹುಡುಗನ ಹವ್ಯಾಸ, ಗೆಳೆತನ ಎಲ್ಲವನ್ನೂ ಗಮನಿಸುತ್ತಲೇ ಬಂದಿದ್ದೆವು. ಎಲ್ಲ ಸರಿ ಇದ್ದ ಹೊತ್ತಿನಲ್ಲಿ ತಟ್ಟನೆ ಹೊತ್ತಿ ಹೊಗೆಯೆದ್ದ ಉರಿ. "ನನಗೆ ಗೊತ್ತಿಲ್ಲ ನಾವು ಎಲ್ಲಿ ತಪ್ಪಿದೆವು ಅಂತಾ..." ನೀ ಮತ್ತೆ ಮತ್ತೆ ಕೇಳಿದ್ದ(ನೇಮಿಚಂದ್ರ ೨೦೦೧(i), ಪುಟ ೬೭).

ಕತೆಗಳಲ್ಲಿ ಉಪಕತೆಗಳನ್ನು ಬಳಸುವ ಮಾದರಿಯನ್ನು, ಲೇಖಕಿಯ ಕಥನ ತಂತ್ರಗಾರಿಕೆಯನ್ನು ಗಮನಿಸಬಹುದು. ಕತೆಗೆ ಉಪಕತೆಗಳನ್ನು ವಡ್ಡಾರಾಧನೆಯಲ್ಲಿ ಗುರುತಿಸುತ್ತೇವೆ. ಉಪಕತೆಗಳು ಮೂಲಕತೆಗೆ ಪೂರಕವಾಗಿರುತ್ತವೆ. 'ನನ್ನೆದೆಯ ಕದನದಲಿ' ಎಂಬ ಕತೆಗೆ ಪೂರಕವಾಗಿ ಉಪಕತೆಯೊಂದನ್ನು ಲೇಖಕಿ ಹೇಳುತ್ತಾರೆ. "ನನ್ನಿಂದಲೇ ನಾ ಬಚ್ಚಿಟ್ಟ, ಬಚ್ಚಿಡ ಬಯಸಿದ ಕತೆ. ಈ ಆರಡಿ ಎತ್ತರ ಮೂರಡಿ ಅಗಲದ ಅಜಾನುಬಾಹು ಜೀವನ್ ಶೇರ್‌ಜಂಗನ ಕತೆ. ನನ್ನೊಳಗಿನ ಶೇರ್‌ಜಂಗ್ ಸತ್ತ ಆ ದಿನದ ಕತೆ"(ನೇಮಿಚಂದ್ರ, ೨೦೦೧(i), ಪುಟ ೬೭). ಪಾತ್ರದ ಮುಖಾಂತರ ಉಪಕತೆಯೊಂದನ್ನು ಲೇಖಕಿ ಹೇಳಬಯಸುತ್ತಾರೆ.

ನೇಮಿಚಂದ್ರರ ಕತೆಯ ನಿರೂಪಣೆಗಳಲ್ಲಿ ಚಲನಶೀಲತೆ ಇದೆ. ನೇರ ಓದುಗರನ್ನು ಕುರಿತು ನಿರೂಪಿಸುವ ಶೈಲಿಯನ್ನು ಇವರ ಕತೆಯಲ್ಲಿ ಗುರುತಿಸಬಹುದು. ಉದಾಹರಣೆಗೆ ತ್ರಿಕೋನದಾಚೆಗೆ ಕತೆಯು ಪ್ರಾರಂಭವಾಗುವುದೇ ಹೀಗೆ "ಇದು ಒಂದು ತ್ರಿಕೋನದ ಕತೆ. ಸರ್ವೇಸಾಮಾನ್ಯವಾದ ಗಂಡ-ಹೆಂಡತಿ-ಮತ್ತೊಬ್ಬ ಹೆಣ್ಣು ನಿರ್ಮಿಸುವ ಒಂದು ತ್ರಿಕೋನದ ಕತೆ... ಈ ಕತೆಯ ನಾಯಕಿ, ಖಳನಾಯಕಿ ಎರಡೂ ಪಾತ್ರಗಳೂ ನನ್ನವೇ"(ನೇಮಿಚಂದ್ರ; ೨೦೦೧(i); ಪುಟ ೩೦೨). ಹೀಗೆ ಲೇಖಕಿ ಹಲವು ತಂತ್ರಗಳನ್ನು ಅಳವಡಿಸಿಕೊಂಡು ಕತೆಯ ಶೈಲಿಯನ್ನು ನಿರೂಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

ನೇಮಿಚಂದ್ರರು ಕನ್ನಡ ಸಾಹಿತ್ಯದ ಪ್ರಮುಖ ಲೇಖಕಿಯಾಗಲು ಕಾರಣ, ಅವರು ತಮ್ಮ ಕತೆಯ ನಿರೂಪಣೆಗೆ ಬಳಸುವ ಹಲವು ಶೈಲಿಗಳು. ಅಂತಹ ಶೈಲಿಯಲ್ಲಿ ಪತ್ರ ಮಾದರಿಯ ನಿರೂಪಣೆಯು ಒಂದು. "ಕರಗುವ ಕನಸುಗಳು", "ನೀನಿರುವೆ ನಮ್ಮೊಡನೆ" ಕತೆಗಳು ಈ ಮಾದರಿಯಿಂದ ಕೂಡಿವೆ. ಪತ್ರದಲ್ಲಿ ಕತೆಯ ಎಲ್ಲಾ ವೈಶಿಷ್ಟ್ಯಗಳನ್ನು, ಲಕ್ಷಣಗಳನ್ನು ಅಳವಡಿಸಿದ್ದಾರೆ.

ಅಧ್ಯಾಯ-೪

ನೇಮಿಚಂದ್ರರ ಕಥಾಸಾಹಿತ್ಯ ಮತ್ತು ಆಧುನಿಕ ಮಹಿಳಾ ಪ್ರಜ್ಞೆ

ಇಂದು ಮಹಿಳಾ ಅನುಭವ ಮತ್ತು ಮಹಿಳಾ ಸಾಹಿತ್ಯದ ಅನನ್ಯತೆಗಳು ಬಹಳ ಚರ್ಚಿತವಾಗಿವೆ. ಹೀಗೆ ಸಾಹಿತ್ಯದಲ್ಲಿ ಅಭಿವ್ಯಕ್ತವಾಗುವ ಮಹಿಳಾಪರ ಪ್ರಜ್ಞೆ ಅನುಭವಗಳನ್ನು ಸ್ತ್ರೀ ಸಂವೇದನೆಯೆಂದು ಕರೆಯಬಹುದಾಗಿದೆ. ಇಂತಹ ಸಂವೇದನೆಗಳು ಮಹಿಳೆಯರ ಹಲವಾರು ಸಾಹಿತ್ಯದ ಪ್ರಕಾರಗಳಲ್ಲಿ ಕಾಣಿಸಿಕೊಂಡಿವೆ. ಅದರಲ್ಲೂ ಅವರ ಸಣ್ಣ ಕತೆಗಳಲ್ಲಿ ಹುಲುಸಾಗಿ ಅಭಿವ್ಯಕ್ತಗೊಂಡಿವೆ. ಹನ್ನೆರಡನೆಯ ಶತಮಾನದ ಸಾಮಾಜಿಕ ಕ್ರಾಂತಿಯಲ್ಲಿ ಅಕ್ಕಮಹಾದೇವಿಯು ವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ತನ್ನ ವಚನಗಳ ಮೂಲಕ ಪ್ರಭುತ್ವದ ವಿರುದ್ಧ ಹೋರಾಡಿದ ದಿಟ್ಟ ಮಹಿಳೆ. ಆಕೆ ಸಾಂಸ್ಥಿಕ ವ್ಯವಸ್ಥೆಯ ವಿರುದ್ಧ ತನ್ನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೋಂದಾಯಿಸಿದ ವಚನಗಾರ್ತಿ. ಅವಳ ನಂತರ ಅನೇಕ ಕೆಳವರ್ಗದ ವಚನಗಾರ್ತಿಯರು ತಮ್ಮ ಅನುಭವಗಳನ್ನು ವಚನಗಳ ಮೂಲಕ ಹೊರಗೆಡವಿದ್ದಾರೆ. ತರುವಾಯ ತನ್ನ ಅಭಿವ್ಯಕ್ತಿಯನ್ನು ಸಾಂಸ್ಥಿಕ ವ್ಯವಸ್ಥೆಯ ಪರವಾಗಿ ಪ್ರಕಟಿಸಿದ್ದನ್ನು ಸಂಚಿ ಹೊನ್ನಮ್ಮಳಲ್ಲಿ ಕಾಣಬಹುದು. ಹೊನ್ನಮ್ಮ ಪುರುಷ ನಿರ್ಮಿಸಿದ ಮಾದರಿಯಲ್ಲಿಯೇ ತಾರತಮ್ಯ ಅಸಮಾನತೆಯ ಬಗ್ಗೆ ಕ್ಷೀಣವಾಗಿಯಾದರೂ ದನಿ ಎತ್ತಿರುವುದನ್ನು ದಾಖಲಿಸಬಹುದು.

> ಪೆಣ್ಣು ಪೆತ್ತವರ ಬಳಗ ಬೆಳೆವುದು ಬೇಗ
> ಪೆಣ್ಣ ಪೆತ್ತವರು ಪೆರ್ಚುವರು
> ಪೆಣ್ಣು ಪೆತ್ತುದರಿಂದ ಪೆಸರೆನಿಸಿತು ಮಿಗೆ
> [illegible]ಣ್ಣವೇರಿತು ಪಾಲ್ಗಡಲು
> ಪೆಣ್ಣಲ್ಲವೆ ತಮ್ಮನ್ನೆಲ್ಲ ಪಡೆದತಾಯಿ
> ಪೆಣ್ಣಲ್ಲವೆ ಪೊರೆದವಳು
> ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು

ಕಣ್ಣು ಕಾಣದ ಗಾವಿಲರು ಎಂದು ಹೆಣ್ಣಿನ ಬಗ್ಗೆ ಸಮಾಜ ತೋರುವ ಅನಾದರವನ್ನು ವಿರೋಧಿಸಿದ್ದಾಳೆ. ಅನಂತರ ಸಾಹಿತ್ಯ ಲೋಕದಲ್ಲಿ ಮಹಿಳಾ ಲೇಖಕಿಯರ ಪ್ರವೇಶ ನವೋದಯ ಕಾಲದಿಂದ ಹೆಚ್ಚಾಗುತ್ತಾ ಹೋಯಿತು.

ನವೋದಯದ ತಿರುಮಲಾಂಬಾ, ಸರಸ್ವತಿಬಾಯಿ ರಾಜವಾಡೆ, ಶ್ಯಾಮಾಲಾದೇವಿ ಬೆಳಗಾಂವಕರ ಲೇಖಕಿಯರಿಂದ ಹಿಡಿದು ಕೊಡಗಿನ ಗೌರಮ್ಮ, ತ್ರಿವೇಣಿ ಮುಂತಾದವರನ್ನು ದಾಟಿಕೊಂಡು ಇಂದಿನ ವೀಣಾಶಾಂತೇಶ್ವರ, ವೈದೇಹಿ, ನೇಮಿಚಂದ್ರ ಮುಂತಾದ ಕತೆಗಾರ್ತಿಯರವರೆಗೂ ಈ ಸಣ್ಣಕತೆಯ ಪ್ರಕಾರ ಬೆಳೆದು ಬಂದಿದೆ. ನವೋದಯದ ಆರಂಭಿಕ ಕಾಲಘಟ್ಟದಲ್ಲಿ ಮಹಿಳಾ ಸಮಸ್ಯೆಯ ಕುರಿತಾಗಿ ಪುರುಷರು ಬರೆದ ಸಾಹಿತ್ಯ ಮೂಡಿ ಬಂದಿತು. ಉದಾಹರಣೆಗೆ. ರಾವ್‌ಬಹದ್ದೂರ್‌ರ "ಇಂದಿರಾಬಾಯಿ" ಎಂ.ಎಸ್.ಪುಟ್ಟಣ್ಣನವರ "ಮಾಡಿದ್ದುಣ್ಣೋ ಮಹಾರಾಯ", "ವಾಗ್ದೇವಿ", ಕೆರೂರರ "ಇಂದಿರೆ" ಹೀಗೆ ಸುಮಾರು ಕಾದಂಬರಿಗಳು 'ಸ್ತ್ರೀ' ಕೇಂದ್ರ ವ್ಯಕ್ತಿಯಾಗಿ ಚಿತ್ರಿತಗೊಂಡಿವೆ. ಅಲ್ಲಿಂದ ಪ್ರಾರಂಭವಾದ ಸ್ತ್ರೀ ಕೇಂದ್ರಿತ ಅಧ್ಯಯನವು ಇಂದು ಸ್ತ್ರೀ ಸಂವೇದನೆ ಹಾಗೂ ಮಹಿಳಾ ಪ್ರಜ್ಞೆ ಎಂಬ ಹಂತಕ್ಕೆ ಬಂದು ತಲುಪಿದೆ.

ನಮ್ಮ ಸಮಾಜದಲ್ಲಿ ಮೊದಲು ಮಾತೃಪ್ರಧಾನ ಸಂಸ್ಥೆಯೇ ಪ್ರಚಲಿತದಲ್ಲಿತ್ತು. ಆಮೇಲೆ ಅದು ಚರಿತ್ರೆಯ ಕಾಲಘಟ್ಟದಲ್ಲಿ ಪಿತೃಪ್ರಧಾನ ಸಂಸ್ಥೆಯಾಗಿ ರೂಪುಗೊಂಡಿತು. ಈ ಪಿತೃಪ್ರಧಾನ ವ್ಯವಸ್ಥೆ ಬಂದಮೇಲೆ ಮಾತೃಪ್ರಧಾನ ವ್ಯವಸ್ಥೆ ಮಾಯವಾಯಿತು. ಆದರೂ ಇಂದಿಗೂ ಅಲ್ಲಲ್ಲಿ ಈ ಮಾತೃಪ್ರಧಾನ ವ್ಯವಸ್ಥೆಯ ಪಳೆಯುಳಿಕೆಗಳು ನಿದರ್ಶನವೆಂಬಂತೆ ಕಂಡುಬರುತ್ತವೆ. ಮಹಿಳೆಯರ ಸಾಮಾಜಿಕ ಅಂತಸ್ತು, ಸ್ಥಾನಮಾನ, ನಡವಳಿಕೆಗಳ ಬಗ್ಗೆ ಕಟ್ಟು ಕಟ್ಟಳೆಗಳನ್ನು ರೂಪಿಸುವ ಹಂತದಲ್ಲಿ ಪುರುಷರೇ ಇದ್ದಾರೆ ಈ ದಬ್ಬಾಳಿಕೆಯನ್ನು ಸಹಿಸದ ಮಹಿಳೆಯರು ಈ ಶತಮಾನದಲ್ಲಿ ಬಂಡೇಳುವುದನ್ನು ಕಾಣಬಹುದು. ಹೀಗಾಗಿ ಸಾಮಾಜಿಕ ಪ್ರಜ್ಞೆಯನ್ನು ಪ್ರಕಟಿಸುವ ಎಚ್ಚೆತ್ತ ಮನೋಭಾವದ ಮಹಿಳಾ ಪಾತ್ರಗಳು ಸಾಹಿತ್ಯ ಕೃತಿಗಳಲ್ಲಿಯೂ ಕಾಣಿಸಿಕೊಂಡಿವೆ.

ನವೋದಯ ಕಾಲಘಟ್ಟದಿಂದ ತೊಡಗಿ ಸಮಕಾಲೀನ ಸಂದರ್ಭದವರೆಗಿನ ಅನೇಕ ಕತೆಗಳಲ್ಲಿ ಹೆಣ್ಣು ತನಗೆ ಗಂಡಸಿನಿಂದ ಆಗುತ್ತಿರುವ ಅನ್ಯಾಯ, ಶೋಷಣೆಯ ವಿರುದ್ಧ ಸೌಮ್ಯವಾಗಿ, ಅನೇಕ ಸಲ ತೀವ್ರವಾಗಿ ಬಂಡಾಯ ಏಳುವುದನ್ನು ಕಾಣಬಹುದು. ಅವಳಿಗೆ ಶೋಷಣೆಯ ಬಗ್ಗೆ ಅರಿವೂ ಇದೆ, ಆಕ್ರೋಶವೂ ಇದೆ. ಪುರುಷ ಪ್ರಧಾನವಾದ ಸಾಂಸ್ಥಿಕ ಮೌಲ್ಯಗಳನ್ನು ನಿರಾಕರಿಸುವ ಮಟ್ಟಿಗೆ ಈ ಸಿಟ್ಟು ತೀಕ್ಷ್ಣವಾಗಿದೆ. ಆತ್ಮವಿಶ್ವಾಸದ ಮತ್ತು ಆತ್ಮವಿಮರ್ಶೆಯ ದನಿಯಲ್ಲಿ ಇವರು ಮಾತನಾಡುತ್ತಿರುವುದು ಸ್ತ್ರೀವಾದಿ ಚಳುವಳಿಯ ಸ್ತ್ರೀ ಸಂವೇದನೆಯ ಚಲನಶೀಲತೆಗೆ ಸಾಕ್ಷಿಯಾಗಿದೆ.

ಹೀಗಾಗಿ ಮಹಿಳೆಯರ ಕತೆಗಳಲ್ಲಿ ಸಾಮಾಜಿಕ ಪ್ರಜ್ಞೆಯನ್ನು ದಟ್ಟವಾಗಿ ಪ್ರಕಟಿಸುವ ಸ್ತ್ರೀಪಾತ್ರಗಳಿವೆ. ಸಾಮಾಜಿಕ ಅನ್ಯಾಯದ ವಿರುದ್ಧ ಬಂಡೇಳುವ ಸ್ತ್ರೀಪಾತ್ರಗಳಿವೆ. ಪ್ರೇಮ, ಮದುವೆ, ಕುಟುಂಬ ಇವೇ ಕೇಂದ್ರವಾಗಿರುವ ಕತೆಗಳಿವೆ. ಹೆಣ್ಣು-ಗಂಡಿನ ಸಂಬಂಧಗಳು, ಹೊಯ್ದಾಟಗಳು, ಭಾವನೆಗಳು ಹಾಗೂ ಎದುರಿಸಬೇಕಾದ ಸಮಸ್ಯೆಗಳಿವೆ. ಹೆಣ್ಣಿನ ಆತ್ಮವಿಶ್ಲೇಷಣೆಯ ಜೊತೆಗೆ ಸ್ವಂತ ಅಸ್ತಿತ್ವದ ಪ್ರಶ್ನೆಯ ಕತೆಗಳಿವೆ. ಹಿರಿಯ ತಲೆಮಾರಿನ ಕತೆಗಾರ್ತಿ ಸರಸ್ವತಿಬಾಯಿ ರಾಜವಾಡೆಯವರ 'ಅವಳ ಉದ್ಧಾರ' ಕತೆಯಲ್ಲಿ ಹೆಣ್ಣಿನ ಬಾಳಿನ ಘೋರ ಶೋಷಣೆಯ ವಿವಿಧ ಮುಖಗಳನ್ನು ಚಿತ್ರಿಸುವುದನ್ನು ಕಾಣಬಹುದು. ಕೊಡಗಿನ ಗೌರಮ್ಮನವರ 'ವಾಣಿಯ ಸಮಸ್ಯೆ', ತ್ರಿವೇಣಿಯವರ 'ಕೊನೆಯ ನಿರ್ಧಾರ', ಅನುಪಮಾ ನಿರಂಜನರ 'ಒಂದು ಘಟನೆ ಮತ್ತು ಅನಂತರ' ಕತೆಗಳು ಸ್ತ್ರೀಸಂವೇದನೆಯ ವಿವಿಧ ಸಮಸ್ಯೆಗಳನ್ನು ಚಿತ್ರಿಸುತ್ತವೆ. ಹೀಗೆ ಸ್ತ್ರೀ ಸಂವೇದನೆಯನ್ನು ತಮ್ಮ ಕತೆಗಳಲ್ಲಿ ಸಾರ್ಥಕ ರೀತಿಯಲ್ಲಿ ನಿರ್ವಹಿಸುತ್ತಿರುವವರ ಸಾಲಿನಲ್ಲಿ ನೇಮಿಚಂದ್ರರು ಸಹ ಒಬ್ಬರಾಗಿದ್ದಾರೆ. ಮಹಿಳಾ ಪ್ರಜ್ಞೆ ಎನ್ನುವಂತಹದು ಇಂದಿನದಲ್ಲ. ವಸಾಹತುಕಾಲದಿಂದಲೂ ಅದು ಮೊಳೆತಿದೆ. ಸ್ತ್ರೀ ತನ್ನ ಅಸ್ತಿತ್ವದ ಸ್ಥಾಪನೆಗಾಗಿ ಕಾಲಾಂತರದಿಂದಲೂ ಹೋರಾಟ ನಡೆಸುತ್ತಾ ಬಂದಿದ್ದಾಳೆ. ಮಹಿಳಾ ಸಂವೇದನೆ, ಅಭಿವ್ಯಕ್ತಿ ಪ್ರಜ್ಞೆ ಇತ್ಯಾದಿ ವಿಷಯಗಳು ಚರ್ಚೆಗೆ ಒಳಗಾಗಿವೆ. ನವೋದಯದ ಕಾಲದಿಂದಲೂ ಈ ಮಹಿಳಾ ಪ್ರಜ್ಞೆಯೆಂಬುದು ಬೇರೆ ಬೇರೆ ನೆಲೆಯಲ್ಲಿ ನಮ್ಮ ಸಾಹಿತ್ಯ ಕೃತಿಗಳಲ್ಲಿ ಅಭಿವ್ಯಕ್ತಗೊಳ್ಳುತ್ತಿತ್ತು. ಆದರೆ ಇತ್ತೀಚಿನ ಆಧುನಿಕ ಕಾಲದಲ್ಲಿ ಸ್ತ್ರೀವಾದದ ಪ್ರಭಾವದಿಂದಾಗಿ ಮಹಿಳೆಯರಲ್ಲಿ ತಮ್ಮ ಅಸ್ತಿತ್ವದ ಪ್ರಜ್ಞೆ ಇನ್ನಷ್ಟು ಜಾಗೃತವಾಗತೊಡಗಿತು. ಅದು ಸಾಹಿತ್ಯ ಕೃತಿಗಳಲ್ಲೂ ಅಭಿವ್ಯಕ್ತಿಯನ್ನು ಪಡೆಯಿತು. ಹಾಗಾಗಿ ಆಧುನಿಕ ಸಂದರ್ಭದ ಸಾಹಿತ್ಯ ಕೃತಿಗಳಲ್ಲಿ ಅದರಲ್ಲೂ ಕಥನ ಸಾಹಿತ್ಯದಲ್ಲಿ ಇಂಥ ಮಹಿಳಾ ಪ್ರಜ್ಞೆಗಳು ಹೆಚ್ಚು ಪರಿಣಾಮಕಾರಿಯಾಗಿ ಮೂಡಿ ಬರತೊಡಗಿದವು. ಹೀಗೆ ಸಮಕಾಲೀನ ಸಂದರ್ಭದ ಸಾಹಿತ್ಯ ಕೃತಿಗಳಲ್ಲಿ ಅಭಿವ್ಯಕ್ತವಾಗುವ ಆಧುನಿಕವೆನ್ನಬಹುದಾದ ಸ್ತ್ರೀ ಪರ ಸಂವೇದನೆಗಳನ್ನು 'ಆಧುನಿಕ ಮಹಿಳಾ ಪ್ರಜ್ಞೆ ' ಎಂದು ಪರಿಗಣಿಸಬಹುದಾಗಿದೆ. ಇದರಲ್ಲಿ ಸ್ತ್ರೀ ಸ್ವಾತಂತ್ರ್ಯ ಮತ್ತು ಸಮಾನತೆಯ ಬಗೆಗಿನ ಆಶಯಗಳು, ಸಂಪ್ರದಾಯ ಮತ್ತು ಆಧುನಿಕತೆಯ ನಡುವಿನ ಸಂಘರ್ಷಗಳು, ಶಿಕ್ಷಣ ಮತ್ತು ಉದ್ಯೋಗದ ಬಗೆಗಿನ ತುಡಿತಗಳು, ಉದ್ಯೋಗಸ್ಥ ಮಹಿಳೆಯ ಒಳತೋಟಿಗಳು, ಮಹಿಳೆಯ ಕೌಟುಂಬಿಕ ಸಮಸ್ಯೆಗಳು, ಪುರುಷ ಪ್ರಧಾನ ವ್ಯವಸ್ಥೆಯ ಬಗೆಗಿನ ಆಕ್ರೋಶ, ಸ್ತ್ರೀ ಶೋಷಣೆ ವಿರುದ್ಧದ ಧ್ವನಿ ಇತ್ಯಾದಿ ಅಂಶಗಳು ಒಳಗೊಳ್ಳುತ್ತವೆ.

ಆಧುನಿಕ ಕನ್ನಡ ಸಾಹಿತ್ಯಕ್ಕೆ ಪ್ರಬುದ್ಧವೆನ್ನಬಹುದಾದ ಮಹಿಳಾಪ್ರಜ್ಞೆ ಪ್ರವೇಶಗೊಂಡಿದ್ದೇ ಎಪ್ಪತ್ತರ ದಶಕದ ಕಾವ್ಯದಿಂದ. ಕತೆಗಳಲ್ಲಿ ವೀಣಾರಿಂದ ವೈದೇಹಿ, ಗೀತಾ ನಾಗಭೂಷಣ, ಲಲಿತಾ ನಾಯಕ್, ಸಾರಾ ಅಬೂಬಕರ್, ನೇಮಿಚಂದ್ರ ಇವರ ಕತೆಗಳಲ್ಲಿ ಗುರುತಿಸಬಹುದು.

ಮಹಿಳಾಪ್ರಜ್ಞೆಯು ಕಾಲಾಂತರದಲ್ಲಿ ಬೇರೆ ಬೇರೆ ಸಂಗತಿಗಳಲ್ಲಿ ಅಭಿವ್ಯಕ್ತಿಗೊಂಡಿದೆ. ನವೋದಯದ ಕಾಲದ ಬರಹಗಾರ್ತಿಯರಿಗೆ ಇದ್ದ ಸಮಸ್ಯೆಗಳ ಸ್ವರೂಪ ಬೇರೆ. ತಿರುಮಲಾಂಬಾ, ಕೊಡಗಿನ ಗೌರಮ್ಮ ಮೊದಲಾದವರ ಬರಹವನ್ನು ಈ ಸಾಲಿಗೆ ಸೇರಿಸಬಹುದು. ಇವರ ಬರಹಗಳಲ್ಲಿ ಚಾರಿತ್ರಿಕ ಒತ್ತಡ, ಸಾಮಾಜಿಕ ಬದಲಾವಣೆಯ ಸ್ವರೂಪವನ್ನು ಗುರುತಿಸಬಹುದು.

"ಪ್ರಗತಿಶೀಲ ಮನೋಭಾವದ ಅನುಪಮ ಅವರ ಕತೆಗಳಲ್ಲಿ ಹೆಣ್ಣಿನ ಸಮಸ್ಯೆಗಳ ತಳಹದಿಯಲ್ಲಿರುವ ಸಾಮಾಜಿಕ, ಆರ್ಥಿಕ, ರಾಜಕೀಯ ದೃಷ್ಟಿಕೋನದ ವಿವೇಚನೆಯಿದೆ... ಹಾಗೂ ನವ್ಯಮೂಲದ ವೀಣಾರಲ್ಲಿ ವ್ಯಕ್ತಿಗತ ಸಮಸ್ಯೆಗಳನ್ನು "ಆಧುನಿಕ ಸಮಸ್ಯೆಗಳನ್ನು ಸ್ತ್ರೀಮೂಲದಿಂದ ಹುಡುಕಲು ಪ್ರಯತ್ನಿಸುತ್ತಾರೆ" ಎಂದು ಕೆ.ಕೇಶವಶರ್ಮ ಅವರು ಅಭಿಪ್ರಾಯ ಪಡುತ್ತಾರೆ(ಸಾಹಿತ್ಯ ವಿಮರ್ಶೆ, ೧೯೯೨, ಪುಟ ೯೫).

ದಲಿತ ಬಂಡಾಯ ಸಂದರ್ಭದ ಮಹಿಳಾ ಸಾಹಿತ್ಯ ಪುರುಷಪ್ರಧಾನ ವ್ಯವಸ್ಥೆಯೊಂದಿಗೆ ರಾಜಿಯಾಗದೆ ಮೌಲ್ಯಗಳ ಸಂಪೂರ್ಣ ಬದಲಾವಣೆ ಬಯಸುತ್ತದೆ ಎಂದು ವಿಜಯಶ್ರೀ ಸಬರದ ಅಭಿಪ್ರಾಯ ಪಡುತ್ತಾರೆ. "ದಲಿತ ಬಂಡಾಯ ಸಾಹಿತ್ಯದ ಮನೋಧರ್ಮವೇ ಇಂದಿನ ಮಹಿಳಾ ಸಾಹಿತ್ಯದ ಮನೋಧರ್ಮವಾಗಿದ್ದರೂ ಸ್ತ್ರೀವಾದಿ ನೆಲೆಯೇ ಪ್ರಧಾನವೆನಿಸುತ್ತದೆ"(ಸಾಹಿತ್ಯ ವಿಮರ್ಶೆ, ೧೯೯೮, ಪುಟ ೧೭೩). ಪ್ರಗತಿಪರ ಮಹಿಳಾ ಸಂಘಟನೆಗಳ ಹೋರಾಟ, ಸ್ತ್ರೀವಾದಿ ನಿಲುವುಗಳು ವಚನಕಾರ್ತಿಯರ ವೈಚಾರಿಕತೆ ಮೊದಲಾದ ಆಶಯ, ಪ್ರೇರಣೆ ಪ್ರಭಾವಕ್ಕೆ ಒಳಗಾದವು. ಹಾಗಾಗಿ ಇಂದಿನ ಮಹಿಳಾ ಸಾಹಿತ್ಯ ವೈಯಕ್ತಿಕ ಹಾಗೂ ಸಾಮಾಜಿಕ ಬದುಕಿನ ಅನೇಕ ಸಮಸ್ಯೆಗಳಿಗೆ ಸ್ಪಂದಿಸುವಂತಾಗಿದೆ. ನವೋದಯ ಪ್ರಗತಿಶೀಲ-ನವ್ಯ ಸಂದರ್ಭದ ಲೇಖಕಿಯರು ಮಧ್ಯಮ ವರ್ಗದ ಅನುಭವಗಳನ್ನು ತಮ್ಮ ಕತೆ-ಕಾದಂಬರಿಗಳಲ್ಲಿ ಚಿತ್ರಿಸಿದರೆ, ದಲಿತ -ಬಂಡಾಯ ಸಂದರ್ಭದ ಲೇಖಕಿಯರು ಮಧ್ಯಮವರ್ಗದ ಅನುಭವಗಳೊಂದಿಗೆ ಶೋಷಿತರ ಸಂವೇದನೆಯನ್ನು ಬಿಚ್ಚಿಟ್ಟಿದ್ದಾರೆ. ಸ್ತ್ರೀ ಅಬಲೆಯಲ್ಲ ಎಂಬುದನ್ನು ಸಾಬೀತು ಪಡಿಸುವಂತೆ ಇಂದು ನಾನಾ ಕ್ಷೇತ್ರಗಳಲ್ಲಿ ಪುರುಷನಷ್ಟೇ ಸಮಾನಳಾಗಿ ಅವಳು ಭಾಗವಹಿಸುತ್ತಾಳೆ. ಹೀಗೆ ಬದಲಾದ ಸ್ತ್ರೀ ವಿಚಾರಗಳು, ಮನೋಭಾವ ಹಾಗೂ ಹೊಸ ಆಲೋಚನೆಯ ಫಲಿತಗಳಾವುವು ಎಂಬುದನ್ನು ನೇಮಿಚಂದ್ರರ ಕಥಾ ಸಾಹಿತ್ಯದಿಂದ ಅಧ್ಯಯನ ಮಾಡಲಾಗುತ್ತದೆ. "ಲೇಖಕಿ ನೇಮಿಚಂದ್ರರ ಕತೆಗಳು ಸ್ತ್ರೀಶಕ್ತಿಯನ್ನು ಬಿಂಬಿಸುವ ಕತೆಗಳಾಗಿ ಕಾಣಿಸಿಕೊಳ್ಳುತ್ತವೆ ಎಂದು ಕರೀಗೌಡ ಬೀಚನಹಳ್ಳಿಯವರು ಇವರ ಕತೆಯ ಕುರಿತಾಗಿ ಅಭಿಪ್ರಾಯ ಪಡುತ್ತಾರೆ(ಕರೀಗೌಡ ಬೀಚನಹಳ್ಳಿ, ೨೦೦೩, ಪುಟ ೧೬೨).

ಈ ಹಿನ್ನೆಲೆಯಲ್ಲಿ ನೇಮಿಚಂದ್ರರ ಕತೆಗಳಲ್ಲಿ ಅಭಿವ್ಯಕ್ತವಾಗುವ ಆಧುನಿಕ ಮಹಿಳಾ ಪ್ರಜ್ಞೆಯನ್ನು ಹೀಗೆ ಗುರುತಿಸಿಕೊಳ್ಳಬಹುದಾಗಿದೆ.

* ಮಧ್ಯಮ ವರ್ಗದ ಸ್ತ್ರೀಯ ಒಳತೋಟಗಳು

* ತಾಯ್ತನದ ಸಮಸ್ಯೆ

* ಸಂಪ್ರದಾಯ ಮತ್ತು ಆಧುನಿಕತೆಯ ಸಂಘರ್ಷ

* ಮಾನಸಿಕ ಒಳತೋಟ

ಮಧ್ಯಮವರ್ಗದ ಸ್ತ್ರೀಯ ಒಳತೋಟಗಳು

ಆರಕ್ಕೇರದ ಮೂರಕ್ಕಿಳಿಯದ ಮಧ್ಯಮ ವರ್ಗದ ಸ್ತ್ರೀಯರು ತಮ್ಮ ಕುಟುಂಬದಲ್ಲಿ, ಸಮಾಜದಲ್ಲಿ ಎದುರಿಸುವ ಸಮಸ್ಯೆಗಳನ್ನು ನೇಮಿಚಂದ್ರರು ಕತೆಗಳಲ್ಲಿ ಚಿತ್ರಿಸಿದ್ದಾರೆ. ಗಂಡು-ಹೆಣ್ಣಿನ ಸಂಬಂಧಗಳು, ಸಾಂಸಾರಿಕ ಕಲಹ ಇತ್ಯಾದಿ ಅಂಶಗಳನ್ನು ಮಾರ್ಮಿಕವಾಗಿ ನಿರೂಪಿಸಿದ್ದಾರೆ.

ಹೊಸಗನ್ನಡ ಸಾಹಿತ್ಯದ ದಿಕ್ಕನ್ನು ಬದಲಾಯಿಸುವಲ್ಲಿ ಕಾರಣವಾದ ಅನೇಕ ಪ್ರಮುಖ ನೆಲೆಗಳಲ್ಲಿ ಮಧ್ಯಮವರ್ಗದ ಸ್ತ್ರೀಯರ ನಗರೀಕೃತ ಬದುಕಿನ ಉದ್ಯೋಗಸ್ಥ ಹೆಣ್ಣುಗಳ ಸಂವೇದನೆಯ ವಸ್ತು ಪ್ರತಿರೂಪವೂ ಕಾರಣವಾಗಿದೆ. ಇಂಥ ಹೊಸಗನ್ನಡ ಸಾಹಿತ್ಯದ ದಿಕ್ಕನ್ನೂ ಬದಲಾಯಿಸಿದವರಲ್ಲಿ ನೇಮಿಚಂದ್ರರು ಪ್ರಮುಖರು. ಅವರು ಮಾನವೀಯ ಸಂಬಂಧಗಳನ್ನು ಶೋಧಿಸುತ್ತಾ ಅನುಭವದ ತಾಜಾತನವನ್ನು ತಮ್ಮ ಕತೆಗಳ ಅಭಿವ್ಯಕ್ತಿ ಮಾಧ್ಯಮವಾಗಿಸಿದ್ದಾರೆ. ಸ್ತ್ರೀಪ್ರಜ್ಞೆಯನ್ನೇ ಕೇಂದ್ರವಾಗಿಟ್ಟುಕೊಂಡು ಬರೆಯುತ್ತಿರುವ ನೇಮಿಚಂದ್ರ ಮಹಿಳಾಪರ ಬರವಣಿಗೆಗಳ ದಿಸೆಯಲ್ಲಿ ಬಹಳ ಭರವಸೆ ಮೂಡಿಸುವ ಕತೆಗಾರ್ತಿ. ಅವರ "ನನ್ನದಲ್ಲದ ಬದುಕಿಗಾಗಿ" ಕತೆಯಲ್ಲಿ ಅವರು ಆರಿಸಿಕೊಂಡಿರುವ ವಸ್ತು ಈವರೆಗೆ ಕನ್ನಡ ಕಥಾ ಸಾಹಿತ್ಯಕ್ಕೆ ಅಪರಿಚಿತವಾದುದು. ಮಹಿಳೆಯೊಬ್ಬಳ ಅತ್ಯಂತ ಖಾಸಗಿ ಸಂಗತಿಯೊಂದನ್ನು ತಮ್ಮ ಕಥಾ ಹಂದರದಲ್ಲಿ ನಿರ್ವಹಿಸಿರುವ ಲೇಖಕಿಯ ಧೈರ್ಯ ಮೆಚ್ಚುವಂತಹದು. ಇಲ್ಲಿ ನಾಯಕಿಯ ಪಾತ್ರದಲ್ಲಿ ಬರುವ ವಿಧವೆಯೊಬ್ಬಳು ತಾನು ಮುಂದೆ ಎರಡನೇ ಮದುವೆಯಾಗಲಿರುವವನಿಗೆ ತಾನು ಕನ್ಯೆಯೆಂದೂ ತಾನು ಕಳೆದುಕೊಂಡಿರುವ ಕನ್ಯತ್ವವನ್ನು ಪ್ಲಾಸ್ಟಿಕ್ ಸರ್ಜರಿಯ ಮೂಲಕ ಸರಿಪಡಿಸಿಕೊಳ್ಳಲು ಮುಂಬಯಿಗೆ ಬರುತ್ತಾಳೆ. ಆದರೆ ಅವಳು ಮೊದಲ ಗಂಡನಿಂದಲೇ ಶಾಸ್ತ್ರಕ್ಕಿಂತಲೂ ಮುಂಚಿತವಾಗಿ ಮದುವೆಯಾದ ಮೇಲೆ ಅವಳ ಕನ್ಯತ್ವವನ್ನು ಅವನು ಅನುಭವಿಸಿರುತ್ತಾನೆ. ಇದರಲ್ಲಿ ಆಕೆಯ ಯಾವ ರೀತಿಯ ಅಪರಾಧವಿಲ್ಲದಿದ್ದರೂ ಶಿಕ್ಷೆ ಮಾತ್ರ ಅವಳಿಗೇ ಆಗಿರುತ್ತದೆ.

ಕತೆಯಲ್ಲಿ ಬರುವ ಡಾಕ್ಟರ್ ಹೆಣ್ಣಿನ ಸಾಮಾಜಿಕ ಸ್ಥಾನಕ್ಕೆ ಲೈಂಗಿಕ ದ್ವಂದ್ವ ನೀತಿಗೆ ಹಿಡಿದಿರುವ ಭ್ರಮೆಯನ್ನು ಬಿಡಿಸುತ್ತಾನೆ. "ನನ್ನ ದೃಷ್ಟಿಯಲ್ಲಿ ಕನ್ಯತ್ವಾನ ಮತ್ತೊಮ್ಮೆ ಹೊಲಿದು ಪ್ರತಿಷ್ಠಾಪಿಸೋ ಈ ಆಪರೇಷನ್ ತೀರ ಅಸಹ್ಯ ಅಷ್ಟೇ ಅಲ್ಲ, ಅನಾವಶ್ಯಕ ಕೂಡ" ಎಂದು ಹೇಳುತ್ತಾನೆ(ನೇಮಿಚಂದ್ರ, ೨೦೦೧(i), ಪುಟ ೩೫೩). ಹೀಗೆ ಹರಿದು ಹೋಗಲಿಕ್ಕೆ ಇರುವ

[illegible] ಗ್ರಂಥಾಲಯ.
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪೊರೆಯನ್ನು ಹೊಲಿಸಿಕೊಳ್ಳುವ ವ್ಯಂಗ್ಯದಲ್ಲಿ ನಾಯಕಿ ರೋಗಗ್ರಸ್ಥ ಸಂಬಂಧಗಳನ್ನು ಕಡಿದು ಉತ್ತರ ಹುಡುಕುತ್ತಾ ಬರುತ್ತಾಳೆ. ನಾಯಕಿ ತನ್ನ ನಿರ್ಧಾರವನ್ನು ಬದಲಿಸಿ ಮರಳಿ ಹೊರಟು ಹೋಗುವುದು ಲೈಂಗಿಕ ರಾಜಕಾರಣವನ್ನು ಟೀಕಿಸುವ, ಅದರ ವಿರುದ್ಧ ತನ್ನ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಈ ಕತೆಯ ಇತ್ಯಾತ್ಮಕ ಅಂಶವಾಗಿದೆ.

ಶಿಕ್ಷಿತಳು, ಉದ್ಯೋಗಸ್ಥಳು ಆದ ಶೀಲಾಳ ಮೇಲೆ ನಾಲ್ಕು ಜನ ಗಂಡಸರು ನಡೆಸುವ ಲೈಂಗಿಕ ಶೋಷಣೆಯ ಚಿತ್ರಣವನ್ನು "ಕೆಂಪು ಕಲಕಿದ ನೀರು" ಕತೆಯು ಒಳಗೊಂಡಿದೆ. ಹೀಗೆ ಶೋಷಣೆಯ ಸಂದರ್ಭದಲ್ಲಿ ಶೀಲಾ ಅನುಭವಿಯ ವೇದನೆಯನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಲೈಂಗಿಕ ಆಕ್ರಮಣದ ನಂತರದಲ್ಲಿ ಶೀಲಾ ಎದುರಿಸುವ ಸಮಸ್ಯೆಗಳನ್ನು ಹೃದಯ ಕಲಕುವಂತೆ ನೇಮಿಚಂದ್ರ ಚಿತ್ರಿಸಿದ್ದಾರೆ. ಲೈಂಗಿಕ ಶೋಷಣೆಯ ಚಿತ್ರಣಗಳು, ಬಹುಪಾಲು ಲೇಖಕರ ಕತೆ ಕಾದಂಬರಿಗಳಲ್ಲಿ ಕಾಣಿಸಿಕೊಂಡಿರುವುದು ಗಮನಿಸಬೇಕಾದ ಅಂಶ. ವೀಣಾ ಶಾಂತೇಶ್ವರರ 'ಗಂಡಸರು' ಕಾದಂಬರಿಯು ನೇಮಿಚಂದ್ರ 'ಕೆಂಪು ಕಲಕಿದ ನೀರು' ಕತೆಯ ಮಾದರಿಯನ್ನು ನೆನಪಿಸುವಂತದ್ದು.

ಉದ್ಯೋಗದ ಭದ್ರತೆಯಿದ್ದರೂ ಶೀಲಾಳ ಬಾಳು ಅಸ್ಥಿರತೆಯಿಂದ ಕೂಡಿದೆ. ತನ್ನ ಕತೆ ಕೇಳಿಕೊಂಡ ನಂತರ ಆಶು ಪ್ರತಿಕ್ರಿಯೆಯಲ್ಲಿ ಭಾರತೀಯ ಗಂಡೇ ಆಗಿಬಿಡುವುದು ಹಾಗೂ ಕತೆಯ ಮುಕ್ತಾಯದಲ್ಲಿ ಆತನನ್ನು ಒಪ್ಪಿಕೊಳ್ಳುವುದು ಶೀಲಾಳ ದುರಂತವೆನಿಸುತ್ತದೆ. ತನ್ನ ಮೇಲೆ ನಡೆದ ಆಕ್ರಮಣವನ್ನು ಕಂಡ ತುಷಾರ್‌ನ ಸಂಧಾನವನ್ನು ನಿರಾಕರಿಸುತ್ತಾಳೆ. ಏಕೆಂದರೆ ತುಷಾರ್ ಕೇವಲ ಗೆಳೆಯ. ಆತನ ಬಗೆಗೆ ಯಾವುದೇ ರೀತಿಯ ಪ್ರೇಮಾಲಾಪನೆಗಳು ಶೀಲಾಳಿಗೆ ಮೂಡಲಿಲ್ಲ. ಕೊನೆಗೆ ಆಶುವನ್ನು ವರಿಸುತ್ತಾಳೆ.

129972

ಆದರೆ 'ನನ್ನದಲ್ಲದ ಬದುಕಿಗಾಗಿ' ಕತೆಯ ಸರೂ, ಹಾಗೂ "ಕೆಂಪು ಮೋಡ ಬೆಳ್ಳಿ ಅಂಚು" ಕತೆಯ ಮಧು ಪಾತ್ರಗಳು ಗಂಡಿನ ಆಸರೆಯನ್ನು ನಿರಾಕರಿಸಿ ಸ್ವಂತ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುತ್ತವೆ. ಆದರೆ ಈ ಕತೆಯ ಶೀಲಾ ಮತ್ತೆ ಗಂಡಿನ ಆಸರೆಯನ್ನು ಬಯಸುವುದು ವಿಮುಖ ಚಲನೆಯಾಗಿದೆ.

ಉದ್ಯೋಗಸ್ಥ ಮಹಿಳೆಯನ್ನು ಆಧುನಿಕತೆಯ ಸಂಕೇತ ಸ್ತ್ರೀ ಸ್ವತಂತ್ರ ಎಂದೆಲ್ಲ ವ್ಯಾಖ್ಯಾನಿಸುವಾಗಲೂ ಕೂಡ ಮಹಿಳೆ ಶೋಷಣೆಗೆ ಗುರಿಯಾಗಿರುವುದನ್ನು ಈ ಕತೆಯಲ್ಲಿ ಗಮನಿಸಬಹುದು.

ತಾಯ್ತನದ ಸಮಸ್ಯೆ

ತಾಯ್ತನದ ಸಮಸ್ಯೆ ಸ್ತ್ರೀಪ್ರಜ್ಞೆಯನ್ನು ಆಳವಾಗಿ ಪ್ರಭಾವಿಸುವ ಸಮಸ್ಯೆಗಳಲ್ಲೊಂದು. ಈ ಸಮಸ್ಯೆಗೆ ಬೌದ್ಧಿಕ, ಭಾವುಕ, ಸಾಮಾಜಿಕ ಹೀಗೆ ಹಲವಾರು ಆಯಾಮಗಳಿರುವುದರಿಂದ ಅದಕ್ಕೆ

ಸುಲಭವಾದ ಪರಿಹಾರಗಳಿಲ್ಲ. ಈ ಸಮಸ್ಯೆಯನ್ನು ಕೇಂದ್ರವಾಗಿಟ್ಟುಕೊಂಡು ನೇಮಿಚಂದ್ರರು 'ಹೊಸಹುಟ್ಟು' ಕತೆಯನ್ನು ಬರೆದಿದ್ದಾರೆ.

'ಹೊಸಹುಟ್ಟು' ಕತೆ ಮಾನವನ ಸೃಜನಶೀಲ ಸೆಲೆಗಳು ಭಿನ್ನವಾಗಿ ಹರಿಯುವ ಪ್ರಕ್ರಿಯೆಯನ್ನು ಕುರಿತು ಚಿಂತಿಸುತ್ತದೆ. ಕತೆಯಲ್ಲಿ ಬದುಕಿನ ಎಲ್ಲಾ ತಾದಾತ್ಮ್ಯವನ್ನು ಕೇಂದ್ರೀಕರಿಸಿ, ಮಗುವಿನ ಬಯಕೆಯನ್ನು ತನ್ನ ಸಾಧನೆಗೆ ತೊಂದರೆಯಾಗಬಹುದೆಂಬ ಕಾರಣದಿಂದ ಮುಂದೂಡಿದ ಹೆಣ್ಣಿನ ಕತೆಯಿದು. ಇಂಥ ಸ್ಥಿತಿಯನ್ನು ಅರಿತು ನಡೆಯುವ ರಮೇಶ ಆಕೆಗೆ ಸಂಗಾತಿಯಾಗಿದ್ದಾನೆ. ಆದರೆ ಪರಿಸರವು ಇವಳು ಬಂಜೆ ಇರಬಹುದೆಂಬ ಅನುಮಾನದಲ್ಲಿ ನೋಡುತ್ತದೆ. ಆಕೆ ಮಗು ಬೇಕೆಂಬ ಹಂಬಲಕ್ಕೆ ಸಿದ್ಧಳಾಗತೊಡಗಿದಾಗ, ತಾನು ಗರ್ಭ ಧರಿಸುವುದು ಸಾಧ್ಯವೇ ಇಲ್ಲ ಎಂಬ ಸತ್ಯವು ಗೋಚರಿಸಿ ಆಘಾತಕ್ಕೊಳಗಾಗುತ್ತಾಳೆ. ದಿಕ್ಕಿಲ್ಲದ ಅನಾಥ ಮಕ್ಕಳನ್ನು ದತ್ತು ತೆಗೆದುಕೊಂಡು ಬದುಕನ್ನು ಚಿಗುರಿಸಿಕೊಳ್ಳುವ ಸಾಧ್ಯತೆಗೆ ಮುನ್ನಡೆಯಬೇಕು ಎಂಬ ರಮೇಶನ ವಾದವನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುತ್ತಾಳೆ. ಶಶಿಯ ಈ ಪರಿವರ್ತನೆಯ ಹಿಂದೆ ರಮೇಶ ಇದ್ದಾನೆ ಎಂಬುದನ್ನು ಗಮನಿಸಬೇಕು. ಪುರುಷಪ್ರಧಾನ ವ್ಯವಸ್ಥೆಯ ಪ್ರತೀಕವಾದ ರಮೇಶ ಶಶಿಯ ನೋವಲ್ಲಿ ಪಾಲುದಾರನಾಗಿ ಅವಳಿಗೆ ಮಾನಸಿಕ ಸ್ಥೈರ್ಯವನ್ನು ತುಂಬುತ್ತಾನೆ. ಅವನ ಮಾತುಗಳಲ್ಲಿ ಹೇಳುವುದಾದರೆ "ಹುಚ್ಚು ಹುಡುಗಿ, ನಮ್ಮದಾವ ಚಂದ್ರವಂಶ, ಸೂರ್ಯವಂಶ? ಇಲ್ಲೇನು ರತ್ನ ಖಚಿತ ಸಿಂಹಾಸನ ಕಾದು ಕುಳಿತಿದೆಯೆ ಉತ್ತರಾಧಿಕಾರಿ ಬೇಕು ಎಂದು? ನನ್ನ ಮಟ್ಟಿಗೆ ನೀನೇ ಹೆತ್ತರೂ ನಿನ್ನ ನವಮಾಸಗಳ ಹೊರೆಯಿಂದ, ಹೆರುವ ನೋವಿನಿಂದ ನಾ ಹೊರಗೇ ಉಳಿದಿರುತ್ತೇನೆ. ಆ ಅರ್ಥದಲ್ಲಿ ಪ್ರತಿ ಗಂಡಸೂ ಬಂಜೆಯೆ. ನರ್ಸ್ ತಂದು 'ನಿಮ್ಮ ಮಗು' ಎಂದಾಗ ತಂದೆಯಾಗುವುದಕ್ಕೂ ಅನಾಥಾಶ್ರಮದಲ್ಲಿ ಒಂದು ಮಗುವನ್ನೆತ್ತಿ ನನ್ನದು ಎನ್ನುವುದಕ್ಕೂ ವ್ಯತ್ಯಾಸವಿಲ್ಲ" ಎಂದು ಹೇಳಿ ಹೆಂಡತಿಯನ್ನು ಸಮಾಧಾನಪಡಿಸುತ್ತಾನೆ(ಅದೇ, ಪುಟ ೨೪೨). ಶತಮಾನಗಳಿಂದ ಪುರುಷ ಮಗುವಿಗಾಗಿ ಹೆಣ್ಣನ್ನು ಹೀಯಾಳಿಸುತ್ತಾ, ಇಲ್ಲವೆ ಎರಡನೇ ಮದುವೆಯಾದ ದಾಖಲೆಗಳಿವೆ. ಆದರೆ ರಮೇಶನಲ್ಲಿಯ ಮೌಲ್ಯವು ಲೇಖಕಿಯ ಮಾನವೀಯತೆಯ ಪ್ರತೀಕದಂತಿದೆ. ಈ ಕತೆಯ ಕುರಿತಾಗಿ ಎಸ್.ದಿವಾಕರ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. "ಕತೆಯು ತಾಯ್ತನದ ಸಮಸ್ಯೆಗಿರುವ ಸಾಮಾಜಿಕ, ಮಾನಸಿಕ ಆಯಾಮಗಳನ್ನು ಪರಿಶೀಲಿಸುತ್ತದೆ"(ಶತಮಾನದ ಸಣ್ಣಕತೆಗಳು, ಮುನ್ನುಡಿ, ೧೯೯೭, ಪುಟ ೧೯).

ತನ್ನನ್ನು ಕಾಡುವ ಸಮಸ್ಯೆಗಳಿಂದ ಪಾರಾಗಿ ಶಶಿ ಹೊಸ ಹುಟ್ಟು ಪಡೆಯುವಂತಾಗುವುದು ಮತ್ತೊಬ್ಬ ಹೆಣ್ಣಿನ, ಕಲಾವಿದೆಯ ಮೂಲಕ ಎನ್ನುವುದು ಅರ್ಥಪೂರ್ಣವಾಗಿದೆ. ದಿಲ್ಲಿಯ ಕಲಾಮೇಳವೊಂದರಲ್ಲಿ ಅದಿತಿ ಗುಪ್ತಾಳ ಪರಿಚಯವಾಗುತ್ತದೆ. "ಚಿತ್ರಬಿಡಿಸೋದು, ಕತೆ ಬರೆಯೋದು

ಯಾವುದೇ ಸೃಜನಶೀಲ ಕಾರ್ಯವು ಹೆರುವ ಹೊರುವ ಕ್ರಿಯೆಯಂತೆಯೇ... ಎಂದು ಹೇಳುತ್ತಾಳೆ(ಅದೇ, ಪುಟ ೨೪೩). ಮುಕ್ಕಾಲುಪಾಲು ಸ್ತ್ರೀಯರು ಬದುಕಿನಲ್ಲಿ ಯಾವ ಕ್ರಿಯಾಶೀಲ ಕೆಲಸಕ್ಕೂ ಕೈ ಹಾಕಿದವರಲ್ಲ. ಮನೆ ಗಂಡ, ಕಸಮುಸರೆ ಈ ಬಗೆಯ ಬದಲಿಲ್ಲದ ಬದುಕಿನ ಬೇಸರದಲ್ಲಿ ಮಕ್ಕಳು ಅದ್ಭುತ ಸೃಷ್ಟಿಯಾಗಿ ಕಾಣುತ್ತವೆ. ಆದರೆ ಹದಿನೈದು ದಿವಸ ಕಲಾವಿದರ ಸಹವಾಸ, ಕುಂಚಕ್ಕಂಟಿದ ಬಣ್ಣಗಳ ಬೆರಗಿನ ಲೋಕದ ಅನುಭವ ಶಶಿಯಲ್ಲಿ ಆತ್ಮವಿಶ್ವಾಸ ಹುಟ್ಟಿಸುತ್ತದೆ. ಈ ಕತೆಯಲ್ಲಿ ಅವಶ್ಯವಾಗಿ ಎರಡು ಅಂಶಗಳನ್ನು ಗಮನಿಸಬೇಕಾಗುತ್ತದೆ. ಮೊದಲನೆಯದು ಇಲ್ಲಿ ಗಂಡನ ಪೋಷಕ ಪಾತ್ರ. ಗಂಡು ಹೆಣ್ಣಿನ ಸಂಬಂಧದಲ್ಲಿ ಸಾಮಾನ್ಯವಾಗಿ ತಲೆದೋರುವ ಸಂಘರ್ಷ ಇಲ್ಲಿಲ್ಲ. ಎರಡನೆಯದು ಒಂದು ಮೌಲ್ಯವಾಗಿ ಸೃಜನಶೀಲತೆ ಪಡೆಯುವ ಆದ್ಯತೆ.

ಮಗುವೊಂದಕ್ಕೆ ಜನ್ಮನೀಡುವ, ಹೆಣ್ಣಿನ ಪ್ರಕೃತಿದತ್ತವೆನಿಸಿರುವ, ಜೈವಿಕ ಸೃಷ್ಟಿಶೀಲತೆ ಮತ್ತು ಆಕೆಯ ವ್ಯಕ್ತಿತ್ವದ ಮೂಲವಾದ ಕಲಾಸೃಷ್ಟಿ, ಇವುಗಳಲ್ಲಿ ಯಾವುದು ನಿಜವಾಗಿ ಹೆಣ್ಣಿನ ಬದುಕಿಗೆ ಹೆಚ್ಚು ಅರ್ಥಪೂರ್ಣತೆ ತರಬಲ್ಲದು ಎಂಬುದು ಕತೆಯ ಒಳವಿವರಗಳಿಂದ ಧ್ವನಿತವಾಗುತ್ತದೆ. ಕೇವಲ ತಾಯ್ತನದಿಂದಲೇ ಮಾತ್ರ ಹೆಣ್ಣಿನ ಬಾಳು ಸಾರ್ಥಕವಾಗುತ್ತದೆ ಎಂಬ ವಾದವು ಹುಸಿಯಾಗುತ್ತದೆ. ಏಕೆಂದರೆ ಪ್ರಾಕೃತಿಕವಾಗಿ ತಾಯಿಯಾಗಲು ದುರ್ಬಲವಾದ ಹೆಣ್ಣು ಬೇರೊಂದು ಪ್ರಪಂಚದಲ್ಲಿ ತಾಯ್ತನದ ಸುಖವನ್ನು ಪಡೆಯಲು ಸಾಧ್ಯವೆಂಬುದನ್ನು ಕತೆಯು ಸಾಬೀತು ಪಡಿಸುತ್ತದೆ. ಜೀವನದಲ್ಲಿ ನಮಗೆ ಎದುರಾಗುವ ಪರಿಸ್ಥಿತಿಯಿಂದ, ಸೂಕ್ತ ಪರಿಹಾರವನ್ನು ಕಂಡುಕೊಂಡು ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕೆಂಬುದು ಲೇಖಕಿಯ ಆಶಯ.

ಸಂಪ್ರದಾಯ ಮತ್ತು ಆಧುನಿಕತೆಯ ಸಂಘರ್ಷ

ನೇಮಿಚಂದ್ರರು ಹೊಸ ರೀತಿಯ ಅಭಿವ್ಯಕ್ತಿಯನ್ನು ಮಾಡಬೇಕೆಂದೇ ನಿಶ್ಚಯಿಸಿಕೊಂಡವರು. ಇವರ ಹೆಣ್ಣುಗಳು ಬದುಕಿನಲ್ಲಿ ಆಯ್ಕೆಯ ಪ್ರಶ್ನೆ ಬಂದಾಗ ಅದನ್ನು ಸುಲಭವಾಗಿ ಪರಿಹರಿಸಿಕೊಂಡು ತಕ್ಕ ನಿರ್ಧಾರಗಳನ್ನು ತೆಗೆದುಕೊಳ್ಳುವ ಧೈರ್ಯ ತೋರುತ್ತಾರೆ. ಸಂಪ್ರದಾಯದ ಮುಲಾಜಿಗೆ ಸಿಲುಕದೆ ಆಧುನಿಕತೆಗೆ ನಿರ್ಭಿಡೆಯಿಂದ ತೆರೆದುಕೊಳ್ಳುತ್ತಾರೆ. ಮದುವೆ, ಕುಟುಂಬ, ಗಂಡನ ಅಕ್ರಮ ಸಂಬಂಧ ಇತ್ಯಾದಿ ವಿಷಯಗಳನ್ನು ವಿರೋಧಿಸುವ ಮೂಲಕ ಆಧುನಿಕತೆ ಮತ್ತು ಸಂಪ್ರದಾಯದ ಸಂಘರ್ಷ ಕತೆಗಳಲ್ಲಿ ಕಾಣಸಿಗುತ್ತದೆ. ಅಂಥ ಸಂದರ್ಭದಲ್ಲಿ ಸ್ತ್ರೀ ಪಾತ್ರಗಳು ಗೋಚರವಾಗಿ ಇಲ್ಲವೆ ಅಗೋಚರವಾಗಿಯೂ ಆಸ್ಫೋಟಿಸುತ್ತವೆ.

'ನಮ್ಮ ಕನಸುಗಳಲ್ಲಿ ನೀವಿದ್ದೀರಿ' ಕತೆಯಲ್ಲಿ ನಾಯಕಿ ಕಾವ್ಯ ಗಂಡನ ಏಕತಾನದ ಬದುಕಿಗೆ ಬೇಸತ್ತು, ನಾಲ್ಕು ದಿನಗಳಿಗೆಂದು ಬಂದು ಉಳಿದುಕೊಂಡ ಕಿರಣನ ಸಹಜ ಉತ್ಸಾಹಕ್ಕೆ ಸ್ಪಂದಿಸುವ

ತೀವ್ರತೆಯಲ್ಲಿ ಕೌಟುಂಬಿಕ ಬಂಧನಗಳನ್ನು ಕಿತ್ತೊಗೆದು ಅವನ ಹಿಂದೆ ಹೋಗುತ್ತಾಳೆ. ಆದರೆ ತಾನು ಅರಸುತ್ತಿರುವುದು ಏನು ಎಂಬುದು ಅವಳಿಗೆ ಅಷ್ಟು ಖಚಿತವಾಗಿ ಇನ್ನೂ ಕರಗತವಾಗಿಲ್ಲದಿರುವುದರಿಂದ, ಕಿರಣನ ಬಳಿಯೂ ಸಂತಸದಿಂದ ಇರುವುದು ಸಾಧ್ಯವಾಗುವುದಿಲ್ಲ. ಈ ದ್ವಂದ್ವ ಇರುವುದರಿಂದ ಕಿರಣನ ಲೈಂಗಿಕ ಬಯಕೆಗೆ ತನ್ನನ್ನು ಒಡ್ಡಿಕೊಳ್ಳುವುದಿಲ್ಲ. ಇಲ್ಲಿ ಪಾವಿತ್ರ್ಯವನ್ನು ಕಾಪಾಡಿಕೊಳ್ಳಬೇಕೆಂಬ ಆಶಯಕ್ಕಿಂತ, ಕಿರಣನ ಹಿಂದೆ ಬಂದ ಉದ್ದೇಶ ಏನು ಎಂಬುದು ಸ್ಪಷ್ಟವಾಗದಿರುವುದರಿಂದ, ಅವನೊಡನೆ ದೈಹಿಕ ಸಂಬಂಧ ಅವಶ್ಯ ಅನಿಸುವುದಿಲ್ಲ. ಆದ್ದರಿಂದ ಕಿರಣ ಕೂಡ ಅಪೂರ್ಣನಾಗಿ ಉಳಿಯುತ್ತಾನೆ. ಆಕೆ ಪುನಃ ಗಂಡನ ಬಳಿಗೆ ಬರುವುದು ಮೂಲವನ್ನು ಅರಸುವಂತಿದೆ. ಹೆಣ್ಣು ತನ್ನ ಭಾವನೆಗಳನ್ನು ಎಷ್ಟೇ ಅದುವಿಡಲು ಪ್ರಯತ್ನಿಸಿದರೂ ಕೆಲವೊಮ್ಮೆ ಅವು ಸ್ಫೋಟವಾಗುತ್ತವೆ. ಅದಕ್ಕೆ ಕಾವ್ಯಳ ಮನಸ್ಸೇ ಸಾಕ್ಷಿಯಾಗಿ ನಿಲ್ಲುತ್ತದೆ. ತನ್ನ ಗಂಡನ ಜೊತೆಗೆ ಹತ್ತು ವರ್ಷಗಳ ಕಿಲುಬು ಹಿಡಿದ ಸಂಬಂಧ ಒಂದು ಕಡೆ, ಹೊಸ ಸಂಬಂಧದ ಆಕರ್ಷಣೆ ಇನ್ನೊಂದು ಕಡೆ, ಇವೆರಡರ ತುಯ್ದಾಟದಲ್ಲಿ ಒಲಿಯುವುದು ಹೊಸತರ ಆಕರ್ಷಣೆಗೆ, ಅನಂತರ ಅಲ್ಲಿ ಕೂಡ ಪ್ರಾಮಾಣಿಕವಾಗಿ ಬದುಕಿನ ಸಂಗತಿಗಳಿಗೆ ತೆರೆದುಕೊಳ್ಳಲಾರದೆ ವಾಪಸ್ಸಾಗುತ್ತಾಳೆ. ವಿವಾಹದ ಪಾವಿತ್ರ್ಯ ಮಾತೃತ್ವದ ಹೊಣೆಯನ್ನು ಬದಿಗಿರಿಸಿ ಹೊರಟೆನೆನ್ನುವ ಪಾಪಪ್ರಜ್ಞೆ ಅವಳನ್ನು ಕಾಡುತ್ತದೆ. ಹಳತಾದ ರೋಗಗ್ರಸ್ಥ ಸಂಬಂಧಗಳನ್ನು ಕಡಿದು ಹೊರಬರುವ ಆರೋಗ್ಯಪೂರ್ಣ ದೃಷ್ಟಿಕೋನಕ್ಕಿಂತ ಅದನ್ನೇ ತೇಪೆ ಹಚ್ಚಿ ಬದುಕುವ ಆಶಯವನ್ನು ಇಲ್ಲಿ ಕಾಣಬಹುದು. ಇದು ಭಾರತೀಯ ಸ್ತ್ರೀಗೆ ಅನಿವಾರ್ಯವಾಗುತ್ತದೆ. ಏಕೆಂದರೆ ಸಂಪ್ರದಾಯವನ್ನು ವಿರೋಧಿಸಿ ವಿವಾಹಬಾಹಿರ ಸಂಬಂಧದೊಡನೆ ಹೊಂದಾಣಿಕೆ ಅಸಾಧ್ಯವಾಗುತ್ತದೆ. ಹೆಣ್ಣಿನ ತುಮುಲಗಳನ್ನು ಅತ್ಯಂತ ಸೂಕ್ಷ್ಮವಾಗಿ ವ್ಯಕ್ತಪಡಿಸುವಲ್ಲಿ ಈ ಕತೆ ಯಶಸ್ವಿಯಾಗಿದೆ.

ಸ್ತ್ರೀಯೊಬ್ಬಳ ಪರಾಧೀನ ಬದುಕನ್ನು ಗಂಡನ ವಿಚ್ಛೇದನದ ನಂತರ ಸ್ವಾವಲಂಬನೆಯ ಉತ್ಕೃಷ್ಟತೆಯೆಡೆಗೆ ಆತ್ಮವಿಶ್ವಾಸವನ್ನು ಮೂಡಿಸುವುದರ ಕಡೆಗೆ ವಾಸ್ತವದ ಬದುಕಿಗೆ ಒರೆ ಹಚ್ಚುವ ಅವರ ಕಥಾ ನಿರೂಪಣೆ 'ಕಪ್ಪುಮೋಡ ಬೆಳ್ಳಿ ಅಂಚು' ಕತೆಯಲ್ಲಿ ಸಮರ್ಥವಾಗಿ ಮೂಡಿ ಬಂದಿದೆ. 'ಕತೆಯ ಮಧು ನೇಮಿಚಂದ್ರರ ಕತೆಗಳ ಸಂದರ್ಭದಲ್ಲೇ ಹೆಚ್ಚು ಭರವಸೆಯನ್ನು ಆ ಮೂಲಕ ಹೆಣ್ಣಿನ ಬದುಕಿಗೆ ಸ್ಥೈರ್ಯವನ್ನು ಕೊಡುವ ಪಾತ್ರವಾಗಿದೆ'' (ಎನ್.ಕೆ.ಕೋದಂಡರಾಮ, ೧೯೯೬, ಪುಟ ೪೪೯). ಏಕೆಂದರೆ ಮಧು ಅಭದ್ರತೆಯೇ ಕಾರಣವಾಗಿ ಗಂಡಿನ ಮೇಲ್ಮೈಯನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುವ ಮತ್ತು ಬಿಡುಗಡೆಯ ಸಂದರ್ಭವನ್ನು ಸವಾಲಾಗಿ ಸ್ವೀಕರಿಸುವ ಎರಡು ರೀತಿಯ ನೆಲೆಯಲ್ಲಿ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುತ್ತಾಳೆ. ಮಧು ರವಿಯ ವಿಘಟನ ಆಶಯವನ್ನು ಆರಂಭದಲ್ಲಿ ಅಂದರೆ ತನಗೆ ಏನೂ ಆಧಾರವಿಲ್ಲದ ಅಭದ್ರತೆಯ ಸಂದರ್ಭದಲ್ಲಿ ವಿರೋಧಿಸುವುದು

ಸಹಜವಾಗಿದೆ. ಆದರೆ ಆತ ತಿಂಗಳಿಗೆ ಇಂತಿಷ್ಟು ಹಣ ಕೊಡುತ್ತೇನೆ ಎಂದು ವ್ಯಾಪಾರದ ರೀತಿಯಲ್ಲಿ ಒಪ್ಪಂದ ಮಾಡಿಕೊಂಡಾಗ ಇದ್ದ ಅಸಹನೆಯಲ್ಲಿ ಬೇಯುವುದಕ್ಕಿಂತ ಪ್ರತ್ಯೇಕವಾಗಿರುವುದು ಸರಿಯಾಗಬಹುದು ಎಂದು ವಿಚ್ಛೇದನಕ್ಕೆ ಒಪ್ಪಿಕೊಳ್ಳುತ್ತಾಳೆ.

ಆರಂಭದಲ್ಲಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸುವುದರ ಮೂಲಕ ಕೌಟುಂಬಿಕ ಸಂಬಂಧವನ್ನು ಉಳಿಸಲು ಯತ್ನಿಸುತ್ತಾಳೆ. ಹೀಗೆ ಆತನ ಇಚ್ಛೆಗೆ ಒಪ್ಪಿದ್ದು ಒಂದು ರೀತಿಯಲ್ಲಿ ಅವಳ ಬೆಳವಣಿಗೆಯೇ ಆಗುತ್ತದೆ. ಇದು ಒಮ್ಮೆಲೆ ಒಂದು ಪ್ರಕ್ರಿಯೆಯಿಂದ ಇನ್ನೊಂದು ಪ್ರಕ್ರಿಯೆಗೆ ಹಲವಾರು ದ್ವಂದ್ವ, ಆತಂಕಗಳೊಡನೆ ದಾಟುತ್ತಿರುವುದರಿಂದ ಅನಿವಾರ್ಯವಾಗುತ್ತದೆ. ಬದಲಿ ಜೀವನವನ್ನು ಉತ್ಸಾಹದಿಂದ ಎದುರುಗೊಂಡಾಗ, ಆಕೆ ನಿರೀಕ್ಷಿಸಿದ್ದ ಮಟ್ಟದಲ್ಲಿ ಯಶಸ್ವಿಯಾಗುತ್ತಾಳೆ. ಅದು ಬದುಕಬೇಕೆಂಬ ಛಲವನ್ನು ದ್ವಿಗುಣಗೊಳಿಸುತ್ತದೆ. "ನನ್ನದಲ್ಲದ ಬದುಕಿಗಾಗಿ" ಕತೆಯ ಸರೂಗೂ ಇಲ್ಲಿನ ಮಧುಗೂ ವ್ಯವಸ್ಥೆಯನ್ನು ಆರಾಧಿಸದೆ, ಅದರ ಆಧಾರ ಸ್ತಂಭಗಳನ್ನು ನಿರಾಕರಿಸಿ ಬದುಕುವ ಹಿನ್ನೆಲೆಯಲ್ಲಿ ಸಾಮ್ಯವಿದೆ. ಗಂಡಿನಿಂದ ಶೋಷಿತಳಾಗುತ್ತಿರುವ ಹೆಣ್ಣಿಗೆ ಇರುವ ಸಾಧ್ಯತೆಗಳ ಬಗೆಗೆ ಈ ಎರಡು ಕತೆಗಳು ಹಲವಾರು ಹೊಳಹುಗಳನ್ನು ಕೊಡುತ್ತವೆ. ನೇಮಿಚಂದ್ರರ ಬೆಳವಣಿಗೆಯ ಪ್ರಬುದ್ಧತೆಯನ್ನು ಇವು ವ್ಯಕ್ತಪಡಿಸುತ್ತವೆ.

'ಮತ್ತೆ ಬರೆದ ಕವನಗಳು' ಕತೆಯಲ್ಲಿನ ನಾಯಕಿಗೆ ತನ್ನ ಅಸ್ತಿತ್ವದ ಅರಿವು ಚೆನ್ನಾಗಿ ಇದೆ. ಸಾಂಪ್ರದಾಯಿಕ ವಾತಾವರಣದಲ್ಲಿ ಬೆಳೆದ ಹುಡುಗಿ ವಿದ್ಯಾವಂತೆಯಾಗಿ ಉನ್ನತ ಹುದ್ದೆಗೇರುವ ಹುಡುಗಿಯೂ ಹಿರಿಯರ ಆಶಯದಂತೆ ಸಾಂಪ್ರದಾಯಿಕವಾದ ಮದುವೆಗೆ ಗೋಣೊಡ್ಡುತ್ತಾಳೆ. ಹುಡುಗಿ ಎನ್ನುವ ಕಾರಣಕ್ಕಾಗಿ ಬಾಲ್ಯದಲ್ಲಿ ಕಟುವಾಗಿ ಅವಳ ಸಾಮಾಜಿಕ ವ್ಯವಹಾರಗಳನ್ನು ನಿಯಂತ್ರಿಸಿದ ಅಪ್ಪ, ಸೀರೆಯ ಬಗ್ಗೆ ಸೆರಗಿನ ಬಗ್ಗೆ ಅವಳು ಹಾಕುವ ಕುಪ್ಪಸದ ಬಗ್ಗೆ ಹೆಣ್ಣಿನ ಮರ್ಯಾದೆಯ ಕಾಳಜಿ ವಹಿಸುವ ಅಮ್ಮ ಇವು ಗಂಡನೊಡನೆ ಸಹಜವಾಗಿ ಮುಕ್ತವಾಗಿ ತೆರೆದುಕೊಳ್ಳದಂತೆ ಮಾಡಿ, ಗಂಡನೊಡನೆ ಅವಳ ಸಂಬಂಧವನ್ನು ಕಮರಿಸಿಬಿಟ್ಟಿರುತ್ತದೆ. ತಾನು ಸೆಮಿನಾರ್‌ಗೆಂದು ಕಾಶ್ಮೀರಕ್ಕೆ ಹೋದಾಗ ಆ ಮುಕ್ತ ವಾತಾವರಣದಲ್ಲಿ ಗೆಳೆಯನೊಬ್ಬನ ಜೊತೆ ಆತ್ಮೀಯವಾಗಿ ವ್ಯವಹರಿಸುವುದಲ್ಲದೆ, ಯಾವುದೇ ಪಾಪಪ್ರಜ್ಞೆ ಇಲ್ಲದೆ ಮುಕ್ತವಾಗಿ ಅವನೊಡನೆ ತನ್ನ ಕೊರತೆಯನ್ನೆಲ್ಲ ತುಂಬಿಕೊಳ್ಳುತ್ತಾಳೆ. ಇಲ್ಲಿ ಕ್ಷಣಗಳನ್ನು ಹೋಲಿಸುತ್ತಾ, ತನ್ನ ಕಿಶೋರಾವಸ್ಥೆಯ ನಿಯಂತ್ರಿತ ಬದುಕಿನಿಂದ ಪ್ರಬುದ್ಧವಾಗಿ ಬೆಳೆದುದರ, ಭೂತ ಭವಿಷ್ಯತ್ತುಗಳ ಸಾಮ್ಯಗಳಲ್ಲಿ ಈ ಕಥೆ ಬೆಳೆಯುತ್ತಾ ಹೋಗುತ್ತದೆ. ಇಲ್ಲಿ ಒಂದು ನಿರ್ದಿಷ್ಟವಾದ ಕಿಲುಬುಗಟ್ಟಿದ ಸಂಬಂಧಕ್ಕೆ ಹೊಂದಿಕೊಳ್ಳಬೇಕೆಂಬ ಸಾಂಪ್ರದಾಯಿಕ ಹಟವಿಲ್ಲ. ಕತೆಯಲ್ಲಿ ಮುಕ್ತವಾಗಿ ಬದುಕು ಹಸನಗೊಳ್ಳುವ ಪರಿ ದಾಖಲಾಗಿದೆಯೇ ಹೊರತು ಪಾಪ, ಭಯ ಕಾಡುವುದಿಲ್ಲ.

ಹೀಗೆ ಮೇಲೆ ಹೆಸರಿಸಿದ ಈ ಎಲ್ಲಾ ಕತೆಗಳಲ್ಲಿ ಸಂಪ್ರದಾಯ ಆಧುನಿಕತೆಯ ಸಂಘರ್ಷವನ್ನು ಗುರುತಿಸಬಹುದಾಗಿದೆ. ಗಂಡು-ಹೆಣ್ಣಿನ ನಡುವೆ ಆಧುನಿಕತೆ ಮತ್ತು ಸಂಪ್ರದಾಯಗಳ ಸಂಘರ್ಷಕ್ಕೆ ಒಳಗಾಗಿರುವುದು ಇವರ ಕತೆಗಳಿಗೆ ಮೂಲಭಿತ್ತಿಯಾಗಿದೆ.

ಮಾನಸಿಕ ಒಳತೋಟಿ

ಸಾಮಾನ್ಯವಾಗಿ ಮಹಿಳೆಯು ತನಗಾದ ಎಷ್ಟೋ ಅನುಭವಗಳನ್ನು ಇನ್ನೊಬ್ಬರೊಂದಿಗೆ ಹೇಳಿಕೊಳ್ಳಲಾಗದೆ ಮನಸ್ಸಿನೊಳಗೆ ಹುದುಗಿಸಿಟ್ಟು ಮೂಕ ಸಂಕಟಪಡುತ್ತಿರುತ್ತಾಳೆ. ಅದು ಗೃಹಿಣಿಯಾಗಿರಬಹುದು ಅಥವಾ ಉದ್ಯೋಗಸ್ಥ ಮಹಿಳೆಯಾಗಿರಬಹುದು. ಅವರೆಲ್ಲರ ಮನಸ್ಸಿನೊಳಗೆ ಇಂಥ ಹಲವಾರು ಮೂಕ ವೇದನೆಗಳಿರುತ್ತವೆ. ಅಂಥ ಮನೋವೇದನೆಗಳಿಗೆ, ಮನಸ್ಸಿನೊಳಗಿನ ತುಡಿತಗಳಿಗೆ ನೇಮಿಚಂದ್ರ ಅವರು ತಮ್ಮ ಕತೆಗಳಲ್ಲಿ ಕಲಾತ್ಮಕ ಅಭಿವ್ಯಕ್ತಿ ನೀಡಿದ್ದಾರೆ. ಅಂಥ ಕೆಲವನ್ನು ಇಲ್ಲಿ ಗಮನಿಸಬಹುದು.

"ಏನೊಂದು ಆಗದವರು" ಕತೆಯ ಶಶಿ ಮಹತ್ವಾಕಾಂಕ್ಷೆಯ ಹೆಣ್ಣು. ಜೀವನದಲ್ಲಿ ಏನನ್ನಾದರೂ ಸಾಧಿಸಬೇಕೆಂಬ ಸಂದರ್ಭದಲ್ಲಿ ರವಿಯ ಪರಿಚಯವಾಗಿ ಮದುವೆಯಾಗುವ ಮಾತುಕತೆಯೂ ನಡೆಯುತ್ತದೆ. ಕಲಿಕೆಯ ಹಂತದಲ್ಲಿದ್ದಾಗ ಶಶಿಗೆ ರವಿ ಆದರ್ಶವಾಗಿ ಕಂಡಿದ್ದ. ಅವನನ್ನು ಸಂಗಾತಿಯಾಗಿ ಮಾಡಿಕೊಳ್ಳುವುದು ಸಮಸ್ಯೆಯಾಗಲಾರದು ಅಂದುಕೊಂಡಿದ್ದಳು. ಆದರೆ ಕಲಿಕೆಯ ಹಂತಗಳನ್ನು ಏರುತ್ತಿದ್ದಂತೆ ಮತ್ತು ಅವನು ಕೆಲಸದಲ್ಲಿರುವ ಸಂಸ್ಥೆಯಲ್ಲೇ ಉನ್ನತ ಹುದ್ದೆಯನ್ನು ಅಲಂಕರಿಸಿದಾಗ, ಪ್ರಥಮಬಾರಿಗೆ ಅವಳಲ್ಲಿ ತಾರತಮ್ಯದ ಅಂತರ ಉಂಟಾಗುತ್ತದೆ. ಈಗ ಇರುವ ಸ್ಥಿತಿಗಿಂತ ಮೇಲು ಹಂತಕ್ಕೆ ಏರಬೇಕೆನ್ನುವುದು ಶಶಿಯ ಬದುಕಿನ ಆಕಾಂಕ್ಷೆ. ಆದರೆ ರವಿಯ ನಿರ್ಲಿಪ್ತ ಸ್ಥಿತಿ, ಉದಾಸೀನತೆಯನ್ನು ಶಶಿ ಸಹಿಸುವುದಿಲ್ಲ. ಗಂಡು ತನಗಿಂತ ಎಲ್ಲ ವಿಷಯದಲ್ಲೂ ಮೇಲಿನವನಾಗಿರಬೇಕೆಂಬ ಹೆಣ್ಣಿನ ಸಹಜ ಆಕಾಂಕ್ಷೆಯನ್ನು ಶಶಿ ಇಟ್ಟುಕೊಂಡಿದ್ದಾಳೆ. ಆದರೆ ರವಿ ಬದುಕನ್ನು ಆರಾಮವಾಗಿ ಕಳೆಯಬೇಕೆನ್ನುವ ಮನಃಸ್ಥಿತಿಯನ್ನು ಹೊಂದಿದವನೆಂದು ಅವನದೇ ಮಾತುಗಳಿಂದ ಸ್ಪಷ್ಟವಾಗುತ್ತದೆ.

"ಶಶಿ ನನ್ನ ಕೆಲಸದಲ್ಲಿ ಆರಾಮಿದ್ದೇನೆ. ಸ್ವಂತ ಉದ್ಯೋಗ, ಲಾಭವೇ ಆದರೂ ದಿನದ ೨೪ ಗಂಟೆ ತಲೆನೋವು ಶ್ರಮ ಯಾತಕ್ಕೆ ಬೇಕು? ಬಿಡುವಾಗಲೀ, ದುಡಿದಿದ್ದನ್ನು ಅನುಭವಿಸುವ ಸಮಯವಾಗಲೀ, ಎಲ್ಲಿರುತ್ತೆ? ಎಂಟು ಗಂಟೆಯ ಈ ಕೆಲಸಕ್ಕೆ ಬಂದರೆ ಆಯಿತು ಕೈ ತುಂಬಾ ಸಂಬಳ" ಎನ್ನುವ ಮನೋವೃತ್ತಿಯವ (ನೇಮಿಚಂದ್ರ, ೨೦೦೧(i), ಪುಟ ೨೫೪).

ಶಶಿ ಜೀವನದ ಬಗೆಗೆ ವಿಶೇಷ ನಿರೀಕ್ಷೆಗಳನ್ನು ಬಯಸಿದವಳು. ವ್ಯಕ್ತಿಯ ಓದು, ವಿದ್ಯೆ, ಕೆಲಸ, ಸಾಧನೆ ಎಲ್ಲವನ್ನೂ ಕಳಚಿ ಅವನನ್ನಷ್ಟೇ ಬೆತ್ತಲಾಗಿ ಪ್ರೀತಿಸುವುದು ಅವಳಿಗೆ ಅಸಾಧ್ಯವಾದುದು.

ಹಾಗಾಗಿ ಇಂಜಿನಿಯರಿಂಗ್‌ನಲ್ಲಿ ಪ್ರಥಮ ರ್‍ಯಾಂಕ್‌ಗಳಿಸಿದ ಶಶಿ ಹೆಚ್ಚಿನ ಓದಿಗೆ ಜರ್ಮನಿಗೆ ಹೊರಡಲು ಅನುವಾಗುತ್ತಾಳೆ. ರವಿಯನ್ನು, ಅವನ ಪ್ರೀತಿಯನ್ನು ತೊರೆದು ಅವಳು ಜರ್ಮನಿಗೆ ಹೋಗಲು ನಿರ್ಧಾರ ಕೈಗೊಳ್ಳುವಾಗ ಪ್ರಬಲವಾದ ಮಾನಸಿಕ ಗೊಂದಲಕ್ಕೆ ಈಡಾಗುತ್ತಾಳೆ. ಕೊನೆಗೆ ಜೀವನದಲ್ಲಿ ಏನಾದರೂ ಆಗಬೇಕೆಂಬ ಛಲ ಅವಳಲ್ಲಿ ಗಟ್ಟಿಯಾಗುತ್ತದೆ. ಏನೊಂದು ಆಗದ ಗಂಡಂದಿರಲ್ಲದೆ, ಗಂಡಂದಿರ ಹೆಂಡತಿಯರನ್ನು ಶಶಿ ವಿರೋಧಿಸುತ್ತಾಳೆ. ತಂದೆ, ತಾಯಿ, ಪ್ರೀತಿ, ಗೆಳೆಯನ ಪ್ರೇಮ ಎಲ್ಲವನ್ನು ನಿರಾಕರಿಸಿ ಬದುಕಿನ ಸಾಧನೆಗೆ ಜರ್ಮನಿಗೆ ತೆರಳುವುದು ಕತೆಯಲ್ಲಿ ಸ್ವಾರಸ್ಯಕರವಾಗಿ ಮೂಡಿಬಂದಿದೆ.

"ಸಂಜೆಗಳು ಎಷ್ಟು ಸುಂದರ!", ಕತೆಯ ಮೇಘಾ, 'ನಮ್ಮ ಕನಸುಗಳಲ್ಲಿ ನೀವಿದ್ದೀರಿ' ಕತೆಯ ಕಾವ್ಯಳ ಸಮಸ್ಯೆಯನ್ನೇ ಎದುರಿಸುವಳಾದರೂ, ಗಂಡನ ಸ್ವಭಾವ ಉದ್ದೇಶಪೂರ್ವಕವಾಗಿ ಬದಲಾಗುತ್ತಿರುವುದನ್ನು ಸಹಿಸದವಳಾಗಿದ್ದಾಳೆ. ಆದ್ದರಿಂದ ಆಕೆ ತಾನು ಬಯಸುವ ಸ್ಥಿತಿಯನ್ನು ತನ್ನದಾಗಿಸಿಕೊಳ್ಳಲು ಕಲಾವಿದ ವರ್ಣನ ಕಡೆಗೆ ಸರಿಯುತ್ತಿರುವ ಕ್ರಿಯೆಯಲ್ಲಿ ಮಗ್ನಳಾಗುತ್ತಾಳೆ. ಈ ರೀತಿಯಾದ ಸರಿಯುವ ನೆಲೆಯನ್ನು ಲೇಖಕಿಯು ಯಾವುದೇ ರೀತಿಯ ತುಮುಲಗಳಿಲ್ಲದೇ ವಿಶ್ಲೇಷಿಸಿದ್ದಾರೆ. ಹೆಣ್ಣು ತನಗೆ ಬೇಕೆನಿಸಿದ ಸಂಬಂಧದೊಡನೆ ಬಾಳುವ ಸ್ವಾತಂತ್ರ್ಯವನ್ನು ಪಾತ್ರಕ್ಕೆ ಒದಗಿಸಿದ್ದಾರೆ. ಪತಿಯ ವಿನಃ ಪರಪುರುಷನನ್ನು ಕಣ್ಣೆತ್ತಿ ನೋಡುವುದು ಅಪರಾಧ ಎನ್ನುವ ವಾದವನ್ನು ಲೇಖಕರು ಅಲ್ಲಗಳೆದಿದ್ದಾರೆ. ಗಂಡ ಮಾನಸಿಕವಾಗಿ, ದೈಹಿಕವಾಗಿಯೂ ಸರಿಹೊಂದದಿರುವ ಸಂದಿಗ್ಧ ಪರಿಸ್ಥಿತಿಯಲ್ಲಿ ಹೆಣ್ಣು ಕೈಗೊಳ್ಳಬೇಕಾದ ನಿರ್ಧಾರವನ್ನು ಲೇಖಕಿ ನಿರ್ಭಯವಾಗಿ ಚಿತ್ರಿಸಿದ್ದಾರೆ.

'ತ್ರಿಕೋನದಾಚೆಗೆ' ಕತೆಯೂ ತುಷಾರ, ಲೀಲಾ, ವರ್ಷಾ ಈ ಮೂವರ ಸುತ್ತ ಹೆಣೆದುಕೊಂಡಿದೆ. ಮಧ್ಯಮವಯಸ್ಸಿನ ತುಷಾರ ಹೆಂಡತಿಯಿದ್ದೂ ಯೌವ್ವನದ ಹೆಣ್ಣುಗಳೊಡನೆ ಚಕ್ಕಂದವಾಡಬೇಕೆಂಬ ಆಸೆವುಳ್ಳವನು. ಅವನ ಗಂಭೀರ ಅನಿಸುವ ವಿಚಾರಗಳು ಕೇವಲ ಇಚ್ಛಿಸಿದ ಹೆಣ್ಣನ್ನು ಮರುಳು ಮಾಡುವಷ್ಟಕ್ಕೇ ಸೀಮಿತವಾಗುತ್ತವೆ ಎಂಬುದನ್ನು ವರ್ಷಾ ಕಂಡುಕೊಳ್ಳುತ್ತಾಳೆ. ಆತನ ಹೆಂಡತಿ ಲೀಲಾ ಯಾವುದೇ ವಿಘಟನೆಗೆ ಕಾರಣಳಾಗದೇ ಅಸಹಾಯಕ ಜೀವಿಯೆಂಬುದು ನೇರವಾಗಿ ಕಂಡಮೇಲೆ, ತುಷಾರನ ಸ್ನೇಹಕ್ಕೆ ವಿದಾಯ ಹೇಳುತ್ತಾಳೆ. ಇವಳ ಸ್ನೇಹ ಹೆಂಡತಿಗೆ ವಿಚ್ಛೇದನ ನೀಡಿ ವರ್ಷಾಳನ್ನು ಮದುವೆಯಾಗುವ ಮಟ್ಟಕ್ಕೇರಿರುತ್ತದೆ. ಆದರೆ ಇವೆಲ್ಲವನ್ನು ತಿಳಿದ ಲೀಲಾ ಅಚಲಳಾಗುವುದಿಲ್ಲ. ನೇಮಿಚಂದ್ರ ಲೀಲಾಳ ಪಾತ್ರಕ್ಕೆ ಸ್ಥಿರತೆಯನ್ನು ನೀಡಿದ್ದಾರೆ. "ಸಾಯಲಿಲ್ಲ ವರ್ಷಾ, ಕೊನೆಯಾಯಿತು ಅಷ್ಟೇ" ಲೀಲಾ ಒಮ್ಮೆ ಗುಡುಗಿ ಮರುಕ್ಷಣ ಅಷ್ಟೇ ತಣ್ಣಗೆ ಹೇಳಿದಳು(ನೇಮಿಚಂದ್ರ, ೨೦೦೧(i), ಪುಟ ೩೧೬). ನೇಮಿಚಂದ್ರ ವ್ಯವಸ್ಥೆಯೊಳಗಿನ ಮಾನವ ವಿರೋಧಿ ಆಶಯಗಳನ್ನೇ ವಿರೋಧಿಸುತ್ತಾರೆ. "ಗಂಡನನ್ನು ದೂಷಿಸಿ ಏನು ಪ್ರಯೋಜನ, ಸ್ವತಃ ಗಂಡು ಹೆಣ್ಣನ್ನು ಶೋಷಿಸಲು ಅವಕಾಶ ಮಾಡಿಕೊಡೋ ನಿಮ್ಮಂಥ ಹೆಣ್ಣುಗಳಿರೋವಾಗ ಶೋಷಣೆಗೆಲ್ಲಿ ಅಂತ್ಯ?"(ಅದೇ, ಪುಟ ೩೧೫)

ಲೀಲಾ ಗಟ್ಟಿಯಾಗುವ ಪ್ರಕ್ರಿಯೆ ಕತೆಯಲ್ಲಿ ನಡೆಯುತ್ತದೆ. ಗಂಡನ ಎಲ್ಲಾ ಚೇಷ್ಟೆಗಳ ಅರಿವಿದ್ದರೂ ಎಲ್ಲಿಯೂ ಸ್ಫೋಟಗೊಳ್ಳುವುದಿಲ್ಲ. ಮನೆಗೆ ಬಂದ ವರ್ಷಳಿಗೂ ಸಹ ಗಂಡನ ಅಭಿಲಾಷೆಗಳ ಕುರಿತು ಸ್ಪಷ್ಟ ಪರಿಚಯ ಮಾಡುತ್ತಾಳೆ. ಅವಳ ತಪ್ಪಿನ ಅರಿವು ಅವಳಿಗೆ ಮನದಟ್ಟಾಗುವಂತೆ ಮಾಡುತ್ತಾಳೆ.

ಅನಾರೋಗ್ಯದಿಂದ ನರಳುತ್ತಿರುವ ಶಶಿ, ಮಾನಸಿಕವಾಗಿಯೂ ಕಾಯಿಲೆಗೆ ಗುರಿಯಾಗುತ್ತಾಳೆ. ತನ್ನ ಮೊದಲಿನ ಜೀವನದಲ್ಲಿ ಗಂಡ ತೋರಿಸುತ್ತಿದ್ದ ಪ್ರೀತಿ ಈಗ ಇಲ್ಲವಾಗಿದೆ ಎಂದು ಅನಾವಶ್ಯಕ ಗೊಂದಲಕ್ಕೆ ಒಳಗಾಗುವುದನ್ನು 'ಬದುಕು ನಿನ್ನಲ್ಲೆಂಥಾ ಮುನಿಸು' ಕತೆಯು ತಿಳಿಸುತ್ತದೆ. ಗಂಡನನ್ನು ಪ್ರತಿಯೊಂದು ಹಂತದಲ್ಲಿಯೂ ಅನುಮಾನಿಸುತ್ತಾಳೆ. ಆಫೀಸಿನಿಂದ ತಡವಾಗಿ ಮನೆಗೆ ಬಂದರೆ, ಮನೆಯಿಂದ ಬೇಗ ಆಫೀಸಿಗೆ ಹೊರಟರೂ ಅನುಮಾನಿಸುತ್ತಾಳೆ. ತನಗೆ ಬರಬಾರದ ಕಾಯಿಲೆ ಬಂದಿದೆ, ಇನ್ನು ತನಗೆ ಬದುಕುವ ಹಕ್ಕಿಲ್ಲವೆಂದು ಸದಾ ನಿಸ್ತೇಜಕವಾಗಿ ವರ್ತಿಸುತ್ತಾಳೆ. ಪರ್ತಕರ್ತೆಯಾದ ರೇಖಾಳ ಸಲಹೆ, ಸೂಚನೆಯ ಮೇರೆಗೆ ಅವಳು ಪತ್ರಿಕೆಗೆ ಲೇಖನವೊಂದನ್ನು ಬರೆದು ಕೊಡುತ್ತಾಳೆ. ಆ ಲೇಖನ ಪ್ರಕಟಗೊಂಡಾಗ ಅವಳಲ್ಲಿ ಬಾಳಿನ ಬಗ್ಗೆ ಉತ್ಸಾಹ ಮೂಡುತ್ತದೆ. ಅವಳದೇ ಮಾತುಗಳಲ್ಲಿ ಹೇಳುವುದಾದರೆ "ನಮ್ಮೊಳಗೆ ನಮ್ಮೊಳಗಿನ ಎಷ್ಟೊಂದು ಆಯಾಮಗಳಿಗೆ ಅಗಳಿ ಹಾಕಿ ಬೀಗ ಜಡಿದು ಹೊರ ಬರುವ ಅವಕಾಶವೇ ನೀಡದೆ ಬದುಕು ಕಳೆದುಬಿಡುತ್ತೇವೆ" (ಅದೇ, ಪು. ೧೧೪). ಹೀಗೆ ಬದುಕು ತೀರ ಸ್ವಾರಸ್ಯಕರವಾದುದು. ಹುಟ್ಟಿದ ಪ್ರತಿಯೊಬ್ಬ ವ್ಯಕ್ತಿಗೂ ಅವಕಾಶಗಳಿವೆ. ಅವುಗಳನ್ನು ಸ್ವೀಕರಿಸಲು ನಾವು ಉತ್ಸುಕರಾಗಿರಬೇಕೆಂಬ ಆಶಯವನ್ನು ಕತೆಯು ಒದಗಿಸುತ್ತದೆ. ಲೇಖನದಿಂದ ಬಂದ ನೂರಾಐವತ್ತು ರೂಪಾಯಿಗಳು ದಿನದ ೧೦-೧೨ ಗಂಟೆ ದುಡಿವ ಗಂಡನನ್ನು ಪಾರು ಮಾಡಬಲ್ಲವು ಎಂಬ ಆತ್ಮವಿಶ್ವಾಸವನ್ನು ಶಶಿಯಲ್ಲಿ ಮೂಡಿಸುತ್ತದೆ.

ಹೀಗೆ ಮಾನಸಿಕವಾಗಿ ಬದುಕಿನಲ್ಲಿ ತೊಳಲಾಟಕ್ಕೆ ಒಳಗಾಗುವ ಸ್ತ್ರೀಪಾತ್ರಗಳನ್ನು ನಿರ್ವಹಿಸುವಲ್ಲಿ ನೇಮಿಚಂದ್ರ ಯಶಸ್ವಿಯಾಗಿದ್ದಾರೆ. 'ನೆನಪುಗಳು ನೋಯಲಿಲ್ಲ' ಕತೆಯ ಸಾವಿತ್ರಿಯ ಪಾತ್ರವೂ ಸಹ ಶಶಿಯ ಹಾಗೆ ಮನೋವೇದನೆಯನ್ನು ಅನುಭವಿಸುತ್ತದೆ. ಸಾವಿತ್ರಿ ಎದೆಯಲ್ಲಿ ರವಿಯನ್ನು ಹೊತ್ತು, ಗೋಪುವನ್ನು ಬಾಳಿನ ಸಂಗಾತಿಯನ್ನಾಗಿ ಪಡೆದು ಅವಳು ಬಾಳಿನುದ್ದಕ್ಕೂ ಮಾನಸಿಕ ಗೊಂದಲಕ್ಕೆ ಒಳಗಾದುದನ್ನು ಕತೆಯು ಚಿತ್ರಿಸುತ್ತದೆ.

ಕತೆಯ ವಿವರದಲ್ಲಿ ಬರುವ ಸಾವಿತ್ರಿಯ ವೈಯಕ್ತಿಕ ಡೈರಿಯು ಕತೆಯನ್ನು ನಿರ್ದೇಶಿಸುತ್ತದೆ. ಬೆಟ್ಟದ ತುದಿಯಿಂದ ಜಾರುತ್ತಿದ್ದ ತನ್ನನ್ನು ಉಳಿಸಲಿಲ್ಲ ಎಂಬ ಆಕ್ರೋಶ ಮದುವೆಯಾದ ಗಂಡನ ಮೇಲೆ, ತನ್ನನ್ನು ತನ್ನನ್ನು ರಕ್ಷಿಸಿದ ಪ್ರೀತಿ ರವಿಯ ಮೇಲೆ ಬದುಕಿನಲ್ಲಾದ ಒಂದು ಘಟನೆಯಿಂದ,

ಒಂದು ಪ್ರಕರಣ ಅವಳ ಮನಃಸ್ಥಿತಿಯನ್ನು ಬದಲಾಯಿಸುತ್ತದೆ. ಮಗಳು ಶ್ಯಾಮೋನಿ ತಾಯಿಯ ಮಾನಸಿಕ ಗೊಂದಲವನ್ನು ನಿವಾರಿಸಲು ಈ ಮಾತುಗಳನ್ನಾಡುತ್ತಾಳೆ. "ಅಮ್ಮ, ಬದುಕು ನಮಗೇನಾಗುತ್ತ ಎಂಬುದಲ್ಲ, ನಮಗಾದುದ್ದನ್ನು ನಾವು ಹೇಗೆ ಸ್ವೀಕರಿಸುತ್ತೇವೆ, ಹೇಗೆ ಎದುರಿಸುತ್ತೇವೆ ಹೇಗೆ ಮುಖಾಮುಖಿಯಾಗುತ್ತೇವೆ..." ಎಂದು ಹಾಗೆಯೇ ಮುಂದುವರೆದು ಒಂದು ಘಟನೆಯನ್ನು ಉದಾಹರಿಸುತ್ತಾಳೆ. "ಅಮ್ಮ ದಿಯರೋಲದ ಆ ಬೆಂಕಿ ಅಪಘಾತ ನೆನಪಿದೆಯೇ? ಸತ್ತ ಅದೆಷ್ಟು ಮಕ್ಕಳಿದ್ದರು, ಬದುಕುಳಿದ ಅಮ್ಮಂದಿರಿದ್ದರು. ಅವರ ಪ್ರೀತಿಯನ್ನು ಸಾವು ಬದುಕಿನಲ್ಲಿ ತೂಗಲಾದೀತೆ. ಅಮ್ಮಾ, ಸಾವಿನ ಆ ಕ್ಷಣದಲ್ಲಿ ಮನುಷ್ಯ ಏನಾಗುತ್ತಾನೆ ಎಂದು ಊಹಿಸಬಹುದು, ಕಲ್ಪಿಸಬಹುದು. ಆದರೆ ಕಲ್ಪಿಸಿದ್ದೆಲ್ಲವೂ ಕಲ್ಪನೆಯೆ. ಸಾವು ಎದುರು ನಿಂತ ಆ ಕ್ಷಣ ನಮ್ಮೊಳಗೆ ನಾವಿರುವೆವೆ, ಬಲ್ಲವರಾರು? ಯಾರಿಗೂ ಗೊತ್ತಿಲ್ಲದ ಅಪರಿಚಿತರ ಜೀವ ಉಳಿಸಲು ತಾವು ಹಾರಿ ಪ್ರಾಣ ಕಳೆದುಕೊಂಡವರಿದ್ದಾರೆ"(ಅದೇ, ಪುಟ ೧೪೭). ಹಾಗಾಗಿ ಕೇವಲ ಒಂದೇ ಮಾನದಂಡದಿಂದ ಮನುಷ್ಯ ಸಂಬಂಧಗಳನ್ನು ಅಳೆಯಬಾರದು. ಹೀಗೆ ಮಗಳ ನೀತಿ ಮಾತುಗಳಿಂದ ಸಾವಿತ್ರಿಯ ಮಾನಸಿಕ ಗೊಂದಲ ದೂರಾಗುತ್ತದೆ. ಹೀಗೆ ಮಾನಸಿಕ ತೊಳಲಾಟಕ್ಕೆ ಒಳಗಾದವರನ್ನು ಬದುಕಿನ ಮಹತ್ವಾಕಾಂಕ್ಷೆಯೆಡೆಗೆ ತರಲು ಲೇಖಕಿ ಪೂರಕ ಪಾತ್ರಗಳನ್ನು ಸೃಷ್ಟಿಸುತ್ತಾರೆ. ವಿಭಿನ್ನ ರೀತಿಯ ಸಂವೇದನೆಗಳನ್ನು ತಮ್ಮ ಕತೆಗಳಲ್ಲಿ ನೀಡಿರುವ ನೇಮಿಚಂದ್ರ ಅವರ ಈ ಮೇಲಿನ ಕತೆಗಳಲ್ಲಿ ಮಾನಸಿಕ ಒಳತೋಟಿಯ ಅಂಶಗಳನ್ನು ಗುರುತಿಸಬಹುದು.

ಕೌಟುಂಬಿಕ ಸಮಸ್ಯೆ

ಕೌಟುಂಬಿಕ ಸಮಸ್ಯೆಯನ್ನು ಕೇಂದ್ರವಾಗುಳ್ಳ ಕತೆಗಳನ್ನು ನಿರ್ಮಿಸುವುದರಲ್ಲಿ ನೇಮಿಚಂದ್ರ ಯಶಸ್ವಿಯಾಗಿದ್ದಾರೆ. ಪರಂಪರೆಯಿಂದಲೂ ಹೆಣ್ಣು ಕುಟುಂಬದ ಕಣ್ಣಾಗಿದ್ದಾಳೆ. ಕುಟುಂಬದ ನಿರ್ವಹಣೆಯ ಹೊಣೆ ಹೊತ್ತಿರುವ ಸ್ತ್ರೀಯು ಹಲವಾರು ತುಮುಲಗಳಿಗೆ ಒಳಗಾಗುತ್ತಾಳೆ. ಮಹಿಳೆ ಆಧುನಿಕಳಾದ ಮೇಲೆಯೂ ಕೂಡ (ಶಿಕ್ಷಣ, ಉದ್ಯೋಗ) ಕೆಲವೊಂದು ಕೌಟುಂಬಿಕ ಸಮಸ್ಯೆಗಳಿಗೆ ಗುರಿಯಾಗುತ್ತಾಳೆ. ಅಂತಹ ಸಮಸ್ಯೆಗಳನ್ನು ನೇಮಿಚಂದ್ರರ ಕತೆಗಳಲ್ಲಿ ಗುರುತಿಸಬಹುದು.

'ಬದುಕು ಕಾಯುವುದಿಲ್ಲ' ಕತೆಯ ಸಂದರ್ಭ ವಿಭಿನ್ನ ನೆಲೆಯ ಕುಟುಂಬದ ಚಿತ್ರಣ ನೀಡುತ್ತದೆ. ಇಲ್ಲಿ ದಾಂಪತ್ಯದ ಸಂದರ್ಭದಲ್ಲಿ ಅಸಮತೆಯಾಗಲಿ, ವಿಷಮತೆಯಾಗಲಿ ಇಲ್ಲ ಎಂದು ಜಿ.ಎಸ್.ಆಮೂರರು ಅಭಿಪ್ರಾಯ ಪಡುತ್ತಾರೆ(ಜಿ.ಎಸ್.ಅಮೂರ, ೨೦೦೪, ಪ್ರಸ್ತಾವನೆ). ಏಕೆಂದರೆ ಸಂಯುಕ್ತಾ-ವಿಶೂರ ನಡುವೆ ಪರಸ್ಪರ ತಿಳುವಳಿಕೆಯಿದೆ, ಗೌರವವಿದೆ. ಆರ್ಥಿಕವಾಗಿಯೂ ಇವರು ಸ್ವತಂತ್ರರು. ಇಬ್ಬರಿಗೂ ತಮ್ಮದೇ ಆದ ವೃತ್ತಿಗಳಿವೆ. ಸಮಸ್ಯೆ ಇರುವುದು ಅವರು ಪ್ರತಿನಿಧಿಸುವ

ಜೀವನದೃಷ್ಟಿಯಲ್ಲಿ. ಸಂಯುಕ್ತಾಗೆ 'ಬದುಕು ಮುಖ್ಯ' ಅದು ಯಾರಿಗೂ ಕಾಯುವುದಿಲ್ಲ ಎನ್ನುವುದು ಅವಳ ಜೀವನದ ನಿಲುವು. ಆ ಸತ್ಯ ವಿಶೂಗೂ ತಿಳಿದಿದೆ. ಆದರೆ ಅವನು ಯಶಸ್ಸಿನ ಬೆನ್ನು ಹತ್ತಿದ್ದಾನೆ. ಅವನಿಗೆ ಪುರುಸೊತ್ತಿಲ್ಲ. ವೈವಾಹಿಕ ಜೀವನದ ಹತ್ತು ವರ್ಷಗಳ ನಂತರ ಅವರು ಎರಡನೆಯ ಮಧುಚಂದ್ರಕ್ಕೆಂದು ಗೋವಾಕ್ಕೆ ಬರುತ್ತಾರೆ. ಆದರೆ ವಿಶೂ ಕಛೇರಿಯ ಬೇತಾಳವನ್ನು ಹೊತ್ತುಕೊಂಡೇ ಬಂದಿರುವುದರಿಂದ ಅವನು ಬದುಕಿನ ಸೌಂದರ್ಯಕ್ಕೆ ವಿಮುಖನಾಗಿದ್ದಾನೆ. ಗಂಡನ ಮನಃಸ್ಥಿತಿಯನ್ನು ಬೇರೆಡೆಗೆ ತರಲು ಮಾಡಿದ ಸಂಯುಕ್ತಾಳ ಪ್ರಯತ್ನ ವಿಫಲವಾಗುತ್ತದೆ.

ಹಣವೇ ಮನುಷ್ಯನ ಬದುಕನ್ನು ನಿಯಂತ್ರಿಸುತ್ತದೆ ಎನ್ನುವ ನಿಲುವು ವಿಶೂದಾದರೆ, ಮಾನವೀಯತೆಯ ಬದುಕನ್ನು ಅರಸುವುದು ಸಂಯುಕ್ತಾಳದು. ಹೀಗೆ ದ್ವಿಮುಖ ಚಲನೆಯ ದಂಪತಿಗಳ ಚಿತ್ರಣ ಕತೆಯಲ್ಲಿದೆ.

'ನೀವು ಕಾಣದ ನಾಳೆಗಳಲ್ಲಿ...' ಕತೆಯ ಸ್ವರೂಪ ನಿರ್ದೇಶನ ಮಾಡುವಾಗ ನೇಮಿಚಂದ್ರರ ಹಾದಿ ಹೊಸದಾಗಿದೆ. ಮಗನನ್ನು ಕಟ್ಟೆಚ್ಚರದ ಕಣ್ಣುಗಾವಲಿನಲ್ಲಿ ಸಲಹಿದ ತಾಯಿ ಅವನ ಇಡಿ ಬದುಕು ತನ್ನ ನಿಯಂತ್ರಣದಲ್ಲಿ ಅರಳಬೇಕೆಂದು ನಿರೀಕ್ಷಿಸುತ್ತಾಳೆ. ಆದರೆ ಒಂದು ಹಂತದವರೆಗೆ ತಾಯಿಯ ಹಿಡಿತದಲ್ಲಿದ್ದ ರವಿ, ತನ್ನ ಬದುಕಿಗೆ ಇನ್ನೊಂದು ಜೀವ ಪ್ರವೇಶಿಸುತ್ತಿದೆ ಎಂಬ ನಿರೀಕ್ಷೆಯಲ್ಲಿ ಸ್ವತಂತ್ರ ತೀರ್ಮಾನ ತೆಗೆದುಕೊಳ್ಳುವ ಆಶಯ ವ್ಯಕ್ತಪಡಿಸುತ್ತಾನೆ. ಸಾಂಪ್ರದಾಯಿಕ ಆಲೋಚನೆಯ ಹೆಣ್ಣು ಗಂಡು ಇಬ್ಬರೂ ಒಂದೇ ಪಾತಳಿಯಲ್ಲಿ ಯೋಚಿಸುತ್ತಾರೆ. ಇಲ್ಲಿ ಗಂಡಿಗೆ ವ್ಯವಸ್ಥೆಯು ಆ ಬಗೆಯ ಆಲೋಚನೆಯ ಮಾದರಿಗಳನ್ನು ನೀಡುತ್ತದೆ. ಗಂಡು ಎಲ್ಲ ಸಂದರ್ಭಗಳ ನಿರ್ಣಾಯಕ ಘಟಕವಾದ್ದರಿಂದ, ಹೆಣ್ಣು ಆತನನ್ನು ಕೇವಲ ಅನುಸರಿಸುತ್ತಾಳೆ. ಈ ಹಿನ್ನೆಲೆಯಲ್ಲಿ ರವಿಯ ತಾಯಿ ಮಗನ ಮೇಲೆ ಆತನ ಬದುಕಿನ ವಿಷಯವಾಗಿ ತನ್ನದೇ ಆದ ಕೆಲವು ನಿರ್ಧಾರಕ ಆಶಯಗಳನ್ನು ಹೇರಲು ಪ್ರಯತ್ನಿಸುತ್ತಾಳೆ. ಈ ಪ್ರಯತ್ನದ ಹಿಂದೆ ತಾನು ಗಂಡನ ನಿಯಂತ್ರಣದಲ್ಲಿ, ಭಯದಲ್ಲಿ ಬೆಳೆದು ಬಂದವಳು ಎಂಬ ಪ್ರಜ್ಞೆ ಇದೆ. ಸ್ವತಂತ್ರವಾದ ಅನಿಸಿಕೆಗಳಿಗೆ ಗೌರವ ಕೊಡದ ಸಂದರ್ಭವು ಉದ್ದಕ್ಕೂ ಅವಳನ್ನು ಎರಡನೆಯ ದರ್ಜೆಯ ಪ್ರಜೆಯಾಗಿಸಿತ್ತು. ಗಂಡ ತನ್ನ ಮೇಲೆ ನಡೆಸಿದ್ದ ಅಧಿಕಾರವನ್ನು ಪ್ರೀತಿಯ ಹೆಸರಿನಲ್ಲಿ ಮಗನ ಮೇಲೆ ಪ್ರಯೋಗಿಸಲು ಇಚ್ಛಿಸುತ್ತಾಳೆ. ಇದು ಆಕೆಯ ಮಾನಸಿಕ ಸ್ಥಿತಿಗೆ ಸಂಬಂಧಿಸಿದ ಸಮಸ್ಯೆಯಾಗಿದೆ. ತಂದೆಯ ಒರಟು ಪ್ರತಿಕ್ರಿಯೆಯು ಹಿಂದೆ ಸರಿದಿರುವುದು ಸಹಜವಾಗಿಯೇ ಇದೆ. ಯಾಕೆಂದರೆ ಅಂತಃಕರಣದ ಸಮಸ್ಯೆಯಲ್ಲಿ ಗಂಡಿಗಿಂತ ಹೆಣ್ಣು ಮುಂದಿರುತ್ತಾಳೆ. ಲೇಖಕಿ ಈ ಆಶಯವನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ.

ಪ್ರೇಮವಿವಾಹದ ಸೋಲು ಎನ್ನುವುದು ವೈಯಕ್ತಿಕ ಸೋಲಾಗಿರುತ್ತದೆಯೇ ಹೊರತು ಪ್ರೇಮ ವಿವಾಹದ ಸೋಲಾಗಿರುವುದಿಲ್ಲ ಎಂಬುದನ್ನು ಒಂದು ಸಾಂಸಾರಿಕ ಚೌಕಟ್ಟಿನಲ್ಲಿ ಅಭಿವ್ಯಕ್ತಿಪಡಿಸಲಾಗಿದೆ. 'ತೆರೆಗಳು ಸರಿದವು' ಕತೆಯು ಕೌಟುಂಬಿಕ ಸಂಬಂಧಗಳ ವಿಘಟನೆಯನ್ನು ತಿಳಿಸುತ್ತದೆ. ಅಚಲಳ

ಸಂಬಳ ತನ್ನ ಕುಟುಂಬಕ್ಕೆ ಭದ್ರತೆಯನ್ನು ನೀಡುವದೆಂದು ಅಣ್ಣನ ಲೆಕ್ಕಾಚಾರ. ಮಾನವೀಯ ಸಂಬಂಧಗಳು ಇಲ್ಲಿ ಪಕ್ಕ ವ್ಯವಹಾರಕ್ಕಿಳಿಯುತ್ತವೆ. ಅಚಲನ ಮಾನಸಿಕ ಒಳತೋಟಿಯನ್ನು, ಅವಳ ಅಣ್ಣ ಅತ್ತಿಗೆ ಅರ್ಥೈಯಿಸಿಕೊಳ್ಳುವುದಿಲ್ಲ. ಅಚಲ ಅವರಿಗೆ ಕೇವಲ ದುಡಿಯುವ ಯಂತ್ರ ಮಾತ್ರ. ಅವಳಿಗೊಂದು ಮನಸ್ಸಿದೆ, ಅವಳಲ್ಲಿ ಆಸೆ, ಆಕಾಂಕ್ಷೆಗಳಿವೆ. ಸುಂದರ ಬದುಕನ್ನು ರೂಪಿಸುವ ಕನಸುಗಳಿವೆ. ಆದರೆ ಆ ಕುಟುಂಬ ಇದೆಲ್ಲವನ್ನೂ ತನ್ನ ತೆಕ್ಕೆಯೊಳಗೆ ಮಾಚಲು "ನಿನಗೆ ವಯಸ್ಸಾಗಿದೆ ಮುಟ್ಟು ನಿಲ್ಲುವ ಕಾಲದಲ್ಲಿ ಮದುವೆಯಾಗುವುದು ಬೇಡವೆಂದು" ಅವಳನ್ನು ತಡೆಯುತ್ತಾರೆ. ಅಣ್ಣ ಅತ್ತಿಗೆಯರ ಮನಸ್ಸಿನ ಭದ್ರತೆಯನ್ನು ನೆನೆಯುತ್ತಾ "ಅಣ್ಣ ಕಾಗೆ ತನ್ನ ಗೂಡಿನಲ್ಲಿರೋ ಕೋಗಿಲೆ ಮೊಟ್ಟೆನಾ ತನ್ನದೂ ತನ್ನದೂ ಅಂತ ಕಾವು ಕೊಟ್ಟು, ಮರಿ ಮಾಡಿ, ಗುಟುಕು ಇಡುತ್ತಾ ಪ್ರೀತಿಸುತ್ತೆ, ಕೋಗಿಲೆ ಬಾಯಿ ಬಿಟ್ಟಾಗಷ್ಟೇ ಗೊತ್ತಾಗೋದು ಅದರ ನಿಜ ಬಣ್ಣ, ಅದು ತನ್ನದಲ್ಲ ಯಾವುದೋ ಪರಪುಟ್ಟ ಕೋಗಿಲೆಯೆಂದು" (ನೇಮಿಚಂದ್ರ, ೨೦೦೧(i) ಪು. ೩೦೧) ಎಂದು ಅಣ್ಣ ಅತ್ತಿಗೆಯ ಬಣ್ಣದ ಬದುಕನ್ನು ನಿರಾಕರಿಸಿ ಸ್ವತಂತ್ರಳಾಗಿ ಸರಳ ವಿವಾಹದೊಂದಿಗೆ ಹೊಸ ಜೀವನವನ್ನು ಪ್ರಾರಂಭಿಸುತ್ತಾಳೆ. ವಿವಾಹ ಹೆಣ್ಣಿನ ಬಾಳಿನಲ್ಲಿ ಮುಖ್ಯವಾದ ಘಟ್ಟ. ಅಂತಹ ಸಮಯದಲ್ಲಿ ಮನೆಯವರ ಪ್ರೋತ್ಸಾಹ, ಸಹಕಾರ ಅವಶ್ಯ, ಆಯ್ಕೆಗಳು ಅವಳಿಗೆ ಮಾತ್ರ ಸೀಮಿತವಾಗಿರುತ್ತವೆ. ಸುಳ್ಳು ಸಂಬಂಧಗಳನ್ನು ತೊರೆದು ಅಚಲ ಗಟ್ಟಿಯಾಗುತ್ತಾಳೆ. ಲೇಖಕಿಯು ಸ್ತ್ರೀಸ್ವಾತಂತ್ರದ ಕಡೆಗೆ ಧ್ವನಿ ಎತ್ತಿರುವುದನ್ನು ಇಲ್ಲಿ ಗಮನಿಸಬಹುದು.

೩೮-೩೯ ವಯಸ್ಸಿನ ಅಚಲ ತನ್ನ ಸಹೋದ್ಯೋಗಿ ಪ್ರಕಾಶನನ್ನು ಮದುವೆಯಾಗಲಿಚ್ಛಿಸಿದಾಗ ಅವಳ ಅಣ್ಣ-ಅತ್ತಿಗೆ ತೋರುವ ಅನಿರೀಕ್ಷಿತ ಅಮಾನುಷ ಪ್ರತಿಕ್ರಿಯೆಯು ತನ್ನ ಅವರ ಸಂಬಂಧದ ನಿಜವಾದ ಸ್ವರೂಪವನ್ನು ತೆರೆದು ತೋರಿಸುತ್ತದೆ ಎಂದು ವಿಮರ್ಶಕ ಜಿ.ಎಸ್.ಆಮೂರರು ಅಬಿಪ್ರಾಯ ಪಡುತ್ತಾರೆ.

ಪೀಠಿಕೆ, ಪ್ರಾರಂಭ, ಪುನಾರಂಭ ಎಂಬ ಮೂರು ಭಾಗಗಳಲ್ಲಿ ವಿಸ್ತರಿಸಿರುವ 'ಇತಿಹಾಸದಂಚಿನಲಿ' ಕತೆಯು ಬದುಕಿನ ಸಣ್ಣಪುಟ್ಟ ತೊಂದರೆಗಳನ್ನು ಬೃಹದಾಕಾರದ ಸಮಸ್ಯೆ ಎಂದು ಎದುರಿಸುವ ದಂಪತಿಗಳ ಕತೆಯಿದು. ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಹೆತ್ತವರ ಸಹಕಾರ ಅತ್ಯಗತ್ಯ. ಆದರೆ ತಾವು ಹೇಳಿದ ಮಾರ್ಗದಲ್ಲಿಯೇ ಮಕ್ಕಳು ನಡೆಯಬೇಕು ಎಂಬ ಹಠ ಒಳ್ಳೆಯದಲ್ಲ ಎಂಬುದನ್ನು ಕತೆಯು ಹೇಳುತ್ತದೆ. ಶಶಿ, ಮತ್ತು ಕಿರಣ್ ಉದ್ಯೋಗಸ್ಥರು. ಮಗ ರವಿಯು ತಮ್ಮಂತೆ ಸಾಫ್ಟ್‌ವೇರ್ ಇಂಜಿನಿಯರ್ ಆಗಬೇಕೆಂದು ಆತನ ಮೇಲೆ ತೀವ್ರ ಒತ್ತಡ ಹೇರುತ್ತಾರೆ. ಮಗನ ಭವಿಷ್ಯದ ಬಗ್ಗೆ ದಂಪತಿಗಳು ತುಂಬಾ ಆಸೆ, ಆಕಾಂಕ್ಷೆ, ನಿರೀಕ್ಷೆಗಳನ್ನಿಟ್ಟುಕೊಂಡಿರುತ್ತಾರೆ. ಆದರೆ ರವಿ ಇವರ ಯೋಚನೆಗಳಿಗೆ ವಿರುದ್ಧವಾಗಿ ವರ್ತಿಸುತ್ತಾನೆ. ತಾವು ಮಗನನ್ನು ಬೆಳೆಸುವ ಹಾದಿಯಲ್ಲಿ

ಎಲ್ಲಾದರೂ ತಪ್ಪಿದ್ದೇವೆಯೇ ಎಂದು ತಮ್ಮ ಬದುಕನ್ನೊಮ್ಮೆ ಪುನರಾವಲೋಕಿಸಿಕೊಳ್ಳುತ್ತಾರೆ. ಆದರೆ ಅದರ ಸುಳಿವು ಸಿಗುವುದಿಲ್ಲ. ಕಿರಣ್ ಮಗನ ಅನುಚಿತ ವರ್ತನೆಯಿಂದ, ಪರಿಸ್ಥಿತಿಯಿಂದ ಬೇರಾಗಲು ಆಶ್ರಮವಾಸಿಯಾಗುತ್ತಾನೆ. ಆದರೆ ಶಶಿ ಕುಟುಂಬವನ್ನು ತಿಳಿಯಾದ ಪರಿಸ್ಥಿತಿಗೆ ಮತ್ತೆ ತರಲು ಅಲ್ಲಿಯೇ ನೆಲೆಯೂರುತ್ತಾಳೆ.

ಲೇಖಕಿಯೇ ಹೇಳುವಂತೆ ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಜಪಾನ್ ಚೇತರಿಸಿಕೊಳ್ಳಲು ಡೆಮಿಂಗ್ ಅವರ ಸಿದ್ಧಾಂತಗಳನ್ನು ಅಳವಡಿಸಿಕೊಂಡಿತಂತೆ. ಹಾಗೆ ಭಾರತಕ್ಕೆ ಬರಲು ನಿರಾಕರಿಸಿದನಂತೆ. ಏಕೆಂದರೆ ಸಿದ್ಧಾಂತಗಳಿಗೆ ಜನ ತಯಾರಿರಬೇಕು. ಇಡೀ ದೇಶ ಸಿದ್ಧವಿರಬೇಕು. ಅದಿಲ್ಲದೆ ಪ್ರವಚನಗಳು ಪವಾಡ ಮಾಡಲಾರವು. ಹೀಗೆ "ಅವನ ಬದುಕಿನ ಆಗುಹೋಗುಗಳಿಗೆ ಅವನೂ ಜವಾಬ್ದಾರ. ದಾರಿ ತೋರಬಲ್ಲೆವು, ನಡೆಯಬೇಕಾದವನು ಅವನು ಮಾತ್ರ. ಅವನ ಕಾಲುಗಳ ಮೇಲೆ, ಮಡಿಲಲ್ಲಿ ಹೆಗಲಲ್ಲಿ ಹೊತ್ತೊಯ್ಯುವ ಕಾಲ ಆಯಿತಲ್ಲ. ಕಿರಣಾ, ಕೊಡುವ ಕೈ ದೊಡ್ಡದಿರಬಹುದು, ಪಡೆವ ಹಸ್ತಗಳ ಮಿತಿಗೇನು ಮಾಡುವುದು?" (ನೇಮಿಚಂದ್ರ, ೨೦೦೧(i), ಪು. ೭೦) ಎಂದು ಗಂಡನನ್ನು ಸಹಜ ಸ್ಥಿತಿಗೆ ತರಲು ಶಶಿ ಪ್ರಯತ್ನಿಸುತ್ತಾಳೆ.

'ಸಾವಿನತ್ತ ಒಂದು ಹೆಜ್ಜೆ' ಕಥೆಯಲ್ಲಿ ಪ್ರೇಮ ಸಫಲವಾಗದ ಕಾರಣ ಶಶಿಯು ಆತ್ಮಹತ್ಯೆಗೆ ಈಡಾಗುತ್ತಾಳೆ. ಈ ಸಾವಿನಿಂದ ಪಾಠ ಕಲಿತ ರವಿಯೂ ಸುಧಾಳ ನಿರಾಕರಣೆಯಲ್ಲಿಯೂ ಬದುಕಬೇಕೆಂಬ ಆತ್ಮವಿಶ್ವಾಸ ಹೊಂದುತ್ತಾನೆ. ಆತ್ಮಹತ್ಯೆಯ ಮೂಲಕ ಬದುಕಿನ ಅಂತ್ಯವನ್ನು ಒಪ್ಪದ ಲೇಖಕಿ ಜೀವನೋತ್ಸಾಹದ ಬದುಕನ್ನು ಇಚ್ಛಿಸುತ್ತಾರೆ. ಇದೊಂದು ತ್ರಿಕೋನ ಪ್ರೇಮಕತೆಯಾದರೂ ದುರಂತದಲ್ಲಿ ಸುಖಾಂತವನ್ನು ಕಾಣಬಹುದು. ಭಗ್ನ ಪ್ರೇಮದಿಂದಾಗಿ ಸಾವಿನತ್ತ ಹೆಜ್ಜೆ ಹಾಕಿದ ರವಿಯೂ ಮರಳಿ ಬದುಕಿನತ್ತ ಸಾಗುತ್ತಾನೆ. ಲೇಖಕಿಯೂ ಬದುಕಿನಲ್ಲಿ ಆತ್ಮವಿಶ್ವಾಸ, ನಿಸ್ವಾರ್ಥದ ಬದುಕಿಗೆ ಒತ್ತುಕೊಟ್ಟಂತೆ ತೋರುತ್ತದೆ. ತಾನು ಪ್ರೀತಿಸುವ ಸುಧಾ ಬೇರೊಬ್ಬರೊಂದಿಗೆ ವಿವಾಹವಾಗಲು ನಿಶ್ಚಯಿಸಿದಾಗ ರವಿಗೆ ಆತಂಕವಾಗುವುದಿಲ್ಲ. ಶಶಿಯ ಸಾವಿನಿಂದ ಅವನು ಕಲಿತ ಪಾಠ ಬದುಕಿನಲ್ಲಿ ಎಂಥಹುದೇ ಸಮಸ್ಯೆಗಳು ಎದುರಾದರೂ, ಸಮಸ್ಯೆಗೆ ವಿಮುಖನಾಗಿರದೇ ಧೈರ್ಯವಾಗಿ ಎದೆಗುಂದದೇ ಬದುಕನ್ನು ಸ್ವೀಕರಿಸಬೇಕು ಎಂಬ ಪಾಠವನ್ನು ಕಲಿಯುತ್ತಾನೆ. ಸುಧಾಳ ಮೇಲಿನ ಪ್ರೀತಿ ಯಾವಾಗಲೂ ಅವನ ಎದೆಯ ಆಳದಲ್ಲಿ ಶಾಶ್ವತವಾಗುಳಿಯುತ್ತದೆ. ಬದುಕಿನ ಬಗ್ಗೆ ಆತ ನಿರ್ಧರಿಸಿದ ನಿಲುವು ಮಾತ್ರ ಸಾಯುತ್ತದೆ.

ಶಶಿ ತಂದೆಯನ್ನು ಕಳಕೊಂಡು ಅನಾಥಳಾಗಿದ್ದಾಳೆ. ಬಿ.ಎಸ್ಸಿ. ವರೆಗೂ ಶಿಕ್ಷಣ ಹೊಂದಿದ ಶಶಿಗೆ ಬದುಕಿನ ಬಗ್ಗೆ ನಿರಾಸಕ್ತಿ. ಏಕೆಂದರೆ 'ಅಪ್ಪ ಇದ್ದಿದ್ದರೆ...' ಎಂದು ಭಾವುಕವಾಗಿ

ನುಡಿಯುತ್ತಾಳೆ. ಸಾವಿನ ಬಗ್ಗೆ ಸಿದ್ಧಾಂತವನ್ನು ಪ್ರಾರಂಭಿಸಿ ಬಿಡುತ್ತಾಳೆ. ಅವಳದೇ ಮಾತುಗಳಲ್ಲಿ ಹೇಳುವುದಾದರೆ. "ಬದುಕಲಾರದವರು ಸಾಯುತ್ತಾರೆ ಅನ್ನೋದು ಮೂರ್ಖತನ. ನಿಜವಾಗಿ ನೋಡಿದರೆ ಸಾಯಲಾರದವರಷ್ಟೆ ಬದುಕುತ್ತಾರೆ. ನೋಡು ಅತ್ತೆ ಬದುಕಿದ್ದಾಳೆ. ಮೂರು ಕಾಸು ಕೈಗೆ ಹಾಕದ ಮುಂಗೋಪಿ ಮಾವನೊಡನೆ. ಅಪ್ಪನನ್ನು ಕಳಕೊಂಡೂ ಅಮ್ಮ ಬದುಕಿದ್ದಾಳೆ... ಏನೋ ಸುಖ ದೋಚಿಕೊಳ್ಳಲು ನಿಧಿಯಾಗಿ ಕಾದಿದೆ ಎಂಬ ಕಾರಣಕ್ಕಲ್ಲ, ಕೇವಲ ಸಾಯಲಾರದೆ..." (ನೇಮಿಚಂದ್ರ, ೨೦೦೧(i), ಪು. ೧೭೯) ಬದುಕಿನ ನೋವುಗಳನ್ನು, ಸೋಲುಗಳನ್ನು, ಸವಾಲಿನಂತೆ ಸ್ವೀಕರಿಸಬೇಕು ಶಶಿ ಎಂದು ಭಾಷಣ ಬಿಗಿದಿದ್ದ ರವಿಯೇ ಸಾವಿಗೆ ಶರಣಾಗ ಬಯಸುತ್ತಾನೆ. ಬದುಕಿನಲ್ಲಿ ತುಂಬಾ ಆಶಾವಾದಿಯಾದ ರವಿ ಸುಧಾ ಅವನ ಪ್ರೇಮವನ್ನು ನಿರಾಕರಿಸಿದಳೆಂದು ಸಾವಿನ ಕಡೆಗೆ ಮುಖ ಮಾಡುತ್ತಾನೆ. ಶಶಿಯ ಸಾವು ರವಿಯನ್ನು ಆತಂಕಕ್ಕೀಡು ಮಾಡುತ್ತದೆ. "ಸಾಯುವ ಹಕ್ಕು ನಮಗಿರಬಹುದು. ಇತರರಿಗೆ ಇಷ್ಟು ನೋವುಣಿಸುವ ಹಕ್ಕೂ ಇದೆಯೇ?... ಎಲ್ಲವನ್ನು ತ್ಯಜಿಸಿ ನಾ ಸಾಯುತ್ತಿಲ್ಲ, ಎಲ್ಲವನ್ನು ಬಯಸಿ ಸಾಯುತ್ತಿರುವೆ" (ಅದೇ, ಪು. ೧೮೮) ಎನ್ನುತ್ತಾನೆ. ಬದುಕಿನಲ್ಲಿ ಅಂದುಕೊಂಡದ್ದು ಆಗಲಾರದಾಗ, ಬಯಸಿದ್ದು ಸಿಗದಾಗ ಬದುಕು ನಿರಾಕರಣೆ ಮಾಡುವುದು ಸರಿಯಲ್ಲ, ಬದುಕಿನಲ್ಲಿ ಪ್ರೇಮ, ಮದುವೆ ನಿರಾಕರಣೆಯಾದರೆ, ಜೀವನವನ್ನೇ ನಿರಾಕರಿಸಬಾರದು ಎಂದು ಲೇಖಕಿ ಬದುಕಿನ ಬಗ್ಗೆ ಮಹತ್ವಾಕಾಂಕ್ಷೆ ವ್ಯಕ್ತಪಡಿಸಿದ್ದಾರೆ.

'ನನ್ನೆದೆಯ ಕದನದಲಿ' ಕತೆಯು ಗಂಡನ ಅತ್ಯಾಚಾರದ ಬದುಕನ್ನು ಕಂಡು, ತಾನು ಅತ್ಯಾಚಾರಿಯ ಹೆಂಡತಿಯಾಗಲಾರದೆ ಕುಟುಂಬದಿಂದ ಹೊರ ಹೋಗುವ ಸ್ತ್ರೀಯ ಕತೆಯಾಗಿದೆ. ಗಂಡನು ವ್ಯಭಿಚಾರ ಕ್ರಿಯೆಯಲ್ಲಿ ತೊಡಗಿದಾಗ ಅವಳ ಮನಸ್ಸಿನಲ್ಲಾಗುವ ಗೊಂದಲವನ್ನು ಕತೆಗಾರ್ತಿ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. "ಪದತಲದಲ್ಲೇ ನೆಲ ಬಾಯಿ ಬಿಟ್ಟಿತ್ತು. ಕಣ್ಣೆದುರೇ ಹೆಣವಾದ ಕನಸುಗಳು". ಕಿರಣನನ್ನು ನೆಲದಲ್ಲಿ ಹೂತು ಹಾಕುವ ಆಕ್ರೋಶ ಅವಳ ಕಣ್ಣುಗಳಲ್ಲಿ ಕಾಣುತ್ತದೆ. ಗಂಡನನ್ನು ಅನುಸರಿಸಿ ಆದರ್ಶ ಸತಿಯಾಗಿ ಬದುಕುವುದು ಅಪವಾದವೆನಿಸುತ್ತದೆ. ಅದಕ್ಕೆ ಲೇಖಕಿಯು ಈ ರೀತಿ ವಿವರಿಸುತ್ತಾರೆ. "ಗಂಡನನ್ನು ಸೂಳೆ ಮನೆಗೆ ಹೊತ್ತೊಯ್ದು ಕನ್ನಗಿಯರ ನಾಡಿನಲ್ಲಿ, ಸವತಿಯರ ನಡುವೆಯೂ ಪತಿ ಪರಮೇಶ್ವರನೆಂದು ಪೂಜಿಸುವ ಪುಣ್ಯಭೂಮಿಯಲ್ಲಿ, ನನಗೆ ಕ್ಷಮೆ ಇರುತ್ತದೆ"(ನೇಮಿಚಂದ್ರ, ೨೦೦೧(i), ಪು.೭೬). ಗಂಡನ ಯಾವುದೇ ಕಾರ್ಯಕ್ಕೂ ಹೆಂಡತಿಯ ಬೆಂಬಲ ಬೇಕು. ಅಲ್ಲದೆ ಎಂತಹುದೇ ದುಷ್ಟ ಕೆಲಸಕ್ಕೂ ಅವಳು ಅವನನ್ನು ಸಹಕರಿಸಬೇಕು. ಆಗ ಅವಳು ಸಹಧರ್ಮಿಣಿಯಾಗುತ್ತಾಳೆ. ಈ ಸಾಂಪ್ರದಾಯಿಕ ನಡವಳಿಕೆಗೆ ವಿರೋಧವೆಂಬಂತೆ ಈ ಕತೆಯ ನಾಯಕಿ ಮಿಹಿಕಾ ಗಂಡನನ್ನು ವಿರೋಧಿಸುತ್ತಾಳೆ. ಹೀಗೆ ವಿರೋಧಿಸುವ ಇಲ್ಲವೆ ಪ್ರಶ್ನಿಸುವ ಪ್ರಸಂಗಗಳು ಅವಳ ಜೀವನದಲ್ಲಿ ಬಂದರೂ ಆಕೆಯ ಹೆತ್ತವರು

ಅವಳನ್ನು ನಿಯಂತ್ರಿಸುತ್ತಾರೆ. "ನಾನೆಂದೂ ನಾನಾಗಿ ನಾನೊಬ್ಬಳೇ ಯಾವ ನಿರ್ಧಾರವನ್ನೂ ತೆಗೆದುಕೊಂಡದ್ದಿಲ್ಲ. ನನ್ನ ಓದು, ಡಿಗ್ರಿ, ಕೈಹಿಡಿದ ಗಂಡ ಎಲ್ಲವೂ ಇತರರ ಆಯ್ಕೆಯಾಗಿತ್ತು, ನನ್ನ ಅಭ್ಯಂತರವಿರಲಿಲ್ಲ. ನನ್ನ ನಿರ್ಧಾರಗಳ ಬಗ್ಗೆ ವಿಶ್ವಾಸ ಇರಲಿಲ್ಲವೋ, ಅಂಥಾ ಅವಕಾಶಗಳಿರಲಿಲ್ಲವೋ, ಅನಿವಾರ್ಯಗಳಿರಲಿಲ್ಲವೋ ಗೊತ್ತಿಲ್ಲ. ಆದರೆ ಇಂದು, ಇದು ನನ್ನೊಬ್ಬಳ ನಿರ್ಣಯ"(ನೇಮಿಚಂದ್ರ, ೨೦೦೧(i), ಪುಟ ೮೪). ಸ್ತ್ರೀಯ ಎದೆಯ ಬಡಿತಕ್ಕೊಂದು ದನಿ ಬೇಕು. ಆ ದನಿಯು ಪರಿಸ್ಥಿತಿಯನ್ನು ಎದುರಿಸಿ ಆಸ್ಫೋಟಿಸಬೇಕು ಎಂಬ ಆಶಯ ಈ ಕತೆಯಲ್ಲಿದೆ.

ಹೀಗೆ ಆದುನಿಕ ಮಹಿಳಾ ಪ್ರಜ್ಞೆಯು ವಿವಿಧ ನೆಲೆಗಳಲ್ಲಿ ನೇಮಿಚಂದ್ರ ಅವರ ಕತೆಗಳಲ್ಲಿ ಅಭಿವ್ಯಕ್ತವಾಗಿದೆ. ಸಾಹಿತ್ಯ ಸಂದರ್ಭದಲ್ಲಿ ನವೋದಯ ಕಾಲಘಟ್ಟದಿಂದಲೇ ನಮ್ಮಲ್ಲಿ ಆಧುನಿಕವೆನ್ನಬಹುದಾದ ವಿಚಾರಗಳು ಪ್ರತಿಪಾದಿತವಾಗತೊಡಗಿವೆ. ಅವುಗಳಲ್ಲಿ ಪುರುಷರ ಅಭಿವ್ಯಕ್ತಿಯೂ ಇದೆ, ಸ್ತ್ರೀಯರ ಅಭಿವ್ಯಕ್ತಿಯೂ ಇದೆ. ನವೋದಯ ಸಂದರ್ಭದಲ್ಲಿ ಸ್ತ್ರೀ ಶಿಕ್ಷಣ, ವಿಧವಾ ವಿವಾಹದಂತಹ ವಿಚಾರಗಳು ಒಂದು ರೀತಿಯ ಸುಧಾರಣಾವಾದಿ ನಿಲುವಿನಲ್ಲಿ ಅಭಿವ್ಯಕ್ತಗೊಂಡವು. ಆರಂಭ ಘಟ್ಟದ ನಮ್ಮ ಕಾದಂಬರಿಗಳು ಇದಕ್ಕೆ ಸೂಕ್ತ ಉದಾಹರಣೆಗಳಾಗಿ ನಿಲ್ಲುತ್ತವೆ. ಮುಂದೆ ವೇಶ್ಯಾ ಸಮಸ್ಯೆಯು ಸಾಹಿತ್ಯದಲ್ಲಿ ಪ್ರವೇಶ ಪಡೆಯಿತು. ಪ್ರಗತಿಶೀಲ ಕಾಲಘಟ್ಟದಲ್ಲಿ ಅದರೊಂದಿಗೆ ಲೈಂಗಿಕತೆಯ ವಿಚಾರಗಳು ಪ್ರತಿಪಾದಿತವಾಗತೊಡಗಿದವು. ನವ್ಯ ಸಂದರ್ಭದಲ್ಲಿ ಮಹಿಳಾ ಪ್ರಜ್ಞೆಯು ಆತ್ಮಶೋಧಕ್ಕೆ ಒಳಗಾಯಿತು. ನವ್ಯ ಕಾಲಘಟ್ಟದಲ್ಲಿ ಆಧುನಿಕ ರೀತಿಯಲ್ಲಿ ಬರೆಯುತ್ತಿದ್ದ ಕೆಲವು ಲೇಖಕಿಯರಿಗೆ ನವ್ಯೋತ್ತರದ ದಲಿತ ಬಂಡಾಯ ಚಳುವಳಿಗಳು ಹೊಸ ಹುರುಪನ್ನು ನೀಡಿದವು. ಜೊತೆಗೆ ಈಚಿನ ಸ್ತ್ರೀವಾದಿ ವಿಚಾರಧಾರೆಗಳು ಸೇರಿಕೊಂಡು ಸಾಹಿತ್ಯದಲ್ಲಿ ಇಂದು ಮಹಿಳಾ ಪ್ರಜ್ಞೆಯೆಂಬುದು ಹೆಚ್ಚು ನಿಖರತೆಯನ್ನು ಪಡೆದುಕೊಂಡಿದೆ. ಹಾಗಾಗಿ ಇವತ್ತಿನ ಮಹಿಳಾ ಪ್ರಜ್ಞೆ ಎಂಬುದು ಕೇವಲ ಆಧುನಿಕವಷ್ಟೇ ಅಲ್ಲದೆ ಸಮಕಾಲೀನವೂ ಹೌದು. ಅದು ಪರಂಪರೆ ಮತ್ತು ಆಧುನಿಕತೆಗಳ ನಡುವಿನ ಸಂಘರ್ಷ ಹಾಗೂ ಸಮನ್ವಯಗಳೆರಡನ್ನೂ ಒಳಗೊಂಡ ಮಹಿಳಾ ಪ್ರಜ್ಞೆ. ಪ್ರಸ್ತುತ ನೇಮಿಚಂದ್ರ ಅವರು ತಮ್ಮ ಕತೆಗಳ ಮೂಲಕ ಅಭಿವ್ಯಕ್ತಿಸುವ ಮಹಿಳಾ ಪ್ರಜ್ಞೆಯು ಅಂತಹುದೇ ಆಗಿದ್ದು ಗಮನ ಸೆಳೆಯುತ್ತದೆ.

ಅಧ್ಯಾಯ-೫

ಸಮಾಪನ

ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಗಳಿಗೆ ಒಂದು ಪರಂಪರೆ ಇದೆ. ಜನಪದ ಸಾಹಿತ್ಯದಲ್ಲಂತೂ ಮಹಿಳೆ ಮನಬಿಚ್ಚಿ ಮಾತನಾಡಿದ್ದಾಳೆ. ಆದರೆ ಮಹಿಳಾ ಸಂವೇದನೆ, ಮಹಿಳಾ ಪ್ರಜ್ಞೆ ಎಂಬಿವುಗಳು ಅಧ್ಯಯನ ಕ್ರಮ ರೂಪುಗೊಂಡ ನಂತರದ ಪರಿಭಾಷೆ-ಪರಿಕಲ್ಪನೆಗಳು. ಆಧುನಿಕ ವಚನ ಚಳುವಳಿಯ ಕಾಲದಲ್ಲೇ ಸ್ತ್ರೀ ಸಂವೇದನೆಯ ವಿಶಿಷ್ಟ ಅಭಿವ್ಯಕ್ತಿ ನಮ್ಮ ಸಾಹಿತ್ಯ ಕೃತಿಗಳಲ್ಲಿ ಪ್ರಾರಂಭವಾದುದು. ಆಧುನಿಕ ಸಾಹಿತ್ಯದ ಸಂದರ್ಭದಲ್ಲಿ ನವೋದಯ ಕಾಲದಿಂದಲೇ ಈ ತೆರನಾದ ಪ್ರಜ್ಞೆ-ಸಂವೇದನೆಗಳನ್ನು ನಾವು ಗುರುತಿಸಬಹುದಾಗಿದೆ. ನಂತರದ ಪ್ರಗತಿಶೀಲ, ನವ್ಯ, ನವ್ಯೋತ್ತರ ಸಾಹಿತ್ಯ ಪಂಥಗಳಲ್ಲಿ ಅದು ಇನ್ನಷ್ಟು ನಿಖರತೆಯನ್ನು ಪಡೆದುಕೊಂಡಿತು. ಪ್ರಸ್ತುತ ನೇಮಿಚಂದ್ರ ಅವರು ನವ್ಯೋತ್ತರ ಸಂದರ್ಭದ ಬರಹಗಾರ್ತಿಯರಲ್ಲಿ ಪ್ರಮುಖರು.

ನವ್ಯ ಸಂದರ್ಭದ ಬರವಣಿಗೆಯನ್ನು ಮೈಗೂಡಿಸಿಕೊಂಡಿರುವ ನೇಮಿಚಂದ್ರರ ದನಿ ವೀಣಾ ನಂತರ ಬಂದ ಎಲ್ಲಾ ಲೇಖಕಿಯರಿಗಿಂತ ಹೆಚ್ಚು ಹೊಸತಾಗಿ, ಸ್ಪಷ್ಟವಾಗಿ ಕೇಳಿಬರುತ್ತದೆ. ಹೊಸ ಸಾಮಾಜಿಕ ಸಂದರ್ಭದಲ್ಲಿ ನೈತಿಕತೆಯ ಪ್ರಜ್ಞೆಯನ್ನು ಮುಚ್ಚು ಮರೆಯಿಲ್ಲದೆ ಎದುರಿಸುವ ಮೂಲಕ ಈ ಕತೆಗಾರ್ತಿ ತಮ್ಮ ವೈಶಿಷ್ಟ್ಯವನ್ನು ಗಳಿಸಿಕೊಂಡಿದ್ದಾರೆ. ಸಹಜ ಪ್ರತಿಭೆಯುಳ್ಳ ಈ ಲೇಖಕಿ ಕನ್ನಡಕ್ಕೆ ಉತ್ತಮ ಕತೆಗಳನ್ನು ನೀಡಿದ್ದಾರೆ.

ನೇಮಿಚಂದ್ರ ಕನ್ನಡದ ಹೊಸ ತಲೆಮಾರಿನ ಕತೆಗಾರ್ತಿಯಾಗಿ ಸ್ತ್ರೀವಾದಿ ಚಿಂತನೆಯ ಪ್ರತಿಪಾದಕಿಯಂತೆ ತಮ್ಮ ಕತೆಗಳನ್ನು ಸ್ಪಷ್ಟವಾಗಿ ರಚಿಸಿದ್ದಾರೆ. ನೇಮಿಚಂದ್ರರ ಕತೆಗಳ ನಾಯಕಿಯರು ಮಧ್ಯಮ ವರ್ಗದ ಶಿಕ್ಷಿತ, ಸಂಪಾದಿಸುವ ಹೆಣ್ಣುಗಳಾದ್ದರಿಂದ ಅವರಿಗೆ ಬದುಕನ್ನು ತರ್ಕಬದ್ಧವಾಗಿ ನೋಡುವುದು ಅನಿವಾರ್ಯವಾಗುತ್ತದೆ. "ನನ್ನದಲ್ಲದ ಕತೆಯ ಸರೂ", "ಹೊಸ ಹುಟ್ಟು ಕತೆಯ ಶಶಿ", "ಕೆಂಪು ಕಲಕಿದ ನೀರು" ಕತೆಯ ಶೀಲ ಇತ್ಯಾದಿ ಪಾತ್ರಗಳು ಇದಕ್ಕೆ ಮಾದರಿಯಾಗಿವೆ. ಪರಂಪರಾಗತ ಸ್ತ್ರೀ-ಪುರುಷ ಅಸಮಾನತೆಯಿಂದ ಸ್ತ್ರೀಯರಿಗೆ ಎದುರಾಗುವ

ಸಮಸ್ಯೆಗಳು ಮತ್ತು ಅವರು ಪ್ರಜ್ಞಾಪೂರ್ವಕವಾಗಿಯೇ ಪರಂಪರೆಯನ್ನು ಧಿಕ್ಕರಿಸಿ ಕೈಗೊಳ್ಳುವ ನಿಲುವುಗಳನ್ನು ನೇಮಿಚಂದ್ರ ಅವರು ಆಧುನಿಕ ಬದುಕಿನ ನೆಲೆಯಲ್ಲಿ ಚಿತ್ರಿಸುತ್ತಾರೆ. ಸ್ತ್ರೀವಾದಿ ಚಿಂತನೆಯಿಂದಲೇ ಮೂಡಿ ಬರುವ ಇವರ ಕತೆಗಳಲ್ಲಿ ಸ್ತ್ರೀಯರ ಸ್ಥಿತಿಗತಿಗಳು ಹಾಗೂ ಅವರಿಗೆ ಎದುರಾಗುವ ನಿರ್ಬಂಧಗಳ ಬಗ್ಗೆ ಸ್ಪಷ್ಟ ತಿಳುವಳಿಕೆ ಇದೆ. ಸ್ತ್ರೀವಾದಿ ಚಿಂತನೆಗಳನ್ನು ಪ್ರತಿನಿಧಿಸುವಂತಹ ಪಾತ್ರ ಸನ್ನಿವೇಶ, ಸಂಭಾಷಣೆಗಳನ್ನು ಅವರು ತಮ್ಮ ಕತೆಗಳಲ್ಲಿ ಬಿಂಬಿಸುತ್ತಾರೆ. ಸ್ತ್ರೀಪರ ಕಾಳಜಿಯ ದೃಷ್ಟಿಯಿಂದ ಮೆಚ್ಚಬೇಕಾದ ಕತೆಗಳನ್ನು ಬರೆದಿರುವ ನೇಮಿಚಂದ್ರ ಅವರಲ್ಲಿ ಹೊಸ ಹೊಸ ವಸ್ತುಗಳನ್ನು ಪ್ರಸ್ತುತಪಡಿಸುವ ಕಲೆಗಾರಿಕೆ ಇದೆ. ಉದಾಹರಣೆಗಾಗಿ "ನನ್ನದಲ್ಲದ ಬದುಕಿಗಾಗಿ", "ಸಾವಿನತ್ತ ಒಂದು ಹೆಜ್ಜೆ", "ಬದುಕು ಕಾಯುವುದಿಲ್ಲ", "ಹೊಸ ಹುಟ್ಟು" ಕಥೆಗಳನ್ನು ಹೆಸರಿಸಬಹುದು.

ನಗುವುದು, ಅಳುವುದು ಇತರರೊಂದಿಗೆ ತಮ್ಮ ಭಾವನೆಗಳು ಹಂಚಿಕೊಳ್ಳುವುದು ಪ್ರಕೃತಿಯ ಸಹಜ ಕ್ರಿಯೆಗಳು. ಬರೀ ಮೌನವಾಗಿರುವುದು ಸಹ್ಯವಾಗದ ಗುಣ. ಹೀಗೆ ಮೌನವಾಗಿದ್ದು ಅನುಭವಿಸುವ ವೇದನೆಗಳನ್ನು ಲೇಖಕಿಯು ತಮ್ಮ ಕತೆಗಳಲ್ಲಿ ದಟ್ಟವಾಗಿ ಚಿತ್ರಿಸಿದ್ದಾರೆ.

ಕೌಟುಂಬಿಕ ಬದುಕಿನ ಹಲವು ವೈರುಧ್ಯಗಳನ್ನು, ಪುರುಷ ಸಂಸ್ಕೃತಿಯ ಯಜಮಾನ್ಯವನ್ನು ಯಾವುದೇ ಹಿಂಜರಿಕೆಯಿಲ್ಲದೆ ಕತೆಗಳ ಮೂಲಕ ದಿಟ್ಟತನದಿಂದ ವಿವರಿಸುತ್ತಾರೆ. "ಕಪ್ಪುಮೋಡ ಬೆಳ್ಳಿ ಅಂಚು" ಕತೆಯಲ್ಲಿ ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಚರ್ಚೆ ನಡೆಸಿದ್ದಾರೆ. ಸ್ತ್ರೀ ಪುರುಷರ ಸಹಾನುಭೂತಿಯಿಂದ ಜೀವನ ನಿರ್ವಹಣೆ ಕ್ರಮವನ್ನು ವಿರೋಧಿಸುತ್ತಾಳೆ. ನಿನಗಾಗಿ, ನಿನ್ನ ಬದುಕಿಗಾಗಿ, ಜೀವನದ ಸೋಲುಗಳನ್ನೆಲ್ಲ ಸವಾಲುಗಳನ್ನಾಗಿ ಉತ್ತರಿಸುವ ಛಲಕ್ಕಾಗಿ, ಪಂಥಾಹ್ವಾನಕ್ಕಾಗಿ ಬದುಕಬೇಕೆಂಬುದು ಕತೆಯಲ್ಲಿ ಅಂತಿಮ ಸಾರಾಂಶವಾಗಿ ಮೂಡಿಬಂದಿದೆ. ಮಹಿಳೆ ತನ್ನ ಜೀವನದ ಪ್ರತಿಯೊಂದು ಹಂತದಲ್ಲಿಯೂ ಗಂಡಸಿಗೆ ಅವಲಂಬಿತಳಾಗಿರುವುದನ್ನು ವಿರೋಧಿಸುತ್ತಾಳೆ. ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುವಂತಹ ಕತೆಗಳನ್ನೇ ನೇಮಿಚಂದ್ರರು ರಚಿಸಿರುವುದು ಶ್ಲಾಘನೀಯ.

ಇವರು ಕತೆಗಳಲ್ಲದೆ ಇನ್ನಿತರ ಬರಹಗಳಾದ ಜೀವನ ಚರಿತ್ರೆ, ಅನುವಾದದಲ್ಲಿಯೂ ಕೂಡ ಸ್ತ್ರೀ ಪ್ರಜ್ಞೆ, ಸ್ತ್ರೀ ಸಂವೇದನೆ ಪ್ರಮುಖವಾಗಿರುವುದನ್ನು ಗಮನಿಸಬಹುದು. ಅದರಲ್ಲೂ ಸಾಧನೆಮಾಡಿದ ಅಸಾಮಾನ್ಯ ವ್ಯಕ್ತಿತ್ವ ಹೊಂದಿದ ಮಹಿಳೆಯರನ್ನು ಕೇಂದ್ರವಾಗಿಟ್ಟುಕೊಂಡು ಬರೆದಿರುವುದು ಪರಿಶೀಲಿಸಬೇಕಾದ ಅಂಶವಾಗಿದೆ. 'ಮೇರಿಕ್ಯೂರಿ' (ವಿಜ್ಞಾನ) ಈಡಾ ಸೋಫಿಯಾ ಸ್ಕಡರ್ (ವೈದ್ಯಕೀಯ), ಫ್ಲೇವಿಯಾ (ಕುಟುಂಬ) ಹೀಗೆ ಒಂದಲ್ಲ ಒಂದು ರಂಗದಲ್ಲಿ ಬೆಳಕು ಮೂಡಿಸಿದ ಮಹನೀಯ ಮಹಿಳೆಯರನ್ನು ಗುರುತಿಸಿ, ಅವರ ವ್ಯಕ್ತಿತ್ವವನ್ನು ಸಮಾಜಕ್ಕೆ ಪರಿಚಯಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸ್ತ್ರೀ ಪುರುಷರಿಬ್ಬರ ಅನನ್ಯತೆಗಳು ಸಮಾನ ನೆಲೆಯಲ್ಲಿ ಸ್ವೀಕೃತವಾಗುವಂಥ ಸಾಂಸ್ಕೃತಿಕ ಪರಿಸರದ ನಿರ್ಮಾಣಕ್ಕೆ ಇವರ ಕತೆಗಳು ದಾರಿ ಮಾಡಿಕೊಡುತ್ತವೆ.

ನೇಮಿಚಂದ್ರ ಅವರ ಕತೆಗಳ ಬಗೆಗೆ ವಿಮರ್ಶಕರು ವ್ಯಕ್ತಪಡಿಸುವ ಅಭಿಪ್ರಾಯಗಳು ಇಲ್ಲಿ ಪ್ರಸ್ತುತವೆನಿಸುತ್ತವೆ. "ಕನ್ನಡದ ಹೊಸ ಪೀಳಿಗೆಯ ಕತೆಗಾರ್ತಿಯರಲ್ಲಿ ಗಮನಾರ್ಹರಾದ ನೇಮಿಚಂದ್ರ ಅವರ ಬರವಣಿಗೆ ಹೆಣ್ಣಿನ ಮನಃಸ್ಥಿತಿ ಆಶೋತ್ತರಗಳ ಧ್ಯಾನವೇ ಆಗಿದ್ದರೂ ಅದೆಂದೂ ಸರಳವಾದ ಸ್ತ್ರೀಪರ-ಪುರುಷ ವಿರೋಧಿ ಘೋಷಣೆ ಅಥವಾ ತೀರ್ಮಾನಗಳಲ್ಲಿ ಸಡಿಲವಾಗಿಲ್ಲ. ಗಂಡು-ಹೆಣ್ಣಿನ ನಡುವಣ ಗೋಡೆಗಳು ಕರಗಿ ಅವರಿಬ್ಬರೂ ಪ್ರಬುದ್ಧವಾದ ಸಮಾನ ಸ್ತರದ ಬದುಕು ನಡೆಸಬೇಕಾದ ಕ್ಷಣಗಳಿಗಾಗಿ ಅವರು ಹುಡುಕುತ್ತಿದ್ದಾರೆ. ಈ ಸೃಜನಶೀಲ ಹುಡುಕಾಟವೇ ನೇಮಿಚಂದ್ರ ಅವರ ಬರವಣಿಗೆಯನ್ನು ಪ್ರಭಾವಿಸಿದೆ" ಎಂಬ ಟಿ.ಪಿ. ಅಶೋಕ ಅವರ ಮಾತುಗಳು ಲೇಖಕಿಯ ಕತೆಗಳನ್ನು ಅರ್ಥೈಯಿಸಿಕೊಳ್ಳುವಲ್ಲಿ ನೆರವಾಗುತ್ತವೆ.

ಇವರು ಸಂಪೂರ್ಣವಾಗಿ ಪುರುಷರನ್ನು ವಿರೋಧಿಸುವುದಿಲ್ಲ. ಶೋಷಣೆಯ ನೆಲೆಯನ್ನು ವಿರೋಧಿಸುತ್ತಾರೆಂಬ ಅಂಶವು ಲೇಖಕಿಯು ಸೃಷ್ಟಿಸಿದ "ನನ್ನದಲ್ಲದ ಬದುಕಿಗಾಗಿ" ಕತೆಯ ರಮೇಶ, "ಹೊಸ ಹುಟ್ಟು ಕತೆಯ ರವಿ", "ಮರಳಿ ಬದುಕಿಗೆ ಈ ಪಯಣ" ಕತೆಯ ರಿಪುದಮನ್ ಸಿಂಗ್ ಇತ್ಯಾದಿ ಪೋಷಕ ಪಾತ್ರಗಳ ಮೂಲಕ ಮನದಟ್ಟಾಗುತ್ತವೆ.

ನೇಮಿಚಂದ್ರ ಕಥನ ಶೈಲಿ, ಸಂಭಾಷಣಾ ವಿಧಾನವು ಕತೆಗಳಿಗೆ ಜೀವಂತಿಕೆಯನ್ನು ನೀಡಿವೆ. ಆತ್ಮಾರ್ಥಕ ನಿರೂಪಣಾ ವಿಧಾನವನ್ನು ಇವರ ಬಹುಪಾಲು ಕತೆಗಳಲ್ಲಿ ಗುರುತಿಸಬಹುದು. ದಾರ್ಶನಿಕರ, ಮಹನೀಯರ ಹೇಳಿಕೆ, ವಾಕ್ಯಗಳನ್ನು ಕತೆಯ ಶರೀರದಲ್ಲಿ ಇಲ್ಲವೆ ಅಂತ್ಯದಲ್ಲಿ ಬಳಸಿಕೊಳ್ಳುವುದರಿಂದ ಇವರ ಕತೆಗಳಿಗೆ ಓದುಗರ ಮೇಲೆ ಹೆಚ್ಚು ಪರಿಣಾಮವನ್ನು ಬೀರುತ್ತವೆ.

ಘಟನೆ ಇಲ್ಲವೆ ಪ್ರಕರಣವೊಂದರಿಂದ ಕತೆಗಳು ಪ್ರಾರಂಭವಾಗುವುದನ್ನು ಇವರ ಬಹುತೇಕ ಕತೆಗಳಲ್ಲಿ ಗುರುತಿಸಬಹುದು. ಕತೆಯ ಸಂಭಾಷಣೆಯಲ್ಲಿ ಸರಳತೆಯಿದೆ. ಹೇಳಬೇಕಾದುದನ್ನು ನೇರವಾಗಿ ಹೇಳುವ, ಹೊಸದುದರ ಕಡೆಗೆ ಮಿಡಿತ ಇರುವುದನ್ನು ಇವರ ಹಲವು ಕತೆಗಳ ಸಂಭಾಷಣೆಯಿಂದ ತಿಳಿಯಬಹುದು. ಲೈಂಗಿಕತೆಯ ವಿವರಗಳನ್ನು ತೀರ ಸೂಚ್ಯವಾಗಿ ಹೇಳಿಬಿಡುವ ಕುಶಲತೆಯನ್ನು ಕಾಣಬಹುದು.

ಪ್ರಸ್ತುತ ಅಧ್ಯಯನವು ನಿರ್ದಿಷ್ಟ ಮಿತಿಯೊಳಗಡೆ ಸಾಗಿದೆ. ನೇಮಿಚಂದ್ರ ಅವರ ಸಾಹಿತ್ಯವನ್ನು ಇನ್ನಷ್ಟು ವ್ಯಾಪಕ ಪರಿಪೇಕ್ಷದಿಂದ ಅಧ್ಯಯನಕ್ಕೊಳಪಡಿಸುವ ಸಾಧ್ಯತೆಯಿದೆ.

ಸೃಜನಶೀಲ ಬರಹಗಳಾದ ಕತೆ, ಕಾದಂಬರಿಗಳಲ್ಲದೆ, ಜೀವನಚರಿತ್ರೆ, ಪ್ರವಾಸ ಕಥನ, ಅನುವಾದ ಸಾಹಿತ್ಯವನ್ನು ವಿಶ್ಲೇಷಣೆಗೆ ಒಳಪಡಿಸಿ ಅಧ್ಯಯನ ಮಾಡುವ ಸಾಧ್ಯತೆಗಳಿವೆ.

ಸಮಕಾಲೀನ ಬರಹಗಾರ್ತಿಯರೊಂದಿಗೆ ನೇಮಿಚಂದ್ರರ ಸಾಹಿತ್ಯವನ್ನು ತೌಲನಿಕವಾಗಿ ಅಧ್ಯಯನ ಮಾಡಿದರೆ ಇನ್ನಷ್ಟು ಒಳನೋಟಗಳು ಪ್ರಾಪ್ತವಾಗುವ ಸಾಧ್ಯತೆಯಿದೆ. ಮುಂದಿನ ಅಧ್ಯಯನಕಾರರಿಗೆ

ಈ ಸಂಪ್ರಬಂಧವು ಓದಿನ ಹಲವು ಸೂಚನೆಗಳನ್ನು ನೀಡುವಲ್ಲಿ ಅನುವಾಗಿದೆ. ಅಲ್ಲದೆ ಅಧ್ಯಯನದ ಮಿತಿಯಿಂದಾಗಿ ಸ್ತ್ರೀವಾದಕ್ಕಿರುವ ಅನಂತ ಮಗ್ಗುಲುಗಳಿಂದ ಲೇಖಕಿಯ ಕತೆಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲು ಸಾಧ್ಯವಾಗಿಲ್ಲ.

ಅದೇನೆ ಇದ್ದರೂ ಸಮಗ್ರ ದೃಷ್ಟಿಕೋನದ ಮುಂದಿನ ಅಧ್ಯಯನಗಳಿಗೆ ಈ ಕಿರುಪ್ರಬಂಧ ಪ್ರೇರಕವಾಗುವುದೆಂಬ ನಿರೀಕ್ಷೆಯನ್ನು ಇಟ್ಟುಕೊಳ್ಳಲಾಗಿದೆ.

ಅನುಬಂಧ

೧. ನೇಮಿಚಂದ್ರರ ಬದುಕಿನ ಪ್ರಮುಖ ಘಟ್ಟಗಳು

೨. ಆಕರ ಗ್ರಂಥಗಳು

ನೇಮಿಚಂದ್ರರ ಬದುಕಿನ ಪ್ರಮುಖ ಘಟ್ಟಗಳು

ಜನನ	: ೧೬.೦೭.೧೯೫೯ (ಚಿತ್ರದುರ್ಗ)
ವಿದ್ಯಾಭ್ಯಾಸ	: ಬಿ.ಇ. (ಮೈಸೂರಿನ ಎನ್.ಐ.ಇ. ಸಂಸ್ಥೆಯಿಂದ) ಎಂ.ಎಸ್. (ಇಂಜಿನಿಯರಿಂಗ್), ಐ.ಐ.ಎಸ್., ಬೆಂಗಳೂರು
ವೃತ್ತಿ	: ಡೆಪ್ಯೂಟಿ ಜನರಲ್ ಮ್ಯಾನೇಜರ್ ಹೆಚ್.ಎ.ಎಲ್. (ಹೆಲಿಕ್ಯಾಪ್ಟರ್ ವಿನ್ಯಾಸ, ಆರ್ & ಡಿ ವಿಭಾಗ)
ಮೊದಲ ಕಥಾಸಂಕಲನ	: ನಮ್ಮ ಕನಸುಗಳಲ್ಲಿ ನೀವಿದ್ದೀರಿ (೧೯೮೫)
ಸಮಗ್ರ ಕಥೆಗಳು	: ಇಲ್ಲಿಯವರೆಗಿನ ನೇಮಿಚಂದ್ರರ ಕಥೆಗಳು (೨೦೦೧)
ಲಭಿಸಿದ ಪ್ರಶಸ್ತಿಗಳು	: ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (ಬೆಳಕಿನೊಂದು ಕಿರಣ, ಮೇರಿಕ್ಯೂರಿ, ಪೆರುವಿನ ಪವಿತ್ರ ಕಣಿವೆಯಲ್ಲಿ) (೨೦೦೮) ರತ್ನಮ್ಮ ಹೆಗ್ಗಡೆ ಪ್ರಶಸ್ತಿ (ಸಾಹಿತ್ಯ ಮತ್ತು ವಿಜ್ಞಾನ ಹಾಗೂ ಒಂದು ಕನಸಿನ ಪಯಣ) (೨೦೦೧) ಆರ್ಯಭಟ ಪ್ರಶಸ್ತಿ (ಮತ್ತೆ ಬರೆದ ಕತೆಗಳು) (೧೯೯೩) ಡಾ. ಹಾ.ಮಾ.ನಾಯಕ ಪ್ರಶಸ್ತಿ, ಕರ್ನಾಟಕ ಸಂಘ, ಶಿವಮೊಗ್ಗ (ಬದುಕು ಬದಲಿಸಬಹುದು) (೨೦೦೬) ಶಿವರಾಮ ಕಾರಂತ ಪುರಸ್ಕಾರ (ಪೆರುವಿನ ಪವಿತ್ರ ಕಣಿವೆಯಲ್ಲಿ) (೨೦೦೫) ಸಂದೇಶ ಪ್ರಶಸ್ತಿ, ಮಂಗಳೂರು, ಕಲಾಚೇತನ ಪ್ರಶಸ್ತಿ, ಗದಗ (ವಿಜ್ಞಾನ, ಸಾಹಿತ್ಯ ಹಾಗೂ ಮಹಿಳಾ ಅಧ್ಯಯನ ಬರಹಗಳು)

ಆಕರ ಗ್ರಂಥಗಳು

ಪ್ರಧಾನ ಆಕರಗಳು

ನೇಮಿಚಂದ್ರ (ಸಂ); ೧೯೮೮; **ಬೆಳಗೆರೆ ಜಾನಕಮ್ಮ ಬದುಕು-ಬರಹ (ಸಮಗ್ರ ಕವನ ಸಂಕಲನದೊಂದಿಗೆ)**; ಕರ್ನಾಟಕ ಲೇಖಕಿಯರ ಸಂಘ; ಬೆಂಗಳೂರು.

ನೇಮಿಚಂದ್ರ; ೧೯೮೫; **ನಮ್ಮ ಕನಸುಗಳಲ್ಲಿ** ನೀವಿದ್ದಿರಿ; ಐಬಿಎಚ್ ಪ್ರಕಾಶನ; ಬೆಂಗಳೂರು.

ನೇಮಿಚಂದ್ರ; ೧೯೯೨; **ಮತ್ತೆ ಬರೆದ ಕತೆಗಳು**; ಶ್ರೀ ಪ್ರಕಾಶನ; ಬೆಂಗಳೂರು.

ನೇಮಿಚಂದ್ರ; ೧೯೯೩; **ಸಾಹಿತ್ಯ ಮತ್ತು ವಿಜ್ಞಾನ**; ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು.

ನೇಮಿಚಂದ್ರ; ೧೯೯೫; **ಥಾಮಸ್ ಅಲ್ವಾ ಎಡಿಸನ್** (ಜೀವನ ಚರಿತ್ರೆ); ಕನ್ನಡ ಪುಸ್ತಕ ಪ್ರಾಧಿಕಾರ; ಬೆಂಗಳೂರು.

ನೇಮಿಚಂದ್ರ; ೧೯೯೯(i); **ಕಳೆಯಬೇಕಿದೆ ನಿಮ್ಮ ಜೊತೆಯಲಿ ಒಂದು ಶ್ಯಾಮಲ ಸಂಜೆ**; ಬೆಂಗಳೂರು ಮುದ್ರಣಾಲಯ; ಬೆಂಗಳೂರು.

ನೇಮಿಚಂದ್ರ (ಅನು); ಫ್ಲೇವಿಯಾ (ಮೂಲ); ೧೯೯೯(ii); **ನನ್ನ ಕತೆ... ನಮ್ಮ ಕತೆ**; ನೆಲಮನೆ ಪ್ರಕಾಶನ; ಶ್ರೀರಂಗಪಟ್ಟಣ.

ನೇಮಿಚಂದ್ರ; ೨೦೦೧(i); **ಇಲ್ಲಿಯವರೆಗಿನ ನೇಮಿಚಂದ್ರರ ಕಥೆಗಳು**; ಅಂಕಿತ ಪುಸ್ತಕ; ಬೆಂಗಳೂರು.

ನೇಮಿಚಂದ್ರ; ೨೦೦೧(ii); **ಮಹಿಳಾ ಅಧ್ಯಯನ**; ಅಂಕಿತ ಪ್ರಕಾಶನ; ಬೆಂಗಳೂರು.

ನೇಮಿಚಂದ್ರ; ಮೊ.ಮು.೨೦೦೫; **ಬದುಕು ಬದಲಿಸಬಹುದು**; ನವಕರ್ನಾಟಕ ಪ್ರಕಾಶನ; ಬೆಂಗಳೂರು.

ನೇಮಿಚಂದ್ರ (ಸಂ.); ೨೦೦೫; **ಮಹಿಳಾಲೋಕ**; ನವಕರ್ನಾಟಕ ಪ್ರಕಾಶನ; ಬೆಂಗಳೂರು.

ನೇಮಿಚಂದ್ರ; ೨೦೦೬(i); **ಬೆಳಕು ತಂದ ಜೀವ ಡಾ. ಈಡಾ ಸೋಫಿಯಾ ಸ್ಕಡರ್**; ಅಂಕಿತ ಪ್ರಕಾಶನ; ಬೆಂಗಳೂರು.

ನೇಮಿಚಂದ್ರ; ೨೦೦೬(ii); **ಬೆಳಕಿನೊಂದು ಕಿರಣ ಮೇರಿಕ್ಯೂರಿ**; ಅಂಕಿತ ಪ್ರಕಾಶನ; ಬೆಂಗಳೂರು.

ನೇಮಿಚಂದ್ರ; ೨೦೦೬(iii); **ಯಾದ್ ವಶೇಮ್**; ನವಕರ್ನಾಟಕ ಪ್ರಕಾಶನ; ಬೆಂಗಳೂರು.

ನೇಮಿಚಂದ್ರ (ಲೇ.); ೨೦೦೭ (iv); **ದುಡಿವ ಹಾದಿಯಲಿ ಜೊತೆಯಾಗಿ**; ನವಕರ್ನಾಟಕ ಪ್ರಕಾಶನ; ಬೆಂಗಳೂರು.

ನೇಮಿಚಂದ್ರ; ೨೦೦೮; **ಪೆರುವಿನ ಪವಿತ್ರ ಕಣಿವೆಯಲ್ಲಿ**; ನವಕರ್ನಾಟಕ ಪ್ರಕಾಶನ; ಬೆಂಗಳೂರು.

ಆನುಷಂಗಿಕ ಆಕರಗಳು

ಅರವಿಂದ ಮಾಲಗತ್ತಿ (ಸಂ.); ೨೦೦೪; **ಕನ್ನಡ ವಿಮರ್ಶೆಯ ಮಾರ್ಗ**; ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ; ಮೈಸೂರು.

ಆಮೂರ ಜಿ.ಎಸ್.; ೧೯೮೧; **ಸಮಕಾಲೀನ ಕತೆ ಕಾದಂಬರಿ : ಹೊಸ ಪ್ರಯೋಗಗಳು**; ಕನ್ನಡ ಸಾಹಿತ್ಯ ಪರಿಷತ್ತು; ಬೆಂಗಳೂರು.

ಆಮೂರ ಜಿ.ಎಸ್.; ೧೯೮೮; **ಅರ್ಥಲೋಕ**; ಸ್ನೇಹ ಪ್ರಕಾಶನ; ಬೆಂಗಳೂರು.

ಆಮೂರ ಜಿ.ಎಸ್. (ಸಂ.); ೧೯೯೯; **ಅವಳ ಕತೆಗಳು**; ಪ್ರಿಸಂ ಬುಕ್ಸ್ ಪ್ರೈ ಲಿ.; ಬೆಂಗಳೂರು.

ಆಮೂರ ಜಿ.ಎಸ್. (ಸಂ.); ೨೦೦೧; **ಸ್ವಾತಂತ್ರ್ಯೋತ್ತರ ಕನ್ನಡ ಕಥಾಲೋಕ**; ಅಂಕಿತ ಪ್ರಕಾಶನ; ಬೆಂಗಳೂರು.

ಆಮೂರ ಜಿ.ಎಸ್. (ಸಂ.); ೨೦೦೪; **ಸ್ವಾತಂತ್ರ್ಯೋತ್ತರ ಕನ್ನಡ ಕಥಾಲೋಕ**; ಅಂಕಿತ ಪುಸ್ತಕ; ಬೆಂಗಳೂರು.

ಆಮೂರ ಜಿ.ಎಸ್.; ೨೦೦೪; **ನಿಂದಹೆಜ್ಜೆ**; ಪ್ರಿಯದರ್ಶಿನಿ ಪ್ರಕಾಶನ; ಬೆಂಗಳೂರು.

ಆರ್ಯಾಂಬ ಪಟ್ಟಾಭಿ (ಸಂ.); ೨೦೦೪; **ಮಹಿಳಾ ಸಾಹಿತ್ಯ ಸಮೀಕ್ಷೆ**; ಸಂವಹನ; ಮೈಸೂರು.

ಕರೀಗೌಡ ಬೀಚನಹಳ್ಳಿ; ೨೦೦೩; **ಶತಮಾನದ ಸಣ್ಣಕತೆಗಳ ಸಮೀಕ್ಷೆ**; ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು.

ಕಾಳೇಗೌಡ ನಾಗಾವಾರ (ಸಂ.); ೨೦೦೨; **ಜೀವನ ಪ್ರೀತಿ**; ಕನ್ನಡ ಪುಸ್ತಕ ಪ್ರಾಧಿಕಾರ; ಬೆಂಗಳೂರು.

ಕೀರ್ತಿನಾಥ ಕುರ್ತಕೋಟಿ; ೨೦೦೨; **ಯುಗಧರ್ಮ ಹಾಗೂ ಸಾಹಿತ್ಯ ದರ್ಶನ**; ಮನೋಹರ ಗ್ರಂಥಮಾಲೆ; ಧಾರವಾಡ.

ಕೋದಂಡರಾಮ ಎನ್.ಕೆ.; ೧೯೯೬; **ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ**; ಗಾಯತ್ರಿ ಸ್ಮಾರಕ ಗ್ರಂಥಮಾಲೆ; ಮೈಸೂರು.

ಗಿರಿಜಾಶಾಸ್ತ್ರಿ; ೨೦೦೦; **ಆಧುನಿಕ ಸಣ್ಣಕತೆಗಳು ಒಂದು ಅಧ್ಯಯನ**; ಕನ್ನಡ ವಿಶ್ವವಿದ್ಯಾಲಯ; ಹಂಪಿ

ಧರಣೀದೇವಿ ಮಾಲಗತ್ತಿ; ೧೯೯೮; **ಸ್ತ್ರೀವಾದ ಮತ್ತು ಭಾರತೀಯತೆ**; ಚೇತನ ಬುಕ್ ಹೌಸ್; ಮೈಸೂರು.

ದಿವಾಕರ ಎಸ್. (ಸಂ.); ೧೯೯೭; **ಶತಮಾನದ ಸಣ್ಣ ಕತೆಗಳು**; ಪ್ರಿಸಂ ಬುಕ್ಸ್ ಪ್ರೈ. ಲಿ.; ಬೆಂಗಳೂರು.

ಬರಗೂರು ರಾಮಚಂದ್ರಪ್ಪ (ಸಂ.); ೧೯೯೨; **ಕನ್ನಡ ಸಾಹಿತ್ಯ ಸಮೀಕ್ಷೆ**; ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು.

ಬರಗೂರು ರಾಮಚಂದ್ರಪ್ಪ (ಪ್ರ.ಸಂ.); ೧೯೯೩; **ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ**; ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು.

ಬಸವರಾಜ ಸಬರದ; ೧೯೯೦; **ಹೊಸದಿಕ್ಕು**; ಪಲ್ಲವಿ ಪ್ರಕಾಶನ; ಬೀದರ.

ಮಲ್ಲಿಕಾ ಘಂಟಿ; ೧೯೯೪; **ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ**; ಯುವಲೋಕ ಪ್ರಕಾಶನ; ಧಾರವಾಡ.

ಮೀರಾ ಎಲ್.ಜಿ.; ೨೦೦೪; **ಸ್ತ್ರೀಸಂವೇದನೆಯಲ್ಲಿ ಕನ್ನಡ ಕಥನ**; ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್; ಬೆಂಗಳೂರು.

ರಹಮತ್ ತರೀಕೆರೆ (ಸಂ); ೧೯೯೩; **ಸಾಹಿತ್ಯ ವಿಮರ್ಶೆ**; ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು.

ರೋಹಿಣಿ ಬಿ.ಎಂ.; ೨೦೦೪; **ಸ್ತ್ರೀ ಭಿನ್ನ ಮುಖಗಳು**; ಕರಾವಳಿ ಲೇಖಕಿಯರ ವೈಚಾರಿಕ ಸಂಘ; ಕಾಸರಗೋಡು.

ವರದರಾಜ ಹುಯಿಲಗೋಳ; ೧೯೭೬; **ದುರ್ಗಸಿಂಹನ ಪಂಚತಂತ್ರ ಸಮೀಕ್ಷೆ**; ಸಾಹಿತ್ಯ ಭಂಡಾರ; ಹುಬ್ಬಳ್ಳಿ.

ವಿಜಯಾ ದಬ್ಬೆ; ೧೯೮೯; **ಮಹಿಳೆ, ಸಾಹಿತ್ಯ, ಸಮಾಜ**; ರಚನಾ ಪ್ರಕಾಶನ; ಮೈಸೂರು.

ವೀಣಾ ಶಾಂತೇಶ್ವರಿ; ೧೯೮೪; **ಹಸಿವು**; ಚಂದ್ರನಾಥ ಪ್ರಕಾಶನ; ಧಾರವಾಡ.

ವೈದೇಹಿ; ೨೦೦೬; **ಅಲೆಗಳಲ್ಲಿ ಅಂತರಂಗ (ಸಮಗ್ರ ಕಥೆಗಳು)**; ಅಕ್ಷರ ಪ್ರಕಾಶನ; ಹೆಗ್ಗೋಡು.

ಶ್ರೀಮತಿ ಎಚ್.ಎಸ್. (ಸಂ.); ೨೦೦೬; **ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ**; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ; ಹಂಪಿ.

ಶೇಷಗಿರಿರಾವ್ ಎಲ್.ಎಸ್.; ೧೯೯೯; **ಹೊಸಗನ್ನಡ ಸಾಹಿತ್ಯ ಚರಿತ್ರೆ**; ಅಂಕಿತ ಪುಸ್ತಕ; ಬೆಂಗಳೂರು.

ಸಾರಾ ಅಬೂಬಕ್ಕರ್; ೨೦೦೭; **ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ**; ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ; ಹಂಪಿ.

ಹನುಮಂತಯ್ಯ ಎಲ್.; ೧೯೯೯; **ಕಥಾಕಥನ (ಬಂಡಾಯ ಕತೆಗಳಲ್ಲಿ ದಲಿತ ಪ್ರಜ್ಞೆ)**; ಸಿವಿಜಿ ಪಬ್ಲಿಕೇಷನ್ಸ್; ಬೆಂಗಳೂರು.

ಹೆಗಡೆ ಎಂ.ಜಿ. (ಸಂ.); ೧೯೯೬; **ಸಾಹಿತ್ಯ ವಿಮರ್ಶೆ ೧೯೯೪**; ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು.

ಹೆಗಡೆ ಜಿ.ಎಂ. (ಸಂ.); ೧೯೯೯; **ಸಾಹಿತ್ಯ ವಿಮರ್ಶೆ ೧೯೯೮**; ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು.

AKSHARA GRANTHALAYA
ACC.NO. 129972